

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 3 ಶನಿವಾರ 2022

ಸಂಪುಟ: 43 | ಸಂಚಿಕೆ: 138 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಚುನಾವಣೆ ಬಗ್ಗೆ ನಿಮ್ಮಲ್ಲಿ ಅತೀ ಆತ್ಮವಿಶ್ವಾಸವಿದೆ; ವಾಸ್ತವ ಸ್ಥಿತಿ ನಮಗೆ ತಿಳಿದಿದೆ...!

ಮೋದಿ ಅತೃಪ್ತಿ



- ಮಂಗಳೂರು ಭೇಟಿ ವೇಳೆ ಕೋರ್ ಕಮಿಟಿ ಸದಸ್ಯರೊಂದಿಗೆ ಚರ್ಚೆ;ಅನೇಕ ಸಲಹೆ ಸೂಚನೆ
- ಪ್ರತಿ ಬೂತ್‌ಗೆ ಕನಿಷ್ಠ 20 ಬಿಜೆಪಿ ಕಾರ್ಯಕರ್ತರ ಗುರುತಿಸಿದ್ದೀರಾ; ಪ್ರಧಾನಿ ಪ್ರಶ್ನೆ

ಬೆಂಗಳೂರು, ಸೆ.2(ಕೆಎಂಶಿ) –ಮುಂಬರುವ ವಿಧಾನಸಭೆ ಚುನಾವಣೆ ಕುರಿತಂತೆ ಪಕ್ಷ ಮತ್ತು ಸರ್ಕಾರ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಒಂದು ದಿನದ ರಾಜ್ಯ ಪ್ರವಾಸಕ್ಕೆ ಮಂಗಳೂರಿಗೆ ಆಗಮಿಸಿದ್ದ ಪ್ರಧಾನಿಯವರು ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ನಂತರ ರಾಜ್ಯ ಬಿಜೆಪಿಯ ಕೋರ್ ಕಮಿಟಿ ಸದಸ್ಯರಿಂದ ಚುನಾವಣಾ ಸಿದ್ಧತೆಯ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ, ಸಲಹೆ ಸೂಚನೆಗಳನ್ನೂ ನೀಡಿದ್ದಾರೆ.

ಪ್ರಧಾನಿ ಅವರು ಮಾತನಾಡುವ ಮುನ್ನ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಂಬರುವ ಚುನಾವಣೆ ಸಿದ್ಧತೆ ಕುರಿತಂತೆ 8 ನಿಮಿಷದ ಪ್ರಾತ್ಯಕ್ಷತೆಯನ್ನು ತೋರಿಸಿ ರಾಜ್ಯದ 120 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಭರವಸೆ ನೀಡಿದ್ದಾರೆ. ಚುನಾವಣೆ ವೇಳೆಗೆ 150 ಕ್ಷೇತ್ರಗಳಿಗೆ ವಿಸ್ತರಣೆ ಆಗುವ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರದಿಂದ ಚುನಾವಣೆ ಸಿದ್ಧತೆ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 5 ನಿಮಿಷದ ಪ್ರಾತ್ಯಕ್ಷತೆ ಮೂಲಕ ಮಾಹಿತಿ ನೀಡಿದ್ದಾರೆ. ಸರ್ಕಾರದ ಮಹತ್ವದ ವಿದ್ಯಾನಿಧಿ ಯೋಜನೆಯ ಮೂಲಕ ಯುವ ಸಮುದಾಯ ಆಕರ್ಷಿಸಲಾಗುವುದು. ▶ 8ನೇ ಪುಟಕ್ಕೆ



ಮಂಗಳೂರಲ್ಲಿ 3800 ಕೋಟಿಯ ಅಭಿವೃದ್ಧಿ ಯೋಜನೆಗೆ ಪ್ರಧಾನಿ ಚಾಲನೆ

ರಾಜ್ಯಕ್ಕೆ ಡಬಲ್ ಇಂಜಿನ್ ಧಮಾಕ

- ಮೂಲ ಸೌಕರ್ಯ ಕ್ಷೇತ್ರದ ಪ್ರಗತಿ ಬಗ್ಗೆ ಪ್ರಧಾನಿ ತೃಪ್ತಿ
- ಸಾಗರ ಮಾಲಾ, ರಾಷ್ಟ್ರೀಯ ಹೆದ್ದಾರಿ, ರೈಲ್ವೇ ಹಳಿ ವಿದ್ಯುದ್ದೀಕರಣ ಸೇರಿ ಸಾಕಷ್ಟು ಸಾಧನೆ

ಬೆಂಗಳೂರು, ಸೆ.2(ಕೆಎಂಶಿ)–ಕೇಂದ್ರ ಹಾಗೂ ರಾಜ್ಯದಲ್ಲಿರುವ ಡಬಲ್ ಇಂಜಿನ್ ಸರ್ಕಾರದ ಮೂಲಕ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮಂಗಳೂರಿನಲ್ಲಿ 3800 ಕೋಟಿ ರೂ. ಮೊತ್ತದ 8 ಯೋಜನೆಗಳ ಲೋಕಾರ್ಪಣೆ ಹಾಗೂ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ಕಳೆದ ಎಂಟು ವರ್ಷಗಳಲ್ಲಿ ಮೂಲಸೌಕರ್ಯ ಕ್ಷೇತ್ರದಲ್ಲಿ ಮಾಡಲಾಗಿರುವ ಪ್ರಗತಿಯಲ್ಲಿ ದೊಡ್ಡ ಪಾಲು ಕರ್ನಾಟಕಕ್ಕೆ ಲಭಿಸಿದೆ ಎಂದಿದ್ದಾರೆ. ಸಾಗರ ಮಾಲಾ ಯೋಜನೆ, ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ, ರೈಲ್ವೇ ಹಳಿಗಳ ವಿದ್ಯುದ್ದೀಕರಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಾಲ್ಕು ಪಟ್ಟು ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗಿದೆ.

ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಮನೆಗಳಿಗೆ ನೇರವಾಗಿ ಕುಡಿಯುವ ನೀರು ಪೂರೈಕೆ ಮಾಡಲಾಗಿದೆ. ಪ್ರಧಾನಮಂತ್ರಿ ಆಯುಷ್ಮಾನ್ ಯೋಜನೆಯಡಿ 30 ಲಕ್ಷ ಫಲಾನುಭವಿಗಳಿಗೆ 4 ಸಾವಿರ ಕೋಟಿ ರೂ. ಮೊತ್ತದ ವೈದ್ಯಕೀಯ ಸೇವೆಯನ್ನು ಉಚಿತವಾಗಿ ನೀಡಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ. ದೇಶದ ಪ್ರಥಮ ಸ್ವದೇಶಿ ಏರ್‌ಕ್ರಾಫ್ಟ್ ವಾಹಕ ನೌಕೆಯನ್ನು ಇಂದು ಕೊಚ್ಚಿಯಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಕೇಂದ್ರ ಸರ್ಕಾರ ದೇಶದ ಸೇನಾ ಹಾಗೂ ಆರ್ಥಿಕ ಸುರಕ್ಷತೆಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ನವ ಮಂಗಳೂರು ಬಂದರಿನಲ್ಲಿ ಮೂಲಸೌಲಭ್ಯಗಳ ಅಭಿವೃದ್ಧಿಗೆ 3800 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, ಇದರಿಂದ ದೇಶದ ಆರ್ಥಿಕತೆಗೆ ಮಾತ್ರವಲ್ಲದೆ ಸ್ಥಳೀಯವಾಗಿ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿ ಸಾಧ್ಯವಾಗಲಿದೆ. 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಯಡಿ ಸ್ಥಳೀಯ ಕೃಷಿಕರಿಗೆ ಹಾಗೂ ಮೀನುಗಾರರಿಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡಲು ಸುಲಭವಾಗಲಿದೆ. ಕಡಿಮೆ ವೆಚ್ಚದಲ್ಲಿ ಉತ್ಪನ್ನಗಳ ರಫ್ತು ಸಾಧ್ಯವಾಗಲಿದ್ದು, ನವ ಮಂಗಳೂರು ಬಂದರಿನ ಸಾಮರ್ಥ್ಯ ದ್ವಿಗುಣಗೊಳ್ಳಲಿದೆ ಎಂದು ತಿಳಿಸಿದ್ದಾರೆ. ▶ 8ನೇ ಪುಟಕ್ಕೆ

ಮುರುಘಾ ಶ್ರೀಗಳ ಬಂಧನ ಪ್ರಕರಣ

ಪೊಲೀಸರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ: ಸಿಎಂ

ಬೆಂಗಳೂರು, ಸೆ.2(ಕೆಎಂಶಿ)–ಕಾನೂನು ಪ್ರಕಾರವೇ ಎಲ್ಲವೂ ನಡೆಯುತ್ತದೆ. ಈ ಸಂದರ್ಭದಲ್ಲಿ ಮಾತನಾಡುವುದು ಸರಿಯಲ್ಲ. ಪೊಲೀಸರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ ಎಂದು ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣ ಶ್ರೀಗಳ ಬಂಧನದ ಬಗ್ಗೆ ಸಿಎಂ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದರು. ಮುರುಘಾ ಮಠದ ಸ್ವಾಮೀಜಿಯನ್ನು ▶ 8ನೇ ಪುಟಕ್ಕೆ

ಮುರುಘಾ ಶರಣರು ಮೂರು ದಿನ ಪೊಲೀಸ್ ಕಸ್ಟಡಿಗೆ

- ನ್ಯಾಯಾಂಗ ಬಂಧನದಲ್ಲಿದ್ದ ಶ್ರೀಗಳ ಆಸ್ಪತ್ರೆಗೆ ದಾಖಲಿಸಿದ ಪೊಲೀಸರಿಗೆ ನ್ಯಾಯಾಧೀಶರ ಎಚ್ಚರಿಕೆ
- ಅಜ್ಞಾತ ಸ್ಥಳದಲ್ಲಿ ಪೊಲೀಸರಿಂದ ಶ್ರೀಗಳ ವಿಚಾರಣೆ

ಚಿತ್ರದುರ್ಗ, ಸೆ.2–ಪೋಕ್ಸೋ ಕಾಯ್ದೆಯಡಿ ಬಂಧನಕ್ಕೊಳಗಾಗಿರುವ ಶ್ರೀ ಡಾ. ಶಿವಮೂರ್ತಿ ಮುರುಘಾ ಶರಣರನ್ನು ಹೆಚ್ಚಿನ ವಿಚಾರಣೆಗಾಗಿ ಮೂರು ದಿನಗಳ ಕಾಲ (ಸೆ.5ರವರೆಗೆ) ಪೊಲೀಸ್ ಕಸ್ಟಡಿಗೆ ನೀಡಿ ಚಿತ್ರದುರ್ಗ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶೆ ಕೋಮಲ ಆದೇಶ ನೀಡಿದ್ದಾರೆ.

ಗುರುವಾರ ರಾತ್ರಿ 10 ಗಂಟೆ ಸುಮಾರಿನಲ್ಲಿ ಬಂಧಿಸಲ್ಪಟ್ಟ ಮುರುಘಾ ಶ್ರೀಗಳನ್ನು ವೈದ್ಯಕೀಯ ತಪಾಸಣೆ ಸೇರಿದಂತೆ ಬಂಧನದ ನಂತರದ ▶ 8ನೇ ಪುಟಕ್ಕೆ



ಎರಡನೇ ಆರೋಪಿ ರಶ್ಮಿ ಬಂಧನ


ಚಿತ್ರದುರ್ಗ, ಸೆ.2–ಪೋಕ್ಸೋ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಹಾಸ್ಟೆಲ್ ವಾರ್ಡನ್ ರಶ್ಮಿ ಅವರನ್ನು ಗುರುವಾರ ವಿಚಾರಣೆಗಾಗಿ ವಶಕ್ಕೆ ಪಡೆದಿದ್ದ ಚಿತ್ರದುರ್ಗ ಗ್ರಾಮಾಂತರ ಠಾಣೆ ಪೊಲೀಸರು ಇಂದು ಅಧಿಕೃತವಾಗಿ ಬಂಧಿಸಿದ್ದಾರೆ. ಮೊದಲನೇ ಆರೋಪಿ ಮುರುಘಾ ಶರಣರನ್ನು ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ▶ 8ನೇ ಪುಟಕ್ಕೆ



ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ವ್ಯಾಪ್ತಿ ರಾಜಕಾಲುವೆ ಒತ್ತುವರಿ ತೆರವು

ಬೆಂಗಳೂರು, ಸೆ. 2(ಕೆಎಂಶಿ)– ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಟ್ಟಡ, ಬಡಾವಣೆಗಳನ್ನು ತೆರವುಗೊಳಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಷ್ಟೇ ಬಲಾಢ್ಯರಾಗಲಿ, ಇಲ್ಲವೆ ಪ್ರಭಾವಿಗಳಾಗಲೀ, ಅದನ್ನು ಲೆಕ್ಕಿಸದೇ, ಒತ್ತುವರಿ ತೆರವುಗೊಳಿಸಲಾಗುವುದು. ಯಾವುದೇ ಮುಲಾಜಿಗೆ ಒಳಗಾಗುವುದಿಲ್ಲ ಎಂದರು. ಪ್ರಸಕ್ತ ಮಳೆಯಿಂದ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಲ್ಲೂ ಒತ್ತುವರಿಯಿಂದ ತೀವ್ರ ಹಾನಿಯಾಗಿದೆ. ಬಲಿಷ್ಠರು, ಕಂಪನಿಗಳು, ಬಿಲ್ಡರ್‌ಗಳು, ರಾಜಕಾಲುವೆ ಒತ್ತುವರಿ ಮಾಡಿರುವುದರಿಂದ ▶ 2ನೇ ಪುಟಕ್ಕೆ













ಭಾರತದ ಮೊದಲ ಸ್ವದೇಶಿ ವಿಮಾನವಾಹಕ ನೌಕೆ 'ಐಎನ್‌ಎಸ್ ವಿಕ್ರಾಂತ್' ಲೋಕಾರ್ಪಣೆ

ರಕ್ಷಣಾ ವಲಯದಲ್ಲಿ ಸ್ವಾವಲಂಬನೆಗೆ ಉದಾಹರಣೆ: ಪ್ರಧಾನಿ ನರೇಂದ್ರ ಮೋದಿ



ಕೊಚ್ಚಿ, ಸೆ.2– ಮೊದಲ ಸ್ವದೇಶಿ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್(INS Vikrant)ನ್ನು ಕೊಚ್ಚಿಯ ನೌಕಾಪಡೆಯ ನೆಲೆಯಲ್ಲಿ ಇಂದು ಶುಕ್ರವಾರ ನಡೆದ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶಕ್ಕೆ ಸಮರ್ಪಿಸಿದರು. ಇದಕ್ಕೂ ಮೊದಲು ಕೊಚ್ಚಿಯ ಬಂದರು ತಾಣಕ್ಕೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿಯವರಿಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಗೌರವ ವಂದನೆ ಸಲ್ಲಿಸಲಾಯಿತು.

ಐಎನ್ ಎಸ್ ವಿಕ್ರಾಂತ್: ಭಾರತೀಯ ನೌಕಾಪಡೆಯ ಆಂತರಿಕ ಯುದ್ಧನೌಕೆ ವಿನ್ಯಾಸ ಕೇಂದ್ರ (WDB) ವಿನ್ಯಾಸಗೊಳಿಸಿದ ಮತ್ತು ಬಂದರುಗಳು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯದ ಅಡಿಯಲ್ಲಿ ಸಾರ್ವಜನಿಕ ವಲಯದ ನೌಕಾನೆಲೆ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್‌ನಿಂದ ನಿರ್ಮಿಸಲ್ಪಟ್ಟಿದೆ, ವಿಕ್ರಾಂತ್‌ನ್ನು ಅತ್ಯಾಧುನಿಕ ಯಾಂತ್ರೀಕೃತಗೊಂಡ ವೈಶಿಷ್ಟ್ಯಗಳೊಂದಿಗೆ ನಿರ್ಮಿಸಲಾಗಿದೆ. ಭಾರತದ ಕಡಲ ಇತಿಹಾಸದಲ್ಲಿ ಇದುವರೆಗೆ ನಿರ್ಮಿಸಲಾದ ಅತಿದೊಡ್ಡ ಹಡಗು ಇದಾಗಿರುವುದು ವಿಶೇಷ. 1971ರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಭಾರತದ ಮೊದಲ ವಿಮಾನವಾಹಕ ನೌಕೆಯಾದ ವಿಕ್ರಾಂತ್ ಹೆಸರನ್ನು ಈ ಸ್ವದೇಶಿ ವಿಮಾನವಾಹಕ ನೌಕೆಗೆ ಇಡಲಾಗಿದೆ. ಇದು ದೊಡ್ಡ ಪ್ರಮಾಣದ ಸ್ಥಳೀಯ ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಹೊಂದಿದೆ, ದೇಶದ ಪ್ರಮುಖ ಕೈಗಾರಿಕಾ ಮನೆಗಳು ಮತ್ತು 100 ಕ್ಕೂ ಹೆಚ್ಚು ಸಣ್ಣ, ಮಧ್ಯಮ ಮತ್ತು ಅತಿಸಣ್ಣ ಪ್ರಮಾಣದ ಕೈಗಾರಿಕೆ ಗಳನ್ನು ಒಳಗೊಂಡಿರುತ್ತದೆ. ವಿಕ್ರಾಂತ್ ಕಾರ್ಯಾರಂಭದೊಂದಿಗೆ, ಭಾರತವು ಎರಡು ಕಾರ್ಯಾಚರಣೆಯ ವಿಮಾನವಾಹಕ ನೌಕೆಗಳನ್ನು ಹೊಂದಿರುತ್ತದೆ, ಇದು ರಾಷ್ಟ್ರದ ಕಡಲ ಭದ್ರತೆಯನ್ನು ಹೆಚ್ಚಿಸುತ್ತದೆ. ಭಾರತೀಯ ನೌಕಾ ಪಡೆಯ ಪ್ರಕಾರ, 262–ಮೀಟರ್ ಉದ್ದದ ವಾಹಕವು 45,000 ಟನ್‌ಗಳ ಸ್ಥಳಾಂತರವನ್ನು ಹೊಂದಿದೆ, ಇದು ಹಿಂದಿನ ವಿಕ್ರಾಂತ ವಿಮಾನ ವಾಹಕಕ್ಕಿಂತ ಹೆಚ್ಚು ದೊಡ್ಡದಾಗಿದೆ. ವಿಮಾನ ವಾಹಕ ನೌಕೆಯ ಬಗ್ಗೆ ಮಾಹಿತಿ ನೀಡಿದ ಉಪ ಅಡ್ಮಿರಲ್ ಹಂಪಿಹೊಲಿ, ವಿಕ್ರಾಂತ್ ಸುಮಾರು 30 ವಿಮಾನಗಳನ್ನು ಒಯ್ಯುತ್ತದೆ. ಇದು MiG 29k ಯುದ್ಧ ವಿಮಾನವನ್ನು ವಾಯು ವಿರೋಧಿ, ಮೇಲ್ಮೈ ವಿರೋಧಿ ಮತ್ತು ಭೂ ದಾಳಿಯಲ್ಲಿ ಬಳಸಿಕೊಳ್ಳಬಹುದು. ಇದು Kamov 31 ಒಂದು ಆರಂಭಿಕ ವಾಯು ಎಚ್ಚರಿಕೆ ಹೆಲಿಕಾಪ್ಟರ್‌ನ್ನು ನಿರ್ವಹಿಸಲು ಸಾಧ್ಯವಾಗುತ್ತದೆ, ಇತ್ತೀಚೆಗೆ ಸೇರ್ಪಡೆಗೊಂಡ ಆದರೆ ಇನ್ನೂ ಕಾರ್ಯಾರಂಭಿಸದ MH-60R ಇದು ಬಹು–ಪಾತ್ರ ಹೆಲಿ ಕಾಪ್ಟರ್ ಮತ್ತು ನಮ್ಮ ಸ್ಥಳೀಯ ALH ಆಗಿದೆ. ಭಾರತೀಯ ನೌಕಾ ದಾಸ್ತಾನುಗಳಲ್ಲಿ ಅತಿದೊಡ್ಡ ಯುದ್ಧನೌಕೆಯಾಗಿದೆ ಎಂದರು. ಐಎಎಸ್ ವಿಕ್ರಾಂತ್ ಸೇರ್ಪಡೆಯೊಂದಿಗೆ, ಭಾರತವು ವಿಮಾನವಾಹಕ ನೌಕೆಯನ್ನು ಸ್ಥಳೀಯವಾಗಿ ವಿನ್ಯಾಸಗೊಳಿಸುವ ಮತ್ತು ನಿರ್ಮಿಸುವ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪನ್ನು ಸೇರಿಕೊಂಡಿದೆ. ಸ್ವದೇಶಿ ನಿರ್ಮಿತ ವಿಮಾನ ವಾಹಕ ನೌಕೆ ವಿಕ್ರಾಂತ್ 14 ಡೆಕ್‌ಗಳನ್ನು ಹೊಂದಿದ್ದು 2,300 ಕಂಪಾರ್ಟ್‌ಮೆಂಟ್‌ಗಳನ್ನು ಒಳಗೊಂಡಿದೆ. ಇದು ಸುಮಾರು 1,500 ಸಮುದ್ರ ಯೋಧರನ್ನು ಹೊತ್ತೊಯ್ಯಬಲ್ಲದು. ಸಿಬ್ಬಂದಿಗಳಿಗೆ ಆಹಾರ ಅವಶ್ಯಕತೆಯನ್ನು ಒದಗಿಸಲು ಹಡಗಿನ ಅಡುಗೆಮನೆಯಲ್ಲಿ ಸುಮಾರು 10,000 ಚಪಾತಿ ಅಥವಾ ರೊಟ್ಟಿಗಳನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಹಡಗಿನ ಗ್ಯಾಲಿ ಎಂದು ಕರೆಯಲಾಗುತ್ತದೆ.

ನೌಕಾ ಪಡೆಯ ಧ್ವಜ ಬದಲಾವಣೆ



ಮುರುಘಾ ಶ್ರೀಗಳ ಬೆನ್ನಿಗೆ ಭಕ್ತರು: ದಾವಣಗೆರೆಯಲ್ಲಿ ಪ್ರತಿಭಟನೆ

● ಷಡ್ಯಂತ್ರ ಬಯಲಿಗೆಳೆಯಲು ಆಗ್ರಹ

● ಶ್ರೀಗಳು ಅಮೆರಿಕಕ್ಕೆ ಹೋದಾಗಲೇ ಸಂಚು



ದಾವಣಗೆರೆ, ಸೆ.2– ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಶರಣರು ಸಂಕಷ್ಟದಲ್ಲಿದ್ದಾರೆ. ಷಡ್ಯಂತ್ರ ಮಾಡಿ ಅಪ್ರಾಪ್ತ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ನಾವೆಲ್ಲರೂ ಕೇವಲ ಮಾತನಾಡಿದರೆ ಸಾಲದು. ಶ್ರೀಗಳ ಪರ ನಿಲ್ಲೋಣ. ಇದರ ಹಿಂದಿರುವ ಪಟ್ಟಭದ್ರ ಹಿತಾಸಕ್ತಿಗಳಿಗೆ ತಕ್ಕ ಪಾಠ ಕಲಿಸೋಣ. ನೈತಿಕ ಬೆಂಬಲ ನೀಡುವ ಜೊತೆಗೆ ಶ್ರೀಗಳಿಗಾಗಿ ಹೋರಾಟ ನಡೆಸೋಣ ಎಂದು ಸರ್ವ ಸಮಾಜದ ಮುರುಘಾ ಮಠದ ಅಭಿಮಾನಿಗಳು ದಾವಣಗೆರೆಯಲ್ಲಿ ಆಕ್ರೋಶ ಹೊರಹಾಕಿದರು.

ದಾವಣಗೆರೆಯ ಜಯದೇವ ವೃತ್ತದಲ್ಲಿ ಸರ್ವ ಸಮಾಜದ ಮುರುಘಾ ಮಠದ ಅಭಿಮಾನಿಗಳು ಪ್ರತಿಭಟನೆ ನಡೆಸಿದ್ದು, ಮುರುಘಾ ಶರಣರ ಬಂಧನವನ್ನು ವಿರೋಧಿಸಿ ಆಕ್ರೋಶ ಹೊರಹಾಕಿದರು. ಸಭೆಯಲ್ಲಿ ವಿವಿಧ ಸಮಾಜದ ಮುಖಂಡರು, ರಾಜಕೀಯ ನಾಯಕರು, ಸಂಘಟನೆಗಳ ಪ್ರಮುಖರು, ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಸಹೋದರಿ ಅನುಸೂಯ, ಮಠದ ಪ್ರಮುಖರು ಪಾಲ್ಗೊಂಡಿದ್ದರು. 'ಶ್ರೀಗಳ ಪರ ನಿಂತು ನ್ಯಾಯಕ್ಕಾಗಿ ಹೋರಾಟ ನಡೆಸೋಣ. ಶ್ರೀಗಳು ಬಂಧನ ಮುಕ್ತರಾಗುವವರೆಗೆ ಹೋರಾಟ ನಿಲ್ಲಿಸಲ್ಲ' ಎಂದು ಘೋಷಣೆ ಕೂಗಿದರು. ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ ಮಾತನಾಡಿ, ಮುರುಘಾ ಶರಣರ ಬಂಧನ ಆಗಿರುವುದು ಕರಾಳ, ನೋವಿನ ಸಂಗತಿಯಾಗಿದೆ. ಭಕ್ತ ಸಮೂಹವೇ ದುಃಖದಲ್ಲಿದೆ. ಕೆಲ ದುಷ್ಕರ್ಮಿಗಳು ಮಾಡಿರುವ ದೊಡ್ಡ ಪಿತೂರಿ ಇದು. ಮೊದಲು ದುಷ್ಕರ್ಮಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ಕಿಡಿಕಾರಿದರು. ಕಳೆದ ಒಂದು ತಿಂಗಳ ಹಿಂದೆ ಶ್ರೀಗಳು ಅಮೆರಿಕಾಕ್ಕೆ ಹೋದಾಗಲೇ ಇಲ್ಲಿ ಷಡ್ಯಂತ್ರ ರೂಪಿಸಲಾಗಿದೆ. ಮಕ್ಕಳ ಬ್ರೈನ್ ವಾಷ್ ಮಾಡಿ ವ್ಯವಸ್ಥಿತವಾಗಿ ಪಿತೂರಿ ನಡೆಸಲಾಗಿದೆ. ಕೆಳ ವರ್ಗದ ಮಕ್ಕಳು, ಪೋಷಕರ ಮನಸ್ಸನ್ನು ಕೆಡಿಸಿ ಈ ಕೃತ್ಯಕ್ಕೆ ಪ್ರಚೋದನೆ ನೀಡಿದವರನ್ನು ಮೊದಲು ಬಂಧಿಸಿ ವಿಚಾರಣೆ ನಡೆಸಿದರೆ ಸತ್ಯಾಸತ್ಯತೆ ಹೊರಬರಲಿದೆ. ಹಣ, ಅಧಿಕಾರದ ಆಸೆಗಾಗಿ ಈ ಕೃತ್ಯ ಎಸಗಲಾಗಿದ್ದು, ಅಂಥವರನ್ನು ಸರ್ಕಾರ ಪತ್ತೆ ಹಚ್ಚಿ ಶಿಕ್ಷಿಸಬೇಕು ಎಂದು ಆಗ್ರಹಿಸಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಹೆಚ್.ಪಟೇಲ್ ಅವರ ಸಹೋದರಿ ಅನುಸೂಯ ಮಾತನಾಡಿ, ಇದು ಸತ್ಯ ಪರೀಕ್ಷೆಯ ಕಾಲ ಅಲ್ಲ, ಧರ್ಮ ಸಂಘರ್ಷದ ಕಾಲ. ಧರ್ಮ ಸಂಘರ್ಷಕ್ಕೆ ಭಕ್ತರು, ಎಲ್ಲಾ ಮಠಾಧೀಶರು ವರ್ಗರಹಿತರಾಗಿ, ಜಾತಿರಹಿತರಾಗಿ, ಧರ್ಮದ ಉಳಿವಿಗಾಗಿ ಒಗ್ಗಟ್ಟಾಗಬೇಕು. ಕರ್ನಾಟಕದಲ್ಲಿನ ಎಲ್ಲಾ ಖಾವಿಧಾರಿಗಳು, ಧರ್ಮ ಪರಿಪಾಲಕರು, ಬಸವತತ್ವ ಪರಿಪಾಲಕರು ಮತ್ತು ವೈದಿಕ ಪರಂಪರೆ ನಡೆಸಿಕೊಂಡು ಬಂದವರೆಲ್ಲರೂ ಸೇರಿ ಧರ್ಮ ಸಂಘರ್ಷದಲ್ಲಿ ಪಾಲ್ಗೊಳ್ಳಬೇಕು ಎಂದರು. ರಾಮ–ರಾವಣರ ಯುದ್ಧ ನಡೆಯುತ್ತಿದೆ. ಧರ್ಮ ಸಂಘರ್ಷಕ್ಕೆ ಎಲ್ಲರೂ ತಯಾರಾಗಬೇಕು. ಮಠಕ್ಕೆ ಬಂದು ನಮಸ್ಕಾರ ಮಾಡಿ ಪ್ರಸಾದ ಸೇವಿಸಿ ಹೋದರೆ ಸಾಲದು. ಜೀವನದಲ್ಲಿ ಒಮ್ಮೊಮ್ಮೆ ಪರೀಕ್ಷೆ ಅವಕಾಶ ಸಿಗುತ್ತದೆ. ಈಗ ಭಕ್ತರಿಗೆ ಪರೀಕ್ಷೆ ಬಂದಿದೆ. ಎಲ್ಲಾ ಮಠಾಧೀಶರು ಒಗ್ಗಟ್ಟಾಗಿ ಶ್ರೀಗಳ ಬೆಂಬಲಕ್ಕೆ ನಿಲ್ಲಬೇಕು. ಶ್ರೀಗಳ ಪರವಾಗಿ ಹೋರಾಟ ನಡೆಸಲು ಸಿದ್ಧರಿದ್ದೇವೆ. ಈ ಕಾರಣಕ್ಕೆ ನಾನು ಜೈಲಿಗೆ ಹೋಗಲೂ ಹೆದರಲ್ಲ ಎಂದು ಹೇಳಿದರು.

ಮುರುಘಾ ಶ್ರೀಗಳ ಬಂಧನದ ಚರ್ಚೆ ಸೂಕ್ತವಲ್ಲ



ಬೆಂಗಳೂರು: ಮುರುಘಾ ಶ್ರೀಗಳ ಬಂಧನ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡದಿರುವುದೇ ಸೂಕ್ತ. ಆದರೆ, ರಾಜ್ಯ ಸರಕಾರ ಜವಾಬ್ದಾರಿಯುತವಾಗಿ ಪ್ರಕರಣವನ್ನು ನಿರ್ವಹಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು. ಪಕ್ಷದ ಕಚೇರಿ ಜೆಪಿ ಭವನದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ರೀತಿಯ ಘಟನೆ ನಡೆಯಬಾರದಿತ್ತು ಎನ್ನುವುದು ನನ್ನ ಅಭಿಪ್ರಾಯ. ಇದು ತುಂಬಾ ಸೂಕ್ಷ್ಮ ವಿಚಾರ. ಮೊದಲೇ ನಮ್ಮ ರಾಜ್ಯ ಭಾವನಾತ್ಮಕ, ಆಚಾರ ವಿಚಾರಗಳಲ್ಲಿ ಬೇಯುತ್ತಿದೆ. ಇಂತಹ ವಿಚಾರಗಳಲ್ಲಿ ನಾವು ಚರ್ಚೆ ಮಾಡದೆ ಇರುವುದೇ ಸೂಕ್ತ ಸರ್ಕಾರದ ಮಟ್ಟದಲ್ಲಿ ಏನು ತನಿಖೆ ಮಾಡಬೇಕೋ ಮಾಡಲಿ. ತನಿಖೆ ವಿಳಂಬದ ವಿಚಾರ ಸರ್ಕಾರಕ್ಕೆ ಸಂಬಂಧಿಸಿದ್ದು, ಈ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡಲ್ಲ ಎಂದರು.

ಇಂದು ದಸರಾ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ಸಭೆ

ಮೈಸೂರು, ಸೆ.2–ನಾಡಹಬ್ಬ ಮೈಸೂರು ದಸರಾ ಮಹೋ ತ್ಸವವನ್ನು ಈ ಬಾರಿ ಸಾಂಪ್ರದಾಯಿಕವಾಗಿ, ವೈಭವಯುತವಾಗಿ ಆಚರಿಸಲು ಕಾರ್ಯಕ್ರಮಗಳನ್ನು ರೂಪಿಸುವಂತೆ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಅದರಂತೆ ಸೆಪ್ಟೆಂಬರ್ 26ರಿಂದ 2022ರ ಅಕ್ಟೋಬರ್ 5ರವರೆಗೆ ವೈಭವಯುತವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲು ದಸರಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ನವರಾತ್ರಿಯ ದಿನಗಳಲ್ಲಿ ಆಯೋಜಿಸಲಾಗುವ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ವಹಿಸಲು ಆಸಕ್ತಿ ಇರುವ ಸಂಘ ಸಂಸ್ಥೆಗಳು, ಕೈಗಾರಿಕೆಗಳು, ಸರ್ಕಾರಿ ಸ್ವಾಮ್ಯದ ಮತ್ತು ಖಾಸಗಿ ಬ್ಯಾಂಕ್‌ಗಳು ಹಾಗೂ ಇತರೆ ಸಂಸ್ಥೆಗಳ ಸಭೆಯನ್ನು ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಕಛೇರಿಯ ಆವರಣ ದಲ್ಲಿರುವ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಪ್ರಾಯೋಜಕತ್ವ ವಹಿಸಲು ಆಸಕ್ತ ಸಂಘ ಸಂಸ್ಥೆ, ಕೈಗಾರಿಕೆ, ಇತರೆ ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಗೆ ಆಗಮಿಸಿ, ತಮ್ಮ ಸಲಹೆ, ಸೂಚನೆ ಹಾಗೂ ಪ್ರಾಯೋ ಜಕತ್ವಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿ ಹಾಗೂ ದಸರಾ ವಿಶೇಷಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಟಿ.ನರಸೀಪುರದ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರನ್ನು ಅಹಿಂದ ಉಪಾಧ್ಯಕ್ಷ ನಜರ್‌ಬಾದ್ ನಟರಾಜ್, ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್, ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಆರೀಫ್, ಕೆಆರ್ ಬ್ಯಾಂಕ್ ನಿರ್ದೇಶಕ ಬಸಪ್ಪ ಇನ್ನಿತರರು ಅಭಿನಂದಿಸಿದರು.

ಒಂದನೇ ಪುಟದಿಂದ

ರಾಜಕಾಲುವೆ ಒತ್ತುವರಿ ತೆರವು

ಮಳೆ ನೀರು ಸರಾಗವಾಗಿ ಮುಂದೆ ಸಾಗದೆ ಜನರು ಸಂಕಷ್ಟಕ್ಕೆ ಸಿಲುಕಿ, ಪರದಾಡುವಂತಾಗಿದೆ. ಮಳೆಗಾಲ ನಿಂತ ತಕ್ಷಣವೇ ಇಂತಹ ಒತ್ತುವರಿಗಳನ್ನು ತೆರವುಗೊಳಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಇದಕ್ಕಾಗಿ ಸರ್ಕಾರ ವಿಶೇಷ ಅನುದಾನವನ್ನು ಪಾಲಿಕೆಗಳಿಗೆ ನೀಡಲಿದೆ. ಎಲ್ಲೆಲ್ಲಿ ಒತ್ತುವರಿಯಾಗಿದೆ ಎಂಬುದರ ಬಗ್ಗೆ ವರದಿ ನೀಡುವಂತೆ ಮೈಸೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ, ತುಮಕೂರು ಸೇರಿದಂತೆ ರಾಜ್ಯದ ಹತ್ತು ಮಹಾನಗರ ಪಾಲಿಕೆಗಳ ಆಯುಕ್ತರಿಗೆ ಪತ್ರ ಬರೆಯಲಾಗಿದೆ.

ಮಳೆಯಿಂದ ಎಲ್ಲೆಲ್ಲಿ ಅನಾಹುತ ಸಂಭವಿಸಿದೆ ಎಂಬ ಮಾಹಿತಿ ನಮ್ಮಲ್ಲಿದೆ. ಅವರು ನೀಡುವ ವರದಿ ಮತ್ತು ನಮ್ಮ ಮಾಹಿತಿ ಆಧಾರವಾಗಿಟ್ಟುಕೊಂಡು ರಾಜ ಕಾಲುವೆ ಒತ್ತುವರಿಯನ್ನು ತೆರವುಗೊಳಿಸಲಾಗುವುದು ಎಂದರು. ಒತ್ತುವರಿಯಾಗಿ ಸಾರ್ವಜನಿಕರಿಗೆ ಹಾನಿಯಾಗದಿದ್ದರೆ, ತಕ್ಷಣಕ್ಕೆ ಅಂತಹ ಒತ್ತುವರಿಯನ್ನು ತೆರವುಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ದೊಡ್ಡ ದೊಡ್ಡ ಕಂಪನಿಗಳೇ ಒತ್ತುವರಿ ಮಾಡಿಕೊಂಡು ಅನಾಹುತ ಮಾಡುತ್ತಿದ್ದಾರೆ. ಮತ್ತೆ ಅವರೇ ಸ್ಥಳೀಯ ಆಡಳಿತದ ವಿರುದ್ಧ ಧ್ವನಿ ಎತ್ತಿ ಜನಪ್ರತಿನಿಧಿಗಳ ವಿರುದ್ಧ ಪ್ಲೇಕಾರ್ಡ್ ಹಿಡಿಯುತ್ತಾರೆ.

ಇಂತಹವರಿಗೆ ನಾವು ಏನೆನ್ನಬೇಕು. ಉದ್ಯಮಿ ಮೋಹನ್‌ದಾಸ್ ಪೈ ಇದನ್ನು ಅರ್ಥ ಮಾಡಿಕೊಳ್ಳಬೇಕು. ರಾಜಧಾನಿಯಲ್ಲಿ ಹೆಚ್ಚು ಮಾಹಿತಿ ತಂತ್ರಜ್ಞಾನ ಉದ್ಯಮಗಳನ್ನು ಹೊಂದಿರುವ ಪ್ರದೇಶಗಳಲ್ಲೇ ಮಳೆ ನೀರು ಸರಾಗವಾಗಿ ಹರಿದು ಹೋಗುತ್ತಿಲ್ಲ. ರಾಜಕಾಲುವೆ ಒತ್ತುವರಿ ಮಾಡಿ, ನಿರ್ಮಾಣಗೊಂಡಿರುವ ಕಟ್ಟಡಗಳಲ್ಲಿ ಬೃಹತ್ ಐಟಿಬಿಟಿ ಕಂಪನಿಗಳು ತಲೆ ಎತ್ತಿವೆ. ಅಕ್ರಮವಾಗಿ ಎದ್ದಿರುವ ಕಟ್ಟಡಗಳಿಂದ ಮಳೆ ನೀರು ಸರಾಗವಾಗಿ ಹರಿಯದೇ ಇಡೀ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುತ್ತಿದೆ. ಈ ವ್ಯವಸ್ಥೆ ಇಂದು ನಿನ್ನೆಯದಲ್ಲ, ಬಹಳ ವರ್ಷಗಳಿಂದ ಇಂತಹ ಕಟ್ಟಡಗಳು ತಲೆ ಎತ್ತಿ ನಿಂತಿವೆ. ಆ ಕಟ್ಟಡದ ಮಾಲೀಕರೇ ಸರ್ಕಾರದ ವಿರುದ್ಧ ಕಿಡಿಕಾರುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ನಗರ ಪ್ರದಕ್ಷಿಣೆ ಸಂದರ್ಭದಲ್ಲಿ ಮಳೆ ನೀರಿನ ಅವಾಂತರವನ್ನು ಖುದ್ದು ಪರಿಶೀಲಿಸಿ, ಬಿಲ್ಡರ್ಸ್ ಮತ್ತು ಕಂಪನಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ರಾಜಕಾಲುವೆ ಒತ್ತುವರಿ ಮಾಡಿ, ಕಟ್ಟಡ, ಮನೆ ನಿರ್ಮಿಸಿದ್ದರೆ, ತಕ್ಷಣವೇ ಪರ್ಯಾಯವಾಗಿ ಮಳೆ ನೀರು ಹರಿದು ಹೋಗಲು ವ್ಯವಸ್ಥೆ ಮಾಡಬೇಕು, ಇಲ್ಲದಿದ್ದರೆ ಅಂತಹ ಕಟ್ಟಡಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸುವುದಾಗಿ ತಿಳಿಸಿದ್ದಾರೆ. ಇದು ಬರೀ ಬಿಬಿಎಂಪಿ ವ್ಯಾಪ್ತಿಗೆ ಮಾತ್ರವಲ್ಲ. ಇಡೀ ರಾಜ್ಯಕ್ಕೆ ಅನ್ವಯವಾಗುತ್ತಿದೆ ಎಂದು ಭೈರತಿ ತಿಳಿಸಿದರು.

ಅಪ್ರಾಪ್ತ ಬಾಲಕಿಯರಿಗೆ ಮುರುಘಾ ಶ್ರೀಗಳಿಂದ ಲೈಂಗಿಕ ಕಿರುಕುಳ ಆರೋಪ ಪ್ರಕರಣ

ನ್ಯಾಯಾಂಗ ತನಿಖೆಗೆ ಉಪ್ಪಾರ ಸಂಘ ಒತ್ತಾಯ

ಮೈಸೂರು, ಸೆ.2(ಆರ್‌ಕೆಬಿ)– ಚಿತ್ರದುರ್ಗ ಮುರುಘಾ ಮಠದ ವಸತಿ ನಿಲಯದ ಅಪ್ರಾಪ್ತ ದಲಿತ ಹಾಗೂ ಉಪ್ಪಾರ ಸಮಾಜದ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಸಂಬಂಧ ಸ್ವಾಮಿಜಿ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎಸ್ ಯೋಗೀಶ ಒತ್ತಾಯಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘಟನೆ ಬೆಳಕಿಗೆ ಬಂದು ಎಫ್‌ಐಆರ್ ದಾಖಲಿಸಿದ ಐದಾರು ದಿನಗಳವರೆಗೂ ಶ್ರೀಗಳನ್ನು ಬಂಧಿಸದೇ ವಿಳಂಬ ಮಾಡಿದ್ದು ಸರಿಯಲ್ಲ. ಇದರಿಂದ ಸಾಕ್ಷ್ಯ ನಾಶಪಡಿಸುವ ಸಾಧ್ಯತೆಗಳು ಇತ್ತು ಎಂದರು.



ಸರ್ಕಾರ ನಿಷ್ಪಕ್ಷಪಾತ, ಪಾರದರ್ಶಕ ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು. ಪ್ರಕರಣದ ಸಂತ್ರಸ್ತ ಮಕ್ಕಳಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಸಂತ್ರಸ್ತರಿಗೆ ನ್ಯಾಯ ಸಿಗುವುದಿಲ್ಲ ಎಂಬ ಶಂಕೆ ಇದ್ದು, ಅಭದ್ರತೆ ಕಾಡುತ್ತಿದೆ. ಹೀಗಾಗಿ ಪ್ರಕರಣವನ್ನು ಹೊರ ರಾಜ್ಯಕ್ಕೆ ವರ್ಗಾಯಿಸಬೇಕು. ಪ್ರಕರಣಕ್ಕೆ ಸಂಬಂಧಿಸಿದಂತೆ ಮಠ ಮಾನ್ಯಗಳ ಪ್ರತಿಷ್ಠಿತ ಮಠಾಧೀಶರು ಮಧ್ಯ ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಆರೋಪಿಗಳಿಗೆ ನ್ಯಾಯಾಲಯದಲ್ಲಿ ಜಾಮೀನು ಸಿಗದಂತೆ ನೋಡಿಕೊಳ್ಳಲು ತಕರಾರು ಅರ್ಜಿ ಸಲ್ಲಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಪ್ರಕರಣದ ಇದುವರೆಗಿನ ಬೆಳವಣಿಗೆ ಗಮನಿಸಿದಲ್ಲಿ ಪೊಲೀಸರಿಂದ ಬಿ ರಿಪೋರ್ಟ್ ಹಾಕಿಸಿ ಸಂತ್ರಸ್ತರಿಂದ ಬೇರೊಂದು ಹೇಳಿಕೆ ಕೊಡಿಸುವ ಮೂಲಕ ಸ್ವಾಮೀಜಿ ಖುಲಾಸೆಯಾಗುವ ಶಂಕೆ ವ್ಯಕ್ತವಾಗುತ್ತಿದೆ. ಶ್ರೀಗಳೇ ಆರೋಪ ಎದುರಾದ ಕೂಡಲೇ ಪೋಕ್ಸೋ ಕಾಯ್ದೆ ಅಡಿಯಲ್ಲಿ ಬಂಧನಕ್ಕೆ ಸಹಕರಿಸಿದ್ದಿದ್ದರೆ ಅವರ ಬಗ್ಗೆ ಗೌರವ ಹೆಚ್ಚುತ್ತಿತ್ತು. ಆದರೆ ಈಗ ಅವರು ಖುಲಾಸೆಯಾಗಿ ಬಂದರೂ ಅವರ ಮೇಲಿನ ಗೌರವ, ನಂಬಿಕೆ ಹೋಗುವಂತಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅತೀ ಹಿಂದುಳಿದವರ ಜಾಗೃತ ವೇದಿಕೆ ಅಧ್ಯಕ್ಷ ಡಿ.ನಾಗಭೂಷಣ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಪದಾಧಿಕಾರಿಗಳಾದ ನಾಗರಾಜು, ಶಿವಲಿಂಗಪ್ಪ, ನಂಜುಂಡಸ್ವಾಮಿ, ಮೈಸೂರು ಬಸವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಸೆ.2– ಟಿ.ನರಸೀಪುರ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಮೆಟ್ರಿಕ್ ನಂತರದ (ಸಾಮಾನ್ಯ ಮತ್ತು ಮಾದರಿ ವಿದ್ಯಾರ್ಥಿನಿಲಯಗಳು) ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಕಲ್ಪಿಸಲು ಅನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಹೊಸ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಸೆ.12 ಕೊನೆಯ ದಿನಾಂಕ, ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣಾಧಿಕಾರಿಗಳು ಪರಿಶೀಲನೆ ಮಾಡಲು ಸೆ.16 ಅಂತಿಮ ದಿನಾಂಕ, ಕೌನ್ಸಲಿಂಗ್ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಣೆಯ ಸೆ.20 ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯಲು ಸೆ.26 ಅಂತಿಮ ದಿನಾಂಕವಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.09.2022 ಶನಿವಾರ, ಮಳೆ ನಕ್ಷತ್ರ : ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ
ತಿಥಿ: ಸಪ್ತಮಿ, ನಕ್ಷತ್ರ : ಅನೂರಾಧ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.40 ಹಾಡು ಹೇಳಿದ ಕಥೆ, ಲೇಖನ–ಡಾ.ಡಿ. ಸತೀಶ್ಚಂದ್ರ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 10.00 ಕೇಶವ್ ಎಂ–ವಯೋಲಿನ್ ವಾದನ, 11.00 ಅಮೃತ ಸ್ವಾತಂತ್ರ್ಯ ಮಹೋತ್ಸವದ ವಿಶೇಷ ಸರಣಿ "ಸ್ವರಾಜ್"

ಮಧ್ಯಾಹ್ನ: 12.45 ಜನಪದಗೀತೆ, 1.20 ಭಾವಗೀತೆ, 3.35 ಮಕ್ಕಳ ಮಂಟಪ "ಯಕ್ಷಗಾನದಲ್ಲಿ ಕರಿಭಂಟನ ಕಾಳಗದ ಪ್ರಸಂಗ", ಪ್ರಸ್ತುತಿ– ಹಟ್ನ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು, 4.30 ನೆನಪಿನಂಗಳ–ಹಿರಿಯ ಸಾಹಿತಿ ಪ್ರೊ.ಎಸ್. ಅನಂತನಾರಾಯಣ ಅವರೊಂದಿಗೆ ಪ್ರೊ.ಜಿ.ಟಿ. ನಾರಾಯಣರಾಯರು ನಡೆಸಿದ್ದ ಸಂವಾದ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ –ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00ಲಾಕ್‌ಡೌನ್ ಕಥಾ ನಾಟಕ "ಚಪ್ಪಲಿ ದಾನ", ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, ಮೂಲಕಥೆ– ವೆಂಕಟೇಶ್ ಚಾಗಿ, ಬಾನುಲಿ ರೂಪ– ತ್ರಿಪುರಾಂತಕ, 9.15 "ಸೈಬರ್ ಕ್ರೈಂ ಎಂಬ ಹೊಸ ಸಮಸ್ಯೆ"–ಮಾತನಾಡುತ್ತಾರೆ ಡಾ. ರಾಮಕೃಷ್ಣ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಕುಮಾರ್ ವೆಂಕಟೇಶ್ವರಲು ವಡವಾಟಿ – ಕ್ಲಾರಿಯೋನೆಟ್ ವಾದನ, ಸೀತಾರಾಮ್ ದಾಸ್ – ತಬಲ, 11.00 ಸವಿನೆನಪು.

■ **ಮೈಸೂರು ಗಣೇಶ ಉತ್ಸವ ಸಮಿತಿ:** ಗಣೇಶ ಉತ್ಸವ, ಬೆಳಗ್ಗೆ 10 ರಿಂದ ಸಾರ್ವಜನಿಕ ಗಣಹೋಮ, ಸಂಜೆ 6 ರಿಂದ ಪ್ರಾಣೇಶ್ ಮತ್ತು ಬಳಗದವರಿಂದ ಹಾಸ್ಯ ಸಂಜೆ, ಸಂಜೆ 7.30 ರಿಂದ ವಾರಿಜಾಶ್ರೀ ವೇಣುಗೋಪಾಲ್ ಮತ್ತು ಲಯ ತರಂಗ ತಂಡದಿಂದ ಸಂಗೀತ ಸಂಜೆ, ಸ್ಥಳ: ಮಾಧವ ಕೃಪ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ.

■ **ಎಂ.ಎ.ಎಸ್.ವಿ.ಎಸ್. ಗುರುಕುಲ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಸಂಘದ ಉದ್ಘಾಟನೆ, ಸನ್ಮಾನ ಸಮಾರಂಭ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಉಪಾಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ, ಅತಿಥಿಗಳು : ಹಿರಿಯ ಪತ್ರಕರ್ತ ರವೀಂದ್ರ ಭಟ್, ಮುಖ್ಯ ಅತಿಥಿಗಳು : ಡಾ. ಕೆ.ಇ. ರಾಧಾಕೃಷ್ಣ, ಕೆ.ವಿ. ಪ್ರಭಾಕರ್, ಡಾ. ಎಂ.ಆರ್. ಮಂಜುನಾಥ್, ಕೆ. ನಾಗರಾಜು, ಸ್ಥಳ: ಎಂ.ಎ.ಎಸ್.ವಿ.ಎಸ್. ಗುರುಕುಲ ಪದವಿಪೂರ್ವ ಕಾಲೇಜು ಆವರಣ, ಅನಿಕೇತನ ರಸ್ತೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಸ್ಮರಣಾರ್ಥ ರಾಷ್ಟ್ರೀಯ ವಿಚಾರ ಸಂಕಿರಣ, ವಿಷಯ : ಭಾರತದಲ್ಲಿ ಬೇನಾಮಿ ಕಾನೂನು : ಕಾನೂನಿನ ಸವಾಲುಗಳು, ಉದ್ಘಾಟನೆ : ರೇರಾ ಮೇಲ್ಮನವಿ ಪ್ರಾಧಿಕಾರದ ವಿಶ್ರಾಂತ ನ್ಯಾಯಮೂರ್ತಿ ಬಿ. ಶ್ರೀನಿವಾಸಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು : ಸುಧಾರಿತ ಕಾನೂನು ಅಧ್ಯಯನಗಳ ರಾಷ್ಟ್ರೀಯ ವಿಶ್ವವಿದ್ಯಾನಿಲಯ, ಕೊಚ್ಚಿ, ಕೇರಳ ಉಪಕುಲಪತಿ ಡಾ. ಕೆ.ಸಿ. ಸನ್ನಿ, ಉಪಸ್ಥಿತರು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ. ಪಿ. ದೀಪು, ಕಾನೂನು ಅಧ್ಯಯನ ನಿರ್ದೇಶಕ ಪ್ರೊ. ಕೆ.ಬಿ. ವಾಸುದೇವ, ಡಾ. ಎಸ್.ಬಿ. ಬೋರೇಗೌಡ, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಹಾಗೂ ದತ್ತಿ ಕಾರ್ಯಕ್ರಮ, ಸಮ್ಮುಖ : ಡಾ. ಶ್ರೀ ಶರತ್ ಚಂದ್ರ ಸ್ವಾಮಿ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಉಪನ್ಯಾಸ : ಪ್ರೊ. ಡಿ.ಎಸ್. ಸದಾಶಿವಮೂರ್ತಿ ಅವರಿಂದ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಜೆಎಸ್‌ಎಸ್ ಪಿಯು ಕಾಲೇಜು ಪ್ರಿನ್ಸಿಪಾಲರಾದ ಹೆಚ್.ಟಿ. ನಿರ್ಮಲಾ, ಎಂ.ಎ. ನೀಲಾಂಬಿಕಾ, ಸ್ಥಳ: ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಜೆ.ಪಿ.ನಗರ, ಬೆಳಗ್ಗೆ 11ಕ್ಕೆ.

■ **ಗೋಲ್ಡನ್ ಕ್ರೀಪರ್ ಎಂಟರ್‌ಪ್ರೈಸಸ್ :** ಜ್ಯುವೆಲ್ಲರಿ ಶೋ, ಉದ್ಘಾಟನೆ : ಚಲನಚಿತ್ರ ನಟಿ ಧನ್ಯಾ ರಾಮ್‌ಕುಮಾರ್, ಸ್ಥಳ : ರ್‍ಯಾಡಿಷನ್ ಬ್ಲೂ ಫ್ಲಾಜಾ, ಮಧ್ಯಾಹ್ನ 12.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ವಿಜ್ಞಾನ ಸಂವಾದ ಕಾರ್ಯಕ್ರಮ, ಉಪಸ್ಥಿತರು : ಪ್ರೊ. ಪಿ. ವೆಂಕಟರಾಮಯ್ಯ, ಡಾ. ಎನ್. ಭಾಗ್ಯಲಕ್ಷ್ಮಿ, ಪ್ರೊ. ಜಿ.ಆರ್. ಜನಾರ್ಧನ್, ಪ್ರೊ ಮಾಲಿನಿ, ಡಾ. ಆರ್. ರಂಗರಾಜನ್, ಪ್ರೊ. ಎಸ್.ಎನ್. ಪ್ರಸಾದ್, ಪ್ರೊ ಬಸವರಾಜಪ್ಪ, ಡಾ. ಎಂ.ಎಸ್. ಚಂದ್ರಶೇಖರ್, ಸ್ಥಳ: ವಿಜ್ಞಾನ ಭವನದ ಸೆಮಿನಾರ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **24 ಮನೆ ತೆಲುಗುಶೆಟ್ಟರ ಶ್ರೀರಾಮಮಂದಿರ :** ಬೆಳಗ್ಗೆ 11.30 ರಿಂದ ಶ್ರೀ ಮಹಾಗಣಪತಿ ಪ್ರತಿಷ್ಠಾಪನೆ ಹಾಗೂ 8ನೇ ವರ್ಷದ ಆರಾಧನಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 1 ಗಂಟೆಗೆ ಅನ್ನಸಂತರ್ಪಣೆ, ಸ್ಥಳ: 24 ಮನೆ ತೆಲುಗುಶೆಟ್ಟರ ಶ್ರೀರಾಮಮಂದಿರ, ಚಾಮುಂಡಿಪುರಂ, ಕೆ.ಆರ್. ಮೊಹಲ್ಲಾ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್ :** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ವಿದುಷಿ ಅನ್ನಪೂರ್ಣ ನಾಗೇಂದ್ರ ಮತ್ತು ಜಿ. ದಕ್ಷಿಣಾಮೂರ್ತಿ ಅವರಿಂದ ದುರ್ಯೋಧನ ವಿಲಾಪ ಕುರಿತು ಕಾವ್ಯವಾಚನ, ಸಂಜೆ 6.45 ರಿಂದ ವಿದ್ವಾನ್ ಮಲ್ಲಾಡಿ ಸಹೋದರರಿಂದ ದ್ವಂದ್ವ ಗಾಯನ, ವಿದ್ವಾನ್ ಎಂಬಾರ್ ಕಣ್ಣನ್–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ, ಸಂಜೆ 7 ರಿಂದ ತೇಜಸ್ವಿನಿ ಮತ್ತು ತಂಡದವರಿಂದ ಗಾನಭಾರತಿ ಸಂಗೀತ ವಿದುಷಿಯವರಿಂದ ಭಕ್ತಿ ಸಂಗೀತ ಕಾರ್ಯಕ್ರಮ, ಸ್ಥಳ: ಗಣಪತಿ ದೇವಸ್ಥಾನ ಟ್ರಸ್ಟ್, ಕೆ.ಆರ್. ಮೊಹಲ್ಲಾ, ತ್ಯಾಗರಾಜ ವೃತ್ತ.

■ **ತರಂಗ :** ಸಂಜೆ 6 ರಿಂದ 6ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ವಿಶ್ರಾಂತ ಆಕಾಶವಾಣಿ ಸಹಾಯಕ ನಿರ್ದೇಶಕ ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ, ಅಧ್ಯಕ್ಷತೆ : ಪ್ರಜ್ಞಾ ಕುಟೀರ ಆಯುರ್ವೇದ ಮತ್ತು ಯೋಗ ಕೇಂದ್ರದ ನಿರ್ದೇಶಕ ಡಾ. ಪೂರ್ಣಿಮಾ ಕೃಷ್ಣಮೂರ್ತಿ, ಸಂಜೆ 6.30ಕ್ಕೆ ಅನ್ವಿತಾ ಶ್ರೀಕಿರಣ್ ಅವರಿಂದ ವಯೋಲಿನ್, ಶುಭಾಂಗ್ ಸಾಮಗ–ಮೃದಂಗ, ಪುರುಷೋತ್ತಮ –ಕೀಬೋರ್ಡ್, ಬಿ. ಕಿರಣ್–ತಬಲ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ.

■ **ಶ್ರೀ ನರ್ತನ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸೌಮ್ಯ ನೃತ್ಯ ಶಾಲಾ :** ನರ್ತನೋತ್ಸವ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ: ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಕಟ್ಟೆಬಳಗ :** ಗಣೇಶೋತ್ಸವ ಪ್ರತಿಷ್ಠಾಪನೆ, ಸಾಂಸ್ಕೃತಿಕ ಕಾರ್ಯಕ್ರಮ, ಡ್ರಮ್ಮರ್ ಡಾ. ರಾಘವೇಂದ್ರಪ್ರಸಾದ್ ನೇತೃತ್ವದಲ್ಲಿ ಕನ್ನಡ ಮತ್ತು ಹಿಂದಿ ಚಲನಚಿತ್ರಗೀತೆಗಳ ರಸ ಸಂಜೆ, ಸ್ಥಳ: ಕೃಷ್ಣಮೂರ್ತಿಪುರಂನ 1ನೇ ಮುಖ್ಯರಸ್ತೆ ಸಂಜೆ 6.30ಕ್ಕೆ.

ಮೈಸೂರು ಮಿತ್ರ ಶನಿವಾರ 3 ಸೆಪ್ಟೆಂಬರ್ 2022

ಮಲತಂದೆಯ ಹೀನ ಕೃತ್ಯ: ಅಪ್ರಾಪ್ತ ಬಾಲಕಿ ಈಗ ಹೆಣ್ಣು ಮಗುವಿನ ತಾಯಿ

ಪೋಕ್ಸೋ ಕಾಯ್ದೆಯಡಿ ಆರೋಪಿ ಬಂಧನ

ಗೋಣಿಕೊಪ್ಪ, ಸೆ.2–ಕಾಮುಕ ಮಲತಂದೆಯೋರ್ವ ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಮಗುವನ್ನು ಕರುಣಿಸಿದ ಬಗ್ಗೆ ವರದಿಯಾಗಿದ್ದು, ಈತ ವಿರುದ್ಧ ಪೋಕ್ಸೋ ಮತ್ತು ಎಸ್‌ಸಿ, ಎಸ್‌ಟಿ ಅಟ್ರಾಸಿಟಿ ಕಾಯ್ದೆಯಡಿ ಬಂಧಿಸಲ್ಪಟ್ಟು ಜೈಲು ಸೇರಿದ್ದಾನೆ. 17 ವರ್ಷದ ಬಾಲಕಿ ಮಲತಂದೆಯ ಲೈಂಗಿಕ ದೌರ್ಜನ್ಯದಿಂದಾಗಿ ಹೆಣ್ಣುಮಗುವಿಗೆ ತಾಯಿಯಾಗಿದ್ದಾಳೆ.



ವಿವರ: ಗೋಣಿಕೊಪ್ಪದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯ ಪತಿ ಕಳೆದ ಎರಡು ವರ್ಷದ ಹಿಂದೆ ಮೃತಪಟ್ಟಿದ್ದು, ಈಕೆ ಮೂಲತಃ ಮೈಸೂರಿನವನಾದ ಗಾರೆ ಕೆಲಸದವನೊಬ್ಬನ ಜೊತೆ ಜೀವನ ನಡೆಸುತ್ತಿದ್ದಾಳೆ. ಈಕೆಯ ಹಿರಿಯ ಮಗಳು ಮೈಸೂರಿನ ಕಾಲ್ ಸೆಂಟರ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದು, 17 ವರ್ಷ ವಯಸ್ಸಿನ ಕಿರಿಯ ಮಗಳು 10ನೇ ತರಗತಿವರೆಗೆ ವ್ಯಾಸಂಗ ಮಾಡಿ ಮನೆಯಲ್ಲೇ ಇದ್ದಾಳೆ.

ಮಹಿಳೆಯ ಕಿರಿಯ ಮಗಳನ್ನು ಮಲತಂದೆ ಬಹಳ ಆತ್ಮೀಯವಾಗಿ ನೋಡಿಕೊಳ್ಳುತ್ತಿದ್ದ. ಆಕೆಯನ್ನು ಸಣ್ಣಪುಟ್ಟ ವಿಚಾರಕ್ಕೆ ತಾಯಿ ಬೈದರೂ ಕೂಡ ಈತ ಮಗಳ ಪರ ವಹಿಸಿ ಮಾತನಾಡುತ್ತಿದ್ದ. ಈತನ ವರ್ತನೆಯಿಂದ ಸಂಶಯಗೊಂಡಿದ್ದ ಹಿರಿಯ ಮಗಳು ಮಲತಂದೆ ಜೊತೆ ಎಚ್ಚರಿಕೆಯಿಂದ ಇರುವಂತೆ ತಂಗಿಗೆ ತಿಳುವಳಿಕೆ ನೀಡಿದ್ದಳು ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಕಳೆದ ನಾಲ್ಕು ತಿಂಗಳ ಹಿಂದೆ ಮಹಿಳೆಯ ಹಿರಿಯ ಮಗಳು ಗೋಣಿಕೊಪ್ಪಗೆ ಬಂದಾಗ ತನ್ನ ತಂಗಿ ಮುಟ್ಟಾಗದೇ ಇರುವುದು ಆಕೆಗೆ ತಿಳಿದಿದೆ. ಇದರಿಂದ ಸಂಶಯಗೊಂಡಿದ್ದ ಆಕೆ ಪ್ರೆಗ್ನೆನ್ಸಿ ಕಿಟ್ ತಂದು ಪರೀಕ್ಷಿಸಿದಾಗ ಬಾಲಕಿ ಗರ್ಭಿಣಿ ಆಗಿರುವ ಯಾವುದೇ ಲಕ್ಷಣ ಕಂಡುಬಂದಿರಲಿಲ್ಲ. ನಂತರ ಹಿರಿಯ ಮಗಳು ಮೈಸೂರಿಗೆ ತೆರಳಿದ್ದಳು. ಗೌರಿ ಹಬ್ಬದ ರಜೆಗಾಗಿ ಹಿರಿಯ ಮಗಳು ಗೋಣಿಕೊಪ್ಪಗೆ ಮತ್ತೆ ಬಂದಾಗ ಆಕೆಯ ತಂಗಿಗೆ ತೀವ್ರ ಹೊಟ್ಟೆನೋವು ಕಾಣಿಸಿಕೊಂಡಿದೆ. ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದಾಗ ಗರ್ಭಿಣಿಯಾಗಿರುವುದು ಗೊತ್ತಾಗಿದೆ. ಅಲ್ಲದೇ ಆ.31ರಂದು ಮಧ್ಯಾಹ್ನ ಬಾಲಕಿಗೆ ಹೆಣ್ಣು ಮಗು ಜನನವಾಗಿದೆ. ಬಾಲಕಿಯನ್ನು ವಿಚಾರಿಸಿದಾಗ 2021 ರಿಂದ ಮಲತಂದೆ ತನ್ನ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಿದ್ದ ವಿಚಾರವನ್ನು ತಿಳಿಸಿದ್ದಾಳೆ. ಈ ಸಂಬಂಧ ಗೋಣಿಕೊಪ್ಪ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮಲತಂದೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ವಾಯು ವಿಹಾರಕ್ಕೆ ತೆರಳಿದ್ದ ಗೃಹಿಣಿಯ ಸರ ಕಳವು

ಮೈಸೂರು, ಸೆ.2–ವಾಯು ವಿಹಾರಕ್ಕೆ ತೆರಳಿದ್ದ ಗೃಹಿಣಿಯ ಚಿನ್ನದ ಸರ ಕಳವು ಮಾಡಿರುವ ಘಟನೆ ಕುವೆಂಪುನಗರದ ವಿಶ್ವರೂಪಂ ಪಾರ್ಕ್ ಬಳಿ ನಡೆದಿದೆ. ಕುವೆಂಪುನಗರ ಎಂ–ಬ್ಲಾಕ್ ನಿವಾಸಿ ಲಕ್ಷ್ಮಮ್ಮ(65) ಸರ ಕಳೆದುಕೊಂಡವರಾಗಿದ್ದು, ಇವರು ಆ.30ರಂದು ಸಂಜೆ ವಿಶ್ವರೂಪಂ ಪಾರ್ಕ್‌ಗೆ ವಾಯು ವಿಹಾರಕ್ಕಾಗಿ ತೆರಳುತ್ತಿದ್ದ ವೇಳೆ ಬೈಕ್ ನಿಲ್ಲಿಸಿಕೊಂಡು, ಇಬ್ಬರು ಖದೀಮರು ಕುಳಿತಿದ್ದು, ಲಕ್ಷ್ಮಮ್ಮ ಅವರನ್ನು ದಾಟಿ ಮುಂದೆ ಹೋಗುತ್ತಿದ್ದಂತೆಯೇ ಓರ್ವ ಓಡಿ ಬಂದು 50 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಖದೀಮರು ಸರ ಎಳೆದಾಗ ಮಹಿಳೆ ಕೆಳಗೆ ಬಿದ್ದಿದ್ದಾರೆ. ಇದರಿಂದ ಆಘಾತಕ್ಕೊಳಗಾಗಿದ್ದ ಮಹಿಳೆ ತಕ್ಷಣ ಪೊಲೀಸರಿಗೆ ದೂರು ಸಲ್ಲಿಸಿರಲಿಲ್ಲ. ಆದರೆ ಸೆ.1ರಂದು ದೂರು ಸಲ್ಲಿಸಿದ್ದು, ಅದನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ.




ವೃದ್ಧೆಗೆ ಚಾಕು ತೋರಿಸಿ ಲಕ್ಷಾಂತರ ರೂ. ಚಿನ್ನಾಭರಣ, ಮೊಬೈಲ್ ಸುಲಿಗೆ

ಮೈಸೂರು, ಸೆ.2–ವೃದ್ಧೆಯೋರ್ವರಿಗೆ ಚಾಕು ತೋರಿಸಿ ಬೆದರಿಸಿ ಚಿನ್ನಾಭರಣ ಕಸಿದ ಘಟನೆ ಮೈಸೂರು ತಾಲೂಕು ಮೊಸಂಬಾಯನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮೂಲತಃ ಕೊಡಗಿನವರಾಗಿದ್ದು, ಮೈಸೂರಿನ ಕೆ.ಸಿ.ಲೇಔಟ್‌ನಲ್ಲಿ ವಾಸವಿರುವ ಸಿ.ಎಸ್.ಹೇಮಾವತಿ(72) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರ ಪುತ್ರಿ ಅಶ್ವಿನಿ ಅವರು ಮೊಸಂಬಾಯನಹಳ್ಳಿಯಲ್ಲಿ ಜಮೀನು ಹೊಂದಿದ್ದಾರೆ. ಹೇಮಾವತಿ ಅವರು ಜಮೀನು ನೋಡುವ ಸಲುವಾಗಿ ಸೆ.1ರಂದು ಮೊಸಂಬಾಯನಹಳ್ಳಿಗೆ ತೆರಳಿದ್ದರು. ಅಂದು ಬೆಳಗ್ಗೆ 11.45ರಲ್ಲಿ ಜಮೀನಿನಲ್ಲಿ ಅವರು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ ವೇಳೆ ಅಲ್ಲಿಗೆ ಬಂದ ವ್ಯಕ್ತಿಯೋರ್ವ ಮೊದಲಿಗೆ 2 ಎಳನೀರು ಕೊಡಿ ಎಂದು ಕೇಳಿದ್ದಾನೆ. ಮರಗಳನ್ನು ಲೀಸ್‌ಗೆ ಕೊಟ್ಟಿದ್ದು, ಎಳನೀರು ಕೊಡಲು ಸಾಧ್ಯವಿಲ್ಲ ಎಂದು ಅವರು ಹೇಳಿದಾಗ ನನಗೆ ಹುಷಾರಿಲ್ಲ, ಹೀಗಾಗಿ ಎಳನೀರು ಕೊಡಿ ಎಂದು ಮತ್ತೆ ಕೇಳಿದ ನಂತರ ಚಾಕು ತೋರಿಸಿ ಬೆದರಿಕೆ ಹಾಕಿ ಅವರ ಕತ್ತಿನಲ್ಲಿದ್ದ 24 ಗ್ರಾಂ ತೂಕದ ಚಿನ್ನದ ಸರವನ್ನು ಕಸಿದಿದ್ದಾನೆ. ಕೈಯ್ಯಲ್ಲಿದ್ದ ಬಳೆಯನ್ನು ಆತ ಎಳೆದಾಡುತ್ತಿದ್ದಾಗ ಹೇಮಾವತಿಯವರು ಕಿರುಚಿಕೊಂಡಿದ್ದಾರೆ. ಆಗ ಮೊಬೈಲ್ ಚಾಲನೆಯಲ್ಲೇ ಇದ್ದುದರಿಂದ ಅದನ್ನು ಕಿತ್ತುಕೊಂಡ ಆತ ಮತ್ತೆ ಚಾಕು ತೋರಿಸಿ ಬಳೆ ಕೊಡುವಂತೆ ಬೆದರಿಸಿದ್ದಾನೆ. ಆಗ ಹೇಮಾವತಿ ಅವರು 45 ಗ್ರಾಂ ತೂಕದ 6 ಬಳೆಗಳನ್ನು ಆತನಿಗೆ ಕೊಟ್ಟಿದ್ದಾರೆ. ಅದನ್ನು ಪಡೆದು ಚಿನ್ನಾಭರಣ ಹಾಗೂ ಮೊಬೈಲ್‌ನೊಂದಿಗೆ ಖದೀಮ ಪರಾರಿಯಾಗಿದ್ದಾನೆ. ಈ ಸಂಬಂಧ ವರುಣಾ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಕಾನೂನು ವಿವಿ ನೂತನ ಕುಲಪತಿಗೆ ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯ ಕಾನೂನು ಶಾಲೆ(ಸ್ಕೂಲ್ ಆಫ್ ಲಾ) ನಿರ್ದೇಶಕ ಪ್ರೊ.ಸಿ.ಬಸವರಾಜು ಅವರನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ನೇಮಿಸಿ, ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರೊ.ಸಿ.ಬಸವರಾಜು ಅವರನ್ನು ಪಿ.ನಂದಕುಮಾರ್, ಭರತ್ ರಾಮಸ್ವಾಮಿ, ಸಿ.ಜಿ ಶಿವಕುಮಾರ್ ಹಾಗೂ ಮೋಹನ್ ಅಭಿನಂದಿಸಿದರು.



ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಭಾಗಲ್ಲಿ ದೇಶಕ್ಕೆ 147ನೇ ಸ್ಥಾನ ಹಾಗೂ ಎಸ್‌ಟಿ ವಿಭಾಗದಲ್ಲಿ ಪ್ರಥಮ ರ್ಯಾಂಕ್ ಪಡೆದ ಹೆಬ್ಬಾಳು ನಿವಾಸಿ ಶಂಕರ್ ಮತ್ತು ಹೇಮ ಪುತ್ರ ಪೃಥ್ವಿ ಎಸ್.ನಾಯಕ್ ಅವರನ್ನು ಶಾಸಕ ಎಲ್.ನಾಗೇಂದ್ರ ಸನ್ಮಾನಿಸಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯ ಎಂ. ಚಿಕ್ಕಮೆಕಮ್ಮಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ ವಿಜಿಲೆನ್ಸ್ ಕಮಿಟಿಯ ಸದಸ್ಯ ಎಂ. ಶಿವಪ್ರಕಾಶ್, ಚಾಮರಾಜ ಬಿಜೆಪಿ ಉಪಾಧ್ಯಕ್ಷ ಎಂ.ಹೆಚ್. ಶಿವಕುಮಾರ್, ಕೆ.ಜಿ.ಕೊಪ್ಪಲ್ ವಾರ್ಡ್ ಬಿಜೆಪಿ ಅಧ್ಯಕ್ಷರಾದ ಕೃಷ್ಣ ದಿನೇಶ್ ಗೌಡ ಇತರರಿದ್ದಾರೆ

ಮಹದೇವಪ್ಪ ನಿಧನ



ಮೈಸೂರು, ಸೆ.2– ಮೈಸೂರಿನ ಟಿ.ಕೆ.ಬಡಾವಣೆಯ ನಿವಾಸಿ ಮಹದೇವಪ್ಪ(76) ಶುಕ್ರವಾರ ನಿಧನರಾದರು.

ಮೃತರು ಪತ್ನಿ ಬಸಮ್ಮ, ನಾಲ್ವರು ಪುತ್ರಿಯರು–ಅಳಿಯಂದಿರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಬೋಗಾದಿ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತದಲ್ಲಿ ತಯಾರಾಗುವ ಔಷಧ ವಿಶ್ವಮಾನ್ಯ

● ಐಪಿಎ ಪ್ರಧಾನ ಕಾರ್ಯದರ್ಶಿ ಸುದರ್ಶನ್ ಜೈನ್ ಅಭಿಮತ ● ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶಕ್ಕೆ ಚಾಲನೆ



25ನೇ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶವನ್ನು ಇಂಡಿಯನ್ ಫಾರ್ಮಾಸ್ಯುಟಿಕಲ್ ಅಲೆಯನ್ಸ್ (ಐಪಿಎ) ಪ್ರಧಾನ ಕಾರ್ಯದರ್ಶಿ ಸುದರ್ಶನ್ ಜೈನ್ ಉದ್ಘಾಟಿಸಿದರು. ಈ ವೇಳೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರುಮಠ, ಭಾರತೀಯ ಫಾರ್ಮಸಿ ಕೌನ್ಸಿಲ್ ಅಧ್ಯಕ್ಷ ಡಾ.ಮೋಂಟು ಪಟೇಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪ್ರೊ–ಛಾನ್ಸಿಲರ್ ಡಾ.ಬಿ.ಸುರೇಶ್, ಉಪಕುಲಪತಿ ಡಾ.ಸುರೀಂದರ್, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮುಖ್ಯ ನಾವಿನ್ಯತೆ ಅಧಿಕಾರಿ ಡಾ.ಅಭಯ್ ಜೇರೆ, ಎಪಿಟಿಐ ಅಧ್ಯಕ್ಷ ಡಾ.ಮಿಲಿಂದ್ ಜನರಾವ್ ಉಮೇಕರ್, ಕಾರ್ಯದರ್ಶಿ ಡಾ.ರಾಮನ್ ದಂಗ್ ಇದ್ದರು.

ಮೈಸೂರು, ಸೆ.2(ಜಿಎ)– ಭಾರತ ತಯಾರಿಸುತ್ತಿರುವ ಔಷಧಗಳು ಭಾರತಕ್ಕೆ ಸೀಮಿತವಾಗಿಲ್ಲ. ಇಡೀ ವಿಶ್ವಕ್ಕೆ ಪೂರೈಕೆ ಮಾಡುತ್ತಿದ್ದು, ಇದು ಭಾರತೀಯರ ಹೆಮ್ಮೆಯ ವಿಚಾರವಾಗಿದೆ ಎಂದು ಇಂಡಿಯನ್ ಫಾರ್ಮಾಸ್ಯುಟಿಕಲ್ ಅಲೆಯನ್ಸ್ (ಐಪಿಎ) ಪ್ರಧಾನ ಕಾರ್ಯದರ್ಶಿ ಸುದರ್ಶನ್ ಜೈನ್ ಅಭಿಪ್ರಾಯಪಟ್ಟರು.

ಮೈಸೂರಿನ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾ ವಿದ್ಯಾಲಯದ ವತಿಯಿಂದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಅಕಾಡೆಮಿಯ ರಾಜೇಂದ್ರ ಸಭಾಂಗಣದಲ್ಲಿ ಆಯೋಜಿಸಿರುವ 3 ದಿನಗಳ 25 ನೇ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶ (ಅಪ್ಟಿಕಾನ್–22)ವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಜೆಎಸ್‌ಎಸ್ ಸಂಸ್ಥೆಯು ತನ್ನ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ 25ನೇ ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷಕರ ಸಮಾವೇಶ (ಅಪ್ಟಿಕಾನ್–22)ವನ್ನು ಮೈಸೂರಿನಲ್ಲಿ ಆಯೋಜಿಸಿರುವುದು ಸಂತಸದ ವಿಚಾರವಾಗಿದ್ದು, ಇದರಿಂದ ಅನೇಕ ಔಷಧ ವಿಜ್ಞಾನ ಶಿಕ್ಷಕರು ಮತ್ತು ಉದ್ಯಮಿಗಳಿಗೆ ಸಹಕಾರಿಯಾಗಲಿದೆ ಎಂದರು.

ಕೊವಿಡ್ ಆರಂಭದ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಪಿಇಪಿ ಕಿಟ್, ವೆಂಟಿಲೇಟರ್ ಸೇರಿದಂತೆ ಅನೇಕ ವೈದ್ಯಕೀಯ ಸಲಕರಣೆಗಳು ಇರಲಿಲ್ಲ. ಆದರೆ, ಶಿಕ್ಷಣ ತಜ್ಞರು, ವೃತ್ತಿಪರರು, ವಿಜ್ಞಾನಿಗಳು, ತಂತ್ರಜ್ಞಾನ ಕೈಗಾರಿಕೆಗಳ ಸಹಕಾರದಿಂದ ಒಂದು ವರ್ಷದ ಅವಧಿಯಲ್ಲಿಯೇ ಸೆರಮ್ ಸಂಸ್ಥೆಯು ಕೊರೊನಾ ಲಸಿಕೆಯನ್ನು ಕಂಡು ಹಿಡಿದು 2 ಮಿಲಿಯನ್‌ಕ್ಕೂ ಅಧಿಕ ಲಸಿಕೆಯನ್ನು ಭಾರತ ಸೇರಿದಂತೆ ಜಗತ್ತಿನ 200 ರಾಷ್ಟ್ರಗಳಿಗೆ ಪೂರೈಸಿದೆ. ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ಭಾರತದಲ್ಲಿ ತಯಾರಿಸಲ್ಪಟ ಮಾತ್ರೆಗಳನ್ನೆ ಬಳಸುತ್ತಿವೆ ಎಂದು ತಿಳಿಸಿದರು.

ರಾಷ್ಟ್ರೀಯ ಔಷಧ ವಿಜ್ಞಾನ ಶಿಕ್ಷರ ಸಮಾವೇಶವು ದೇಶದಲ್ಲಿ ಔಷಧ ಶಿಕ್ಷಣವನ್ನು ಉತ್ತೇಜಿಸುವುದರ ಮೇಲೆ ಕೇಂದ್ರೀಕರಿಸಿದೆ ಮತ್ತು ಅನೇಕ ಶೈಕ್ಷಣಿಕ ಚಟುವಟಿಕೆಗಳನ್ನು ಸುಗಮಗೊಳಿಸಲು ಉಪಯುಕ್ತವಾಗುತ್ತದೆ. ಪ್ರಸ್ತುತ ಮತ್ತು ಭವಿಷ್ಯದ ಅಗತ್ಯಗಳನ್ನು ಪೂರೈಸಲು, ಆರೋಗ್ಯ ಸವಾಲುಗಳನ್ನು ಎದುರಿಸಲು ಹೆಚ್ಚು ಸುಸಜ್ಜಿತ ಮತ್ತು ಉತ್ತಮ ಆರೋಗ್ಯ ವೃತ್ತಿಪರರನ್ನು, ಶೈಕ್ಷಣಿಕ ಸುಧಾರಣೆಗಳಿಂದ ಪ್ರೇರೇಪಿಸಲು ಸಹಕಾರಿಯಾಗಲಿದೆ. ಭವಿಷ್ಯದ ಮೈಲಿಗಲ್ಲು ಸ್ಥಾಪಿಸಲು ಶಿಕ್ಷಣ ತಜ್ಞರು, ವೃತ್ತಿಪರ ವೈಜ್ಞಾನಿಕ ನಾಯಕರು, ನಿಯಂತ್ರಕರಿಂದ ಫಾರ್ಮಸಿ ಶಿಕ್ಷಣವನ್ನು ಸುಧಾರಿಸಲು ಶೈಕ್ಷಣಿಕವಾಗಿ ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಪಿಟಿಐ ಅಧ್ಯಕ್ಷ ಡಾ.ಮಿಲಿಂದ್ ಜನರಾವ್ ಉಮೇಕರ್ ಮಾತನಾಡಿ, ಅಪ್ಟಿಕಾನ್ ಸಂಸ್ಥೆಯು 1966ರಲ್ಲಿ ಸ್ಥಾಪನೆಗೊಂಡಿದ್ದು, ಈಗ 56 ವರ್ಷಗಳನ್ನು ಪೂರೈಸಿದೆ. ಇದು ವೈಭವದ ಪಯಣದ ಸಂಕೇತವಾಗಿದ್ದು, ಕೊರೊನಾ ಸಂದರ್ಭದಲ್ಲಿ ಕೆಲಸಗಳು ನಿಲ್ಲದೆ 300 ಕ್ಕೂ ವೆಬಿನಾರ್ ಕಾರ್ಯಕ್ರಮಗಳು ನಡೆದಿದೆ. ಈ ಮೂರು ದಿನಗಳ ಸಮಾವೇಶದಲ್ಲಿ ಭಾಗವಹಿಸಿದರೆ, ಔಷಧ ಶಿಕ್ಷಣ, ತಂತ್ರಾರಿಕೆ ಮತ್ತು ಸಂಶೋಧನೆಗೆ ಉಪಯುಕ್ತವಾಗಲಿದೆ. ಈಗಾಗಲೇ 70 ಸಾವಿರ ಶಿಕ್ಷಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ಇದರಿಂದ ನಿರುದ್ಯೋಗ, ಸಂಬಳ ಸಮಸ್ಯೆ, ಮಹಿಳಾ ಸಬಲೀಕರಣ ಸೇರಿದಂತೆ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸಮಾವೇಶದಲ್ಲಿ 70 ಕ್ಕೂ ಹೆಚ್ಚು ಮಳಿಗೆಗಳಲ್ಲಿ ಔಷಧ ವಿಜ್ಞಾನ ಕುರಿತಂತೆ ಆಯೋಜಿಸಿದ್ದ ವಸ್ತು ಪ್ರದರ್ಶನ ಹೆಚ್ಚು ಗಮನ ಸೆಳೆದವು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರುಮಠ, ಭಾರತೀಯ ಫಾರ್ಮಸಿ ಕೌನ್ಸಿಲ್ ಅಧ್ಯಕ್ಷ ಡಾ.ಮೋಂಟು ಪಟೇಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪ್ರೊ–ಛಾನ್ಸಿಲರ್ ಡಾ.ಬಿ.ಸುರೇಶ್, ಉಪಕುಲಪತಿ ಡಾ.ಸುರೀಂದರ್, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮುಖ್ಯ ನಾವಿನ್ಯತೆ ಅಧಿಕಾರಿ ಡಾ.ಅಭಯ್ ಜೇರೆ, ಎಪಿಟಿಐ ಅಧ್ಯಕ್ಷ ಡಾ.ಮಿಲಿಂದ್ ಜನರಾವ್ ಉಮೇಕರ್, ಕಾರ್ಯದರ್ಶಿ ಡಾ.ರಾಮನ್ ದಂಗ್, ಸಮಾವೇಶದ ಸಂಘಟನಾ ಅಧ್ಯಕ್ಷ ಹಾಗೂ ಜೆಎಸ್ ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ವಿ.ಮುರುಳೀಧರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಗುಂಡಿಮಯ ರಸ್ತೆಗಳಲ್ಲಿ ಶಾಸಕ ನಾಗೇಂದ್ರ, ಪಾಲಿಕೆ ಆಯುಕ್ತರಿಂದ ಪರಿಶೀಲನೆ



ಮೈಸೂರು, ಸೆ.2(ಎಸ್‌ಬಿಡಿ)– ಮೈಸೂರಿನೆಲ್ಲೆಡೆ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಮ್ಮ ಕ್ಷೇತ್ರ ವ್ಯಾಪ್ತಿಯ ಕೆಲವೆಡೆ ಶುಕ್ರವಾರ ಪರಿಶೀಲನೆ ನಡೆಸಿದರು.

'ಮೈಸೂರು ಮಿತ್ರ' ಸೆ.2ರ ಸಂಚಿಕೆಯಲ್ಲಿ 'ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಹಲವೆಡೆ ನಿರ್ಮಾಣವಾಗಿವೆ ಅಪಾಯಕಾರಿ ಗುಂಡಿಗಳು' ಶೀರ್ಷಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸುವ ಮೂಲಕ ಹದಗೆಟ್ಟ ರಸ್ತೆಗಳಿಂದ ಸಾರ್ವಜನಿಕರು ಅನುಭವಿಸುತ್ತಿರುವ ನರಕಯಾತನೆಯನ್ನು ಕಣ್ಣಿಗೆ ಕಟ್ಟಲಾಗಿತ್ತು. ಈ ಹಿನ್ನೆಲೆಯಲ್ಲಿ ಶಾಸಕ ಎಲ್.ನಾಗೇಂದ್ರ, ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಇನ್ನಿತರ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸುವ ಮೂಲಕ ರಸ್ತೆಗಳ ದುಸ್ಥಿತಿಯನ್ನು ಸ್ವತಃ ನೋಡಿದರು.

ಗ್ರಾಮಾಂತರ(ಸಬರ್ಬನ್) ಬಸ್ ನಿಲ್ದಾಣದ ಬಳಿ ಬಸ್‌ಗಳು ಹೊರ ಹೋಗುವ ಸ್ಥಳದಲ್ಲಿ ಮಂಡಿಯುದ್ದ ಗುಂಡಿ ಬಿದ್ದಿವೆ. ಚರಂಡಿಗೆ ಅಳವಡಿಸಿ ರುವ ಕಲ್ಲಿನ ಸ್ಲಾಬ್‌ಗಳು ಮುರಿದು ಬಿದ್ದಿವೆ ಸಾವಿರಾರು ಜನ ಓಡಾಡುವ ಜಾಗ ಅತ್ಯಂತ ಅಪಾಯಕಾರಿಯಾಗಿದೆ. ಇದನ್ನು ಗಮನಿಸಿದ ಶಾಸಕರು, ಕೂಡಲೇ ಪರಿಹಾರಕ್ಕೆ ಅಧಿಕಾರಿಗಳಿಗೆ ಸೂಚಿಸುವಂತೆ ಪಾಲಿಕೆ ಆಯುಕ್ತರಿಗೆ ತಿಳಿಸಿದರು.

ನಿಲ್ದಾಣದ ಎದುರು ಮಹಾರಾಜ ಕಾಂಪ್ಲೆಕ್ಸ್ ಬಳಿ ಅವೈಜ್ಞಾನಿಕ ಕಾಮಗಾರಿ ಪರಿಣಾಮ ಮಳೆ ನೀರು ಚರಂಡಿ ಸೇರದೆ ರಸ್ತೆಯಲ್ಲೇ ಹರಿಯುತ್ತದೆ. ಇದರಿಂದ ರಸ್ತೆಯಲ್ಲಿ ದೊಡ್ಡ ಹೊಂಡಗಳೇ ನಿರ್ಮಾಣವಾಗಿವೆ ಈ ಬಗ್ಗೆ 'ಮೈಸೂರು ಮಿತ್ರ'ನ ವರದಿಯಲ್ಲಿ ಗಮನ ಸೆಳೆಯಲಾಗಿತ್ತು. ಶಾಸಕರು ಈ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಚರಂಡಿ ವ್ಯವಸ್ಥೆ ಮಾಡುವಂತೆ ಅದರಲ್ಲೂ ನಾಳೆಯಿಂದಲೇ ಕಾಮಗಾರಿ ಆರಂಭಿಸುವಂತೆ ಸೂಚನೆ ನೀಡಿದರು.

ನಂತರ ಫೈವ್‌ಲೈಟ್ ಸರ್ಕಲ್, ಮಿನಿ ವಿಧಾನಸೌಧದ ಬಳಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲಿನ ಅಪಾಯ ಕಾರಿ ಗುಂಡಿಗಳನ್ನು ಮುಚ್ಚುವಂತೆ ಅಧಿಕಾರಿಗಳಿಗೆ ತಿಳಿಸಿದರು. ನಿರಂತರ ಮಳೆಯಿಂದ ಹಲವೆಡೆ ರಸ್ತೆಗಳು ಹಾಳಾಗಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ. ಕೂಡಲೇ ರಸ್ತೆ ಅಭಿವೃದ್ಧಿ, ಚರಂಡಿ ನಿರ್ವಹಣ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದರು.

ಹಾರ್ಡಿಂಜ್ ಸರ್ಕಲ್, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಅಶೋಕ ರಸ್ತೆ ಸೇರಿದಂತೆ ಚಾಮರಾಜ, ಕೃಷ್ಣರಾಜ ಹಾಗೂ ನರಸಿಂಹರಾಜ ಕ್ಷೇತ್ರಗಳ ಬಹುತೇಕ ರಸ್ತೆಗಳ ಸ್ಥಿತಿ ಇದಕ್ಕೆ ಭಿನ್ನವಾಗಿಲ್ಲ. ವಾಹನ ಸಂಚಾರ, ಜನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳಿರುವುದು ಬೆರಳೆಣಿಕೆಯಷ್ಟು ಮಾತ್ರ. ಮೈಸೂರಿನ ಆಡಳಿತ ವ್ಯವಸ್ಥೆ ಜನರ ತಾಳ್ಮೆ ಪರೀಕ್ಷೆ ಮಾಡುತ್ತಿರುವಂತೆ ಕಾಣುತ್ತಿದೆ. ರಸ್ತೆಗಳು ಛಿದ್ರವಾಗಿದ್ದರೂ ಅವುಗಳ ದುರಸ್ತಿ ಬಗ್ಗೆ ಗಂಭೀರ ಕ್ರಮಕ್ಕೆ ಮುಂದಾಗಿಲ್ಲ.



ಮೈಸೂರಿನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ನ್ಯೂರೋಜನ್ ಘಟಕದ ವತಿಯಿಂದ ಗಂಗೋತ್ರಿ ಲೇಔಟ್‌ನಲ್ಲಿರುವ ಅಂಬೇಡ್ಕರ್ ವಿದ್ಯಾರ್ಥಿ ನಿಲಯದ 184 ವಿದ್ಯಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು. ನ್ಯೂರೋಜನ್ ಮುಖ್ಯಸ್ಥ ಡಾ.ಸುಶ್ರೂತ್ ಮತ್ತಿತರನ್ನು ವೈದ್ಯರು ಹಾಗೂ ಸಿಬ್ಬಂದಿಯನ್ನು ಚಿತ್ರದಲ್ಲಿ ಕಾಣಬಹುದು.

ಶ್ರೀನಿವಾಸ್ ನೇಮಕ



ಮೈಸೂರು, ಸೆ.2, ಮೈಸೂರು ಜಿಲ್ಲಾ ಜಾತ್ಯಾತೀತ ಜನತಾದಳ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷರಾಗಿ ಡಿ.ಶ್ರೀನಿವಾಸ್ ಅವರನ್ನು ಪಕ್ಷದ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿರವರ ಆದೇಶದ ಮೇರೆಗೆ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಎನ್.ನರಸಿಂಹಸ್ವಾಮಿ ನೇಮಕ ಮಾಡಿ, ಆದೇಶಿಸಿದ್ದಾರೆ. ಇವರನ್ನು ಶಾಸಕ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಮುಖಂಡ ಭರತ್ ಮಂಜೇಗೌಡ ಅಭಿನಂದಿಸಿದ್ದಾರೆ.



ಮೈಸೂರು ತಿಲಕ್‌ನಗರದಲ್ಲಿರುವ ವಿಶೇಷ ಮಕ್ಕಳ ಶಾಲೆಯಲ್ಲಿ ವಿವಿಧ ಸೇವಾಕಾರ್ಯಗಳೊಂದಿಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರ ಹುಟ್ಟುಹಬ್ಬವನ್ನು ಅವರ ಹಿತೈಷಿಗಳು ಅರ್ಥಪೂರ್ಣವಾಗಿ ಆಚರಿಸಿದರು.

ಪ್ರೇಯಸಿಯ ಹತ್ಯೆಗೈದಿದ್ದ ಪ್ರಿಯಕರನ ಬಂಧನ

● ಘಟನೆ ನಡೆದ 24 ಗಂಟೆಯೊಳಗೆ ಆರೋಪಿ ಬಂಧನ
● ತಾನು ಆತ್ಮಹತ್ಯೆ ಮಾಡಿಕೊಳ್ಳಲು ಶಿವಮೊಗ್ಗಕ್ಕೆ ತೆರಳುತ್ತಿದ್ದಾಗ ಸೆರೆ





ಮೈಸೂರು, ಸೆ.2– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪ್ರೇಯಸಿಯನ್ನು ಹತ್ಯೆ ಮಾಡಿ ಪರಾರಿಯಾಗಿದ್ದ ಪ್ರಿಯಕರನ್ನು ಘಟನೆ ನಡೆದ 24 ಗಂಟೆಯೊಳಗೆ ಬಂಧಿಸುವಲ್ಲಿ ದೇವರಾಜ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಿನಕಲ್ ನಿವಾಸಿ ಆಶಿಕ್ (26) ಬಂಧಿತನಾಗಿದ್ದು, ಈತ ಕುಪಲಾಪುರದಿಂದ ಶಿವಮೊಗ್ಗ ಕಡೆಗೆ ಹೋಗಲು ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಪೊಲೀಸರು ಬಂಧಿಸಿದ್ದಾರೆ. ಪ್ರೇಯಸಿಯನ್ನು ಹತ್ಯೆಗೈದು ನಿನ್ನೆ (ಗುರುವಾರ) ಬೆಳಗ್ಗೆ 7.30ರ ಸುಮಾರಿನಲ್ಲಿ ಹೋಟೆಲ್‌ನಿಂದ ಹೊರಹೋಗಿದ್ದ ಈತ ಶಿವರಾಂಪೇಟೆಯ ಬಾರ್‌ವೊಂದರಲ್ಲಿ ಮದ್ಯ ಸೇವನೆ ಮಾಡಿ, ಕುಪಲಾಪುರಕ್ಕೆ ಹೋಗಿ ಅಲ್ಲಿನ ಲಾಡ್ಜ್‌ವೊಂದರಲ್ಲಿ ಉಳಿದುಕೊಂಡಿದ್ದ. ಅದೇ ದಿನ ಸಂಜೆ 5.30ರಲ್ಲಿ ರೂಂ ಖಾಲಿ ಮಾಡಿ ಶಿವಮೊಗ್ಗಕ್ಕೆ ತೆರಳುವ ಸಿದ್ಧತೆಯಲ್ಲಿದ್ದಾಗ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಮದುವೆಯಾಗಿ ಒಂದು ಮಗುವಿನ ತಂದೆಯಾಗಿರುವ ಆಶಿಕ್ ಸುಂದರ ಯುವತಿಯರ ಜೊತೆ ಸರಸ–ಸಲ್ಲಾಪದಲ್ಲಿ ತೊಡಗುವುದನ್ನು ಶೋಕಿ ಮಾಡಿಕೊಂಡಿದ್ದ ಎನ್ನಲಾಗಿದ್ದು, ವಿಜಯನಗರ 2ನೇ ಹಂತದ ಪ್ರತಿಷ್ಠಿತ ಕಾಲೇಜೊಂದರಲ್ಲಿ ಅಂತಿಮ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದ ಅಪೂರ್ವ ಶೆಟ್ಟಿ ಈತನಿಗೆ ಒಂದೂವರೆ ವರ್ಷದ ಹಿಂದೆಯೇ ಪರಿಚಯವಾಗಿದ್ದು, ಇವರಿಬ್ಬರ ನಡುವೆ ಗಾಢವಾದ ಸ್ನೇಹ ಬೆಳೆದಿದೆ ಈತ ಅಪೂರ್ವ ಶೆಟ್ಟಿಯ ಜೊತೆ ಹೆಚ್ಚಾಗಿ ತಿರುಗಾಡುತ್ತಿದ್ದನೆಂದು ಹೇಳ ಲಾಗಿದ್ದು, ಶೋಕಿಗಾಗಿಯೇ ಹೆಬ್ಬಾಳದ ಸಿಐಟಿಬಿ ಛತ್ರದ ಬಳಿಯಿದ್ದ ಮನೆಯನ್ನು ಮಾರಾಟ ಮಾಡಿ, ಹಿನಕಲ್‌ನ ಬಾಡಿಗೆ ಮನೆಯಲ್ಲಿ ವಾಸವಿದ್ದ ಎಂದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ.

ಪಿರಿಯಾಪಟ್ಟಣ ತಾಲೂಕಿನ ವಿದ್ಯಾರ್ಥಿನಿ ಅಪೂರ್ವಶೆಟ್ಟಿ ಮೈಸೂರಿನ ಪಿಜಿಯಲ್ಲಿ ವಾಸ್ತವ್ಯ ಹೂಡಿ ವ್ಯಾಸಂಗ ಮಾಡುತ್ತಿದ್ದಳು. ಕಾಲೇಜಿನಿಂದ ಬಂದ ಬಳಿಕ ಆಕೆ ಬೇರೆ ಯಾರ ಜೊತೆಯಲ್ಲೋ ಸುತ್ತಾಡುತ್ತಿದ್ದಾಳೆ ಎಂಬ ಅನುಮಾನ ಆಶಿಕ್‌ಗೆ ಕಾಡಿತ್ತುತೆ. ಈ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಇವರಿಬ್ಬರ ನಡುವೆ ಜಗಳ ನಡೆದು ಬೇರ್ಪಟ್ಟಿದ್ದರಾದರೂ ಮತ್ತೆ ಒಂದುಗೂಡಿದ್ದಾರೆ. ಪ್ರೇಯಸಿ ಮೇಲೆ ಅನುಮಾನಗೊಂಡಿದ್ದ ಆಶಿಕ್ ಆಕೆಯನ್ನು ಹತ್ಯೆ ಮಾಡಲು ನಿರ್ಧರಿಸಿ, ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಹೋಟೆಲ್‌ವೊಂದರಲ್ಲಿ ರೂಂ ಬುಕ್ ಮಾಡಿ ಆ.29ರಂದು ಕರೆದೊಯ್ದಿದ್ದಾನೆ. ರೂಂನಲ್ಲಿ ಕೂಡ ಇವರಿಬ್ಬರ ನಡುವೆ ಮಾತಿಗೆ ಮಾತು ಬೆಳೆದಿದೆ. ಪ್ರೇಯಸಿ ಅಪೂರ್ವಶೆಟ್ಟಿ ಬೇರೊಬ್ಬರ ಜೊತೆ ಸಂಬಂಧ ಬೆಳೆಸಿದ್ದಾಳೆ. ನನಗೆ ಸಿಗದೇ ಇರುವ ಈಕೆ ಬೇರೆ ಯಾರಿಗೂ ಸಿಗಬಾರದು ಎಂಬ ದೃಷ್ಟಿಯಿಂದ ನಿನ್ನೆ ಮುಂಜಾನೆ ಆಕೆಯ ಕತ್ತು ಹಿಸುಕಿ, ದಿಂಬಿನಿಂದ ಮುಖವನ್ನು ಅದುಮಿ, ಉಸಿರುಗಟ್ಟಿಸಿ ಹತ್ಯೆ ಮಾಡಿದ್ದಾಗಿ ಪೊಲೀಸರಿಗೆ ಹೇಳಿಕೆ ನೀಡಿರುವ ಆತ, ತಾನು ಕೂಡ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಶಿವಮೊಗ್ಗಕ್ಕೆ ತೆರಳುತ್ತಿದ್ದ ಎಂದು ತಿಳಿಸಿದ್ದಾನೆ ಎನ್ನಲಾಗಿದೆ.

ಯುವಕನ ಇರಿದು ಹತ್ಯೆ: ಐವರು ಪೊಲೀಸ್ ವಶಕ್ಕೆ

ಮೈಸೂರು ಕ್ಯಾತಮಾರನಹಳ್ಳಿಯಲ್ಲಿ ಘಟನೆ

ಮೈಸೂರು, ಸೆ.2– ಮೈಸೂರಿನ ಕ್ಯಾತಮಾರನಹಳ್ಳಿಯ ಟೆಂಟ್ ಸರ್ಕಲ್‌ನಲ್ಲಿ ಗಣೇಶ ಚತುರ್ಥಿ(ಆ.31) ಯಂದು ರಾತ್ರಿ ಯುವಕನೋರ್ವನನ್ನು ಇರಿದು ಹತ್ಯೆ ಮಾಡಿದ್ದು, ಮತ್ತೋರ್ವ ಯುವಕ ತೀವ್ರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ಈ ಪ್ರಕರಣದಲ್ಲಿ ಉದಯಗಿರಿ ಠಾಣೆ ಪೊಲೀಸರು ಐವರನ್ನು ವಶಕ್ಕೆ ಪಡೆದಿದ್ದಾರೆ ಎಂದು ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ.



ವೆಂಕಟೇಶ್

ಕ್ಯಾತಮಾರನಹಳ್ಳಿಯವರೇ ಆದ ಚಂದು, ಚಂದುಶೆಟ್ಟಿ ಸೇರಿದಂತೆ ಐವರನ್ನು ಪೊಲೀಸರು ರಮ್ಮನಹಳ್ಳಿ ಬಳಿ ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ. ಇವರು ವೆಂಕಟೇಶ್ ಅಲಿಯಾಸ್ ಕರಿಯ (23) ಎಂಬಾತನನ್ನು ಹತ್ಯೆಗೈದಿದ್ದು, ಆತನ ಸ್ನೇಹಿತ ನವೀನ್ ಅಲಿಯಾಸ್ ಜೊಲ್ಲು (18) ಎಂಬ ಯುವಕನನ್ನು ಇರಿದು ಗಾಯಗೊಳಿಸಿದ್ದಾರೆ.

ವಿವರ: ಕ್ಯಾತಮಾರನಹಳ್ಳಿಯ ವೆಂಕಟೇಶ್ ಮತ್ತು ಚಂದು ಗುಂಪಿನ ನಡುವೆ ದ್ವೇಷವಿತ್ತು ಎಂದು ಹೇಳಲಾಗಿದ್ದು, ಪದೇ ಪದೇ ಎರಡೂ ಗುಂಪುಗಳ ನಡುವೆ ಘರ್ಷಣೆ ನಡೆಯುತ್ತಿತ್ತು. ವರ್ಷದ ಹಿಂದೆ ಚಂದುನನ್ನು ವೆಂಕಟೇಶ್ ಚಾಕುವಿನಿಂದ ಇರಿದಿದ್ದು, ಈ ಪ್ರಕರಣದಲ್ಲಿ ಆತ ಸುಮಾರು 2 ತಿಂಗಳ ಕಾಲ ಜೈಲಿನಲ್ಲಿದ್ದು, ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾನೆ.

ಈ ಕಾರಣದಿಂದಾಗಿ ಚಂದು ಗುಂಪಿಗೆ ವೆಂಕಟೇಶ್ ಮೇಲೆ ದ್ವೇಷ ಹೆಚ್ಚಾಗಿತ್ತು ಎಂದು ಹೇಳಲಾಗಿದೆ. ಗಣೇಶ ಚತುರ್ಥಿಯಂದು ರಾತ್ರಿ 9.30ರ ಸುಮಾರಿನಲ್ಲಿ ವೆಂಕಟೇಶ್‌ಗೆ ಚಂದು ಕರೆ ಮಾಡಿ ಟೆಂಟ್ ಸರ್ಕಲ್‌ಗೆ ಬರುವಂತೆ ಸವಾಲು ಹಾಕಿದ್ದ ಎನ್ನಲಾಗಿದೆ. ಇದರಿಂದ ಕೆರಳಿದ ವೆಂಕಟೇಶ್ ಸ್ನೇಹಿತ ನವೀನ್ ಜೊತೆ ಟೆಂಟ್ ಸರ್ಕಲ್‌ನ ಯಜಮಾನ್ ಬಾರ್ ಬಳಿ ಬಂದಿದ್ದಾನೆ. ಈ ವೇಳೆ ಮಾತಿಗೆ ಮಾತು ಬೆಳೆದು ವೆಂಕಟೇಶ್‌ನನ್ನು ಚಂದು ಇರಿದಿದ್ದಾನೆ. ತಡೆಯಲು ಹೋದ ನವೀನ್‌ನನ್ನು ಚಂದು ಶೆಟ್ಟಿ ಇರಿದಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರನ್ನೂ ಕೆಆರ್. ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗಮಧ್ಯೆ ವೆಂಕಟೇಶ್ ಸಾವನ್ನಪ್ಪಿದ್ದು, ನವೀನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಪ್ರಕರಣ ದಾಖಲಿಸಿಕೊಂಡಿದ್ದ ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಪಿ.ಕೆ. ರಾಜು ತನಿಖೆ ಮುಂದುವರೆಸಿದ್ದರು. ಆರೋಪಿಗಳು ರಮ್ಮನಹಳ್ಳಿ ಬಳಿ ಇದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಇನ್ಸ್‌ಪೆಕ್ಟರ್ ಪಿ.ಕೆ. ರಾಜು, ಸಬ್ ಇನ್ಸ್‌ಪೆಕ್ಟರ್ ಸುನೀಲ್ ಹಾಗೂ ಸಿಬ್ಬಂದಿ ಐವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ ಎಂದು ಹೇಳಲಾಗಿದೆ.

ನಕ್ಕರೆ ಅದೇ ಸ್ವರ್ಗ

ಗಂಡ : ಎರಡು ಕಣ್ಣುಗಳಿವೆ ನಿನಗೆ, ಜೊತೆಗೆ ಎರಡು ಗಾಜುಗಳು, ಅಕ್ಕಿಯಲ್ಲಿ ಕಲ್ಲು ತೆಗೆಯೋಕೆ ಬರೋಲ್ವಾ?

ಹೆಂಡತಿ : ನಿಮಗೆ 30 ಹಲ್ಲುಗಳಿವೆ. ಜೊತೆಗೆ ಎರಡು ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದೀರಿ. ಕಲ್ಲುಗಳನ್ನು ಅಗಿಯೋಕೆ ಆಗಲ್ವಾ!?

ಮೈಸೂರು ಮಿತ್ರ
ಶನಿವಾರ, 3 ಸೆಪ್ಟೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಕೇಳಿದರೂ, ನೋಡಿದರೂ, ನೆನಪು ಮಾಡಿಕೊಂಡರು, ಹೇಳಿದರೂ, ಅನುಮೋದಿಸಿದರೂ ಧರ್ಮವು ಯಾವಾಗಲೂ ಮನುಷ್ಯನನ್ನು ಕಾಪಾಡುತ್ತದೆ.

– ಸುಭಾಷಿತ ಸುಧಾನಿಧಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಯಾರೂ ಇಲ್ಲದ ಊರಿಗೆ ಹೋಗಿ ನೀರು ಮಜ್ಜಿಗೆ ಬಯಸಿದಂತೆ

ನಿಮ್ಮ ಪತ್ರಗಳು

ಡಾ. ಸುಧಾಮೂರ್ತಿಯವರಿಗೆ ಅಕ್ಕ ನಾಗಾಲಾಂಬಿಕೆ ಪ್ರಶಸ್ತಿ ಸ್ವಾಗತಾರ್ಹ

ಮಾನ್ಯರೆ,



ಇನ್ಫೋಸಿಸ್ ಎಂಬ ಬೃಹತ್ ಐ.ಟಿ. ಸಂಸ್ಥೆಯ ಸರಳ, ಸಜ್ಜನ, ಜನಾನುರಾಗಿ, ಸಮಾಜ ಸೇವಕಿಯಾದ ಸುಧಾ ಮೂರ್ತಿಯವರಿಗೆ ಶಿವಮೊಗ್ಗ ಜಿಲ್ಲೆಯ ಗೋಣಿಬೀಡು ಗ್ರಾಮದ ಶ್ರೀ ಶೀಲಾ ಸಂಪಾದನಾ ಮಠದ ವತಿಯಿಂದ ಪ್ರತಿಷ್ಠಿತ ಅಕ್ಕ ನಾಗಲಾಂಬಿಕೆ ಪ್ರಶಸ್ತಿ ನೀಡುತ್ತಿರುವುದು ಶ್ರೀ ಮತಿ ಸುಧಾಮೂರ್ತಿಯವರ ಸಮಾಜ ಸೇವೆಗೆ ಸಂದ ಗೌರವವಾಗಿದೆ.

ಅಪಾರ ಶ್ರೀಮಂತಿಕೆಯಿದ್ದರೂ, ಸರಳ ಜೀವನ ನಡೆಸುತ್ತಿರುವ ಶ್ರೀಮತಿ ಸುಧಾ ಮೂರ್ತಿಯವರನ್ನು ನೋಡಿದ ಪ್ರತಿಯೊಬ್ಬರಿಗೂ ಭಕ್ತಿ ಭಾವನೆ ಉಂಟಾಗುವುದೆಂದರೆ ಅತಿಶಯೋಕ್ತಿಯಾಗಲಾರದು. ಮೃದು ಮಾತಿನ ಸುಧಾಮೂರ್ತಿಯವರು ಯಾವುದೇ ಪ್ರತಿಫಲವನ್ನು ಬಯಸದೆ ಸಮಾಜ ಸೇವೆ ಮಾಡುತ್ತಿರುವುದು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಸುಧಾಮೂರ್ತಿಯವರಿಗೆ ಅಕ್ಕ ನಾಗಾಲಾಂಬಿಕೆ ಪ್ರಶಸ್ತಿ ನೀಡುತ್ತಿರುವ ಗೋಣಿಬೀಡು ಗ್ರಾಮದ ಶ್ರೀ ಶೀಲಾ ಸಂಪಾದನಾ ಮಠಕ್ಕೆ ರಾಜ್ಯದ ಜನತೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಆನ್‌ಲೈನ್ ಸಮಸ್ಯೆ ಸರಿಪಡಿಸಿ

ಮಾನ್ಯರೆ,

ನಾನು ಮೈಸೂರಿನ ಕುವೆಂಪುನಗರ ವಾಸಿ. ನಮ್ಮ ಮನೆಯ ನೀರಿನ ಕಂದಾಯವನ್ನು ಆನ್‌ಲೈನ್‌ನಲ್ಲಿ ಮೇ ತಿಂಗಳವರೆಗೆ ಪಾವತಿ ಮಾಡುತ್ತಿದ್ದೆ. ಏನೂ ತೊಂದರೆ ಇರುತ್ತಿರಲಿಲ್ಲ. ಜನಗಳಿಗೂ ಅನುಕೂಲವಾಗಿತ್ತು. ನಂತರ ಅದರ ಮುಂದಿನ ತಿಂಗಳುಗಳಲ್ಲಿ gpay, paytm ಮುಂತಾದವುಗಳು data ವನ್ನು accept ಮಾಡುತ್ತಿಲ್ಲ. ಹೀಗಾಗಿ ನಾವೇ ಕಚೇರಿಗೆ ಹೋಗಿ ಕಟ್ಟಬೇಕಾಗಿದೆ. ಬಹುಶಃ ಸಾಫ್ಟ್‌ವೇರ್‌ನ ಸಮಸ್ಯೆ ಇರಬಹುದೇನೋ. ಸಂಬಂಧಪಟ್ಟವರು ಇತ್ತ ಗಮನ ಹರಿಸಿ ಜನಗಳು ಆನ್‌ಲೈನ್‌ನಲ್ಲಿಯೇ ಪಾವತಿ ಮಾಡಲು ಅನುವು ಮಾಡಿಕೊಡಬೇಕೆಂದು ಪ್ರಾರ್ಥನೆ.


–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ.

ಮನೆಗೊಂದು ತೆಪ್ಪ ಬೇಕಿದೆ!

ಮಾನ್ಯರೆ,

ರಾಮನಗರ ಮತ್ತು ಕೊಡಗು ಜಿಲ್ಲೆಯ ಮಡಿಕೇರಿ ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ಇತ್ತೀಚೆಗೆ ಸುರಿದ ಮಳೆ ಅಬ್ಬರ ನೋಡಿದರೆ.... ಮುಂದಿನ ದಿನಗಳಲ್ಲಿ ಯಾವುದಕ್ಕೂ ಮನೆಗೊಂದು ತೆಪ್ಪ ಇಟ್ಟುಕೊಳ್ಳುವುದೇ ಉತ್ತಮ ಅನಿಸುತ್ತಿದೆ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ವಿದ್ಯುತ್ ಕಂಬ ಸರಿಪಡಿಸಿ, ಅಪಾಯ ತಪ್ಪಿಸಿ

ಮಾನ್ಯರೆ,

ಈ ಚಿತ್ರ ಮೈಸೂರಿನ ಎಪಿಎಂಸಿ ಬಳಿಯ ರಿಂಗ್ ರಸ್ತೆ –ನಂಜನಗೂಡು ರಸ್ತೆಯ ಸಿಗ್ನಲ್ಲಿನ ಸಮೀಪ ಎಚ್.ಡಿ. ಕೋಟೆ ಕಡೆಗೆ ತೆರಳುವಾಗ ಎಡ ಭಾಗದ ಸರ್ವೀಸ್ ರಸ್ತೆಯ ಎಡ ಪಕ್ಕದಲ್ಲಿರುವ ವಿದ್ಯುತ್ ಕಂಬ ಮತ್ತು ಪೊದೆಯಲ್ಲಿ ಫ್ಯೂಜ್ ಕಳಚಿದ ಸಂಪರ್ಕಗಳು. ಒಂದು ವೇಳೆ ವಿದ್ಯುತ್ ಇದ್ದರೆ ಅಪಾಯ ಖಂಡಿತ. ದಯಮಾಡಿ ಸಂಬಂಧಪಟ್ಟ ಇಲಾಖೆ ಯವರು ಸರಿಪಡಿಸಿ ಅಪಾಯ ತಪ್ಪಿಸಿ.

– ಜಗದೀಶ ಬಿ ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.

ಬಡಾವಣೆಗಳು, ರಸ್ತೆ ಒಳಚರಂಡಿ ನಿರ್ಮಿಸುವಾಗ ಮಹಾರಾಜರ ನಗರ ಯೋಜನೆ ಮಾರ್ಗದರ್ಶನವಾಗಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ರಸ್ತೆ ಹಾಗೂ ಬಡಾವಣೆಗಳು ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತವಾಗುತ್ತಿದೆ. ಹೊಸ ಬಡಾವಣೆಗಳು ಹಾಗೂ ಒಳಚರಂಡಿ, ರಸ್ತೆಗಳನ್ನು ನಿರ್ಮಿಸುವಾಗ ದೂರ ದೃಷ್ಟಿ ಇಲ್ಲದೆ ನಿರ್ಮಾಣ ಮಾಡುವುದು ಇದಕ್ಕೆ ಪ್ರಮುಖ ಕಾರಣ ಇರಬಹುದೇನೋ.

ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಿಸಿದ ಊರ (ಈಗ ಬಡಾವಣೆಗಳು) ಒಮ್ಮೆ ವೀಕ್ಷಿಸಿದ್ದರೆ, ಎಲ್ಲಾ ಎತ್ತರದ ಪ್ರದೇಶಗಳಲ್ಲಿಯೇ ಇವೆ ಹಾಗೂ ಮಳೆಯಿಂದ ಜಲಾವೃತಗೊಂಡು ಹಾನಿಕಾರಕವಾದದ್ದು ಬಹಳ ಬಹಳ ಕಡಿಮೆ. ಅವರ ಕಾಲದಲ್ಲಿ ಮಳೆ ನೀರು ಹಾದು ಹೋಗುವುದಕ್ಕೆ ರಾಜಕಾಲುವೆಗಳನ್ನು ನಿರ್ಮಿಸಿದ್ದರು. ಹಾಗೂ ಮಳೆ ನೀರು ಶೇಖರಣೆ (ಸ್ಟೋರೇಜ್) ಮಾಡುವುದಕ್ಕೋಸ್ಕರ ದೊಡ್ಡ ಕೆರೆಗಳನ್ನು ನಿರ್ಮಿಸುತ್ತಿದ್ದರು. ಪ್ರಪ್ರಥಮವಾಗಿ ದೇಶದಲ್ಲಿ ಆಡಳಿತಕ್ಕೆ ಅನುಕೂಲಕರವಾಗಲಿ ಎಂದು ನಗರವನ್ನು ಏಳು ಮೊಹಲ್ಲಾಗಳಾಗಿ ವಿಂಗಡಿಸಿ ಸ್ವಚ್ಛತೆಗೆ ಅನುಗುಣವಾಗಿ ಒಳಚರಂಡಿ ವ್ಯವಸ್ಥೆ ಮಾಡಿದ ಮಹಾರಾಜರು ಯಾವ ಮಳೆಗೂ ಜಗ್ಗದೆ ಇಲ್ಲಿಯವರೆಗೂ ಸುಸಜ್ಜಿತವಾಗಿ ಇದ್ದ ಸಯ್ಯಾಜಿರಾವ್ ರಸ್ತೆ ಹಾಗೂ ದೊಡ್ಡಪೇಟೆ ರಸ್ತೆ (ಈಗಿನ ಅಶೋಕ ರಸ್ತೆ) ಹತ್ತಾರು ವರ್ಷಗಳಿಂದ ನವೀಕರಣಗೊಂಡಿದ್ದು, ಮಳೆ ಬಂದರೆ ಗುಂಡಿ ಬೀಳುವ ರಸ್ತೆಗಳಾಗಿವೆ. ಜನರ ಹಿತಾಸಕ್ತಿಗಳ ಅನುಗುಣವಾಗಿ ರೂಪಿಸಿದ ಮಹಾರಾಜರ ಯೋಜನೆಗಳು ಇತ್ತೀಚೆಗೆ ನಿರ್ಮಿಸುವ ಬಡಾವಣೆಗಳ ರೂಪು–ರೇಷೆಗಳಿಗೆ ಮಾರ್ಗದರ್ಶನವಾಗಲಿ.

–ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಅಂಟಾರ್ಟಿಕಾಗೆ ಆಪತ್ತು ಅಪಾಯದಲ್ಲಿ ಜಗತ್ತು

ಮಾನವ ಪ್ರಕೃತಿಯ ಮೇಲೆ ನಿರಂತರವಾಗಿ ನಡೆಸುತ್ತಿರುವ ಅನಾಚಾರಗಳಿಂದ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಪ್ರಕೃತಿಯು ಪ್ರತಿಯಾಗಿ ಭೂಕಂಪ, ಚಂಡಮಾರುತ, ಸುನಾಮಿಗಳ ಮೂಲಕ ಮಾನವನಿಗೆ ಎಚ್ಚರಿಕೆ ನೀಡುತ್ತಾ ಬಂದಿದೆ. ಆದರೂ ಪಾಠ ಕಲಿಯದ ಮಾನವನ ಮೇಲೆ ಪ್ರಕೃತಿಯು ತನ್ನ ವಿನಾಶಕಾರಿ ಅಸ್ತ್ರವನ್ನು ಪ್ರಯೋಗಿಸುವ ಸನ್ನಾಹದಲ್ಲಿದ್ದಾಳೆ. ಸಾವಿರಾರು ಕಿ.ಮೀ. ದೂರದ ಅಜ್ಞಾತ ಪ್ರದೇಶಗಳಲ್ಲಿ ಲಕ್ಷಾಂತರ ವರ್ಷಗಳಿಂದ ಲಕ್ಷಾಂತರ ಕಿ.ಮೀ. ವಿಸ್ತೀರ್ಣದಲ್ಲಿ ವ್ಯಾಪಿಸಿರುವ ಕಬ್ಬಿಣಕ್ಕಿಂತ ಗಟ್ಟಿಯಾಗಿ ಉಳಿದಿರುವ ಹಿಮಗಲ್ಲುಗಳ ಹಾಳೆಗಳು ಕರಗಲಾರಂಭಿಸಿವೆ.

ಭೂಮಿಯ ಶೇ. 70 ರಷ್ಟು ಶುದ್ಧ ಜಲವು ಅಂಟಾರ್ಟಿಕಾ ಮತ್ತು ಅರ್ಕಟಿಕ್ ಪ್ರದೇಶದ ಗ್ರೀನ್‌ಲ್ಯಾಂಡ್‌ನಲ್ಲಿ ಘನೀಕೃತ ಹಿಮಗಲ್ಲ ಹಾಳೆಗಳಾಗಿ ಇವೆ. ಈ ಹಿಮಗಲ್ಲು ಹಾಳೆಗಳು (ಗ್ಲೇಸಿಯರ್ಸ್) ಯಾವುದೇ ರೀತಿಯಲ್ಲಿ ಹವಾಮಾನ ಬದಲಾವಣೆಯಾದರೂ ಕರಗುವುದಿಲ್ಲ ಎಂದು ಹೆಚ್ಚಿನ ವಿಜ್ಞಾನಿಗಳು ಭಾವಿಸಿದ್ದು ಸುಳ್ಳಾಗುತ್ತಿದೆ. ಅಂಟಾರ್ಟಿಕಾ ಖಂಡದ ಮೂರನೇ ಎರಡು ಭಾಗದಲ್ಲಿರುವ ಗ್ಲೆಸಿಯರ್‌ಗಳು ಒಂದು ವೇಳೆ ಸಂಪೂರ್ಣ ಕರಗಿದಲ್ಲಿ ಮಹಾಸಾಗರಗಳ ನೀರಿನ ಮಟ್ಟ 52 ಮೀಟರ್‌ನಷ್ಟು ಏರಿಕೆಯಾಗುವ ಸಂಭವವಿದೆ. ಅಂಟಾರ್ಟಿಕಾ ಹಾಗೂ ಗ್ರೀನ್‌ಲ್ಯಾಂಡ್‌ನಲ್ಲಿರುವ ನಿರ್ಗಲ್ಲುಗಳು ಏಕಾಲದಲ್ಲಿ ಕರಗಿದಲ್ಲಿ ಸಾಗರಗಳಲ್ಲಿನ ನೀರಿನ ಮಟ್ಟ 65 ಮೀಟರ್‌ನಷ್ಟು ಏರಿಕೆಯಾಗಿ ಅಕ್ಷರಶಃ ಜಲಪ್ರಳಯವಾಗಿ ಜಗತ್ತಿನ ವಿನಾಶ ಸಂಭವಿಸಬಹುದು. ಅಂಟಾರ್ಟಿಕ ಮತ್ತು ಆರ್ಕಟಿಕ್ ಪ್ರದೇಶದಲ್ಲಿ 5 ಮಿಲಿಯನ್ ಕ್ಯೂಬಿಕ್ ಮೈಲುಗಳಷ್ಟು ಹರಡಿರುವ ಈ ಹಿಮ ಪದರಗಳು ಕರಗಲು ಸಾಮಾನ್ಯ ವಾತಾವರಣದಲ್ಲಿ ಐದು ಸಾವಿರ ವರ್ಷಗಳು ಬೇಕೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಆದರೆ ಭೀಮಗಾತ್ರದ ಈ ಹಿಮ ಬಂಡೆಗಳಲ್ಲಿ ಸಣ್ಣ ಮಟ್ಟದ ಬದಲಾವಣೆಯು ಜಗತ್ತಿಗೆ ವಿನಾಶಕಾರಿಯಾಗಲಿದೆ.

:ಡೂಮ್ಸಡೇ ಗ್ಲೆಸಿಯರ್ ಹಿಮನದಿ:

ಪ್ರಕೃತಿಯೊಳಗಿನ ಅಂತರ್ ಸಂಬಂಧಗಳು ವಿಸ್ಮಯ, ಕೌತುಕಗಳಿಂದ ತುಂಬಿರುತ್ತದೆ. ಡೂಮ್ಸಡೇ ಹಿಮನದಿ ಪ್ರಕೃತಿಯೊಳಗಿನ ವಿಸ್ಮಯಗಳಲ್ಲಿ ಸೇರಿದೆ. ಈ ನದಿಯು 1208 ಕಿ.ಮೀ. ಅಗಲವಾಗಿದ್ದು, 1.9 ಲಕ್ಷ ಚ.ಕಿ.ಮೀ. ನಷ್ಟು ವಿಸ್ತೀರ್ಣ ಹೊಂದಿದೆ. 595 ಬಿಲಿಯನ್ ಟನ್‌ನಷ್ಟು ನೀರನ್ನು ಘನೀಕರಿಸಿಕೊಂಡಿರುವ ಈ ನದಿಯು ಕರಗಿದಲ್ಲಿ ಸಮುದ್ರಗಳ ನೀರಿನ ಮಟ್ಟದಲ್ಲಿ ಅರ್ಧ ಮೀಟರ್‌ನಷ್ಟು ಏರಿಕೆಯಾಗಲಿದೆ. ಡೂಮ್ಸಡೇ ಹಿಮನದಿಯು ಅಂಟಾರ್ಟಿಕಾದ ಹಿಮಗಲ್ಲುಗಳು ಕರಗಿ ಸಾಗರಕ್ಕೆ ಹರಿಯದಂತೆ ತಡೆಯುವ ಅಣೆಕಟ್ಟೆಯಂತೆ ಕಾರ್ಯ ನಿರ್ವಹಿಸುತ್ತಿದೆ. ವರ್ಷಕ್ಕೆ ಎರಡು ಕಿ.ಮೀ. ವೇಗದಲ್ಲಿ ಹರಿಯುವ ಈ ನದಿಯು ಮುಂದಿನ 200 ರಿಂದ 900 ವರ್ಷಗಳಲ್ಲಿ ಸಂಪೂರ್ಣ ಕರಗಿ ಸಾಗರದೊಡಲು ಸೇರಲಿದೆ ಎಂದು ಅಂದಾಜು ಮಾಡಲಾಗಿದೆ.

:ಅಧ್ಯಯನ ಮಾಹಿತಿ:

ಹಿಮನದಿಯ ಅಸ್ತಿತ್ವಕ್ಕೆ ಆಧಾರವಾಗಿರುವ ಅದರ ತಳಭಾಗದಲ್ಲಿ ಹಿಮ ಕರಗದೇ ಗಟ್ಟಿಯಾಗಿರಬೇಕು ಹಾಗೂ ಶಾಖವಿರಬಾರದು. ಆದರೆ 2016 ರಲ್ಲಿ ಈ ಹಿಮನದಿಯಲ್ಲಿ ವೇಗವಾಗಿ ವಿಸ್ತಾರ ವಾಗುತ್ತಿರುವ ಭಾರೀ ಗಾತ್ರದ ಕುಳಿಯೊಂದನ್ನು ಪತ್ತೆ ಹಚ್ಚಲಾಗಿದೆ. ನೂರಾರು ಅಡಿ ದಪ್ಪವಿರುವ ಈ ಹಿಮನದಿಯೊಳಗಿನ ಹಿಮ ಬಂಡೆಗಳಲ್ಲಿನ ಆಂತರಿಕ ಒತ್ತಡದಿಂದ ಉತ್ಪತ್ತಿಯಾಗಿರುವ ಶಾಖಾ ಹಾಗೂ ಬಿಸಿ ನೀರಿನಿಂದ ಹಿಮನದಿಯು ವೇಗವಾಗಿ ಕರಗುತ್ತಿದೆ ಎಂದು ಅಧ್ಯಯನ ವರದಿ ತಿಳಿಸಿದೆ. ಇದು ಮುಂದುವರಿದಲ್ಲಿ ಹಿಮನದಿಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿದೆ.



> ಅಂಟಾರ್ಟಿಕಾ ಹಾಗೂ ಗ್ರೀನ್‌ಲ್ಯಾಂಡ್‌ನಲ್ಲಿರುವ ನಿರ್ಗಲ್ಲುಗಳು ಏಕಕಾಲದಲ್ಲಿ ಕರಗಿದಲ್ಲಿ ಸಾಗರಗಳಲ್ಲಿನ ನೀರಿನ ಮಟ್ಟ 65 ಮೀಟರ್‌ನಷ್ಟು ಏರಿಕೆಯಾಗಿ ಅಕ್ಷರಶಃ ಜಲಪ್ರಳಯವಾಗಿ ಜಗತ್ತಿನ ವಿನಾಶ ಸಂಭವಿಸಬಹುದು. ಅಂಟಾರ್ಟಿಕ ಮತ್ತು ಆರ್ಕಟಿಕ್ ಪ್ರದೇಶದಲ್ಲಿ 5 ಮಿಲಿಯನ್ ಕ್ಯೂಬಿಕ್ ಮೈಲುಗಳಷ್ಟು ಹರಡಿರುವ ಈ ಹಿಮ ಪದರಗಳು ಕರಗಲು ಸಾಮಾನ್ಯ ವಾತಾವರಣದಲ್ಲಿ ಐದು ಸಾವಿರ ವರ್ಷಗಳು ಬೇಕೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಆದರೆ ಭೀಮಗಾತ್ರದ ಈ ಹಿಮ ಬಂಡೆಗಳಲ್ಲಿ ಸಣ್ಣ ಮಟ್ಟದ ಬದಲಾವಣೆಯು ಜಗತ್ತಿಗೆ ವಿನಾಶಕಾರಿಯಾಗಲಿದೆ.

ಅಂಟಾರ್ಟಿಕಾದ ಹಿಮಬಂಡೆಗಳು ಭಾಗಶಃ ಕರಗಿದರೂ ಜಾಗತಿಕವಾಗಿ ಸುಮಾರು 1 ಬಿಲಿಯನ್ ಜನರು ಸಂಕಷ್ಟಕ್ಕೆ ಬಲಿಯಾಗಲಿದ್ದಾರೆ. ಇದರಲ್ಲಿ 770 ಮಿಲಿಯನ್ ಜನರು 10 ಮೀಟರ್‌ನಷ್ಟು ಸಾಗರದ ನೀರಿನಲ್ಲಿದ್ದರೆ, 230 ಮಿಲಿಯನ್ ಜನರು 1 ಮೀಟರ್‌ನಷ್ಟು ನೀರಿನಲ್ಲಿರಬೇಕಾಗುತ್ತದೆ. ವಿಜ್ಞಾನಿಗಳು ಘನೀಕರಿಸುತ್ತಿರುವ ಹಿಮಪಾತ ಹಾಗೂ ಕರಗಿ ಸಾಗರ ಸೇರುತ್ತಿರುವ ಹಿಮಗಲ್ಲುಗಳ ಪ್ರಮಾಣ ಆಧರಿಸಿ ಉಳಿದಿರುವ ಹಿಮಗಲ್ಲುಗಳ ಗಾತ್ರ ಹಾಗೂ ಪ್ರಮಾಣವನ್ನು ಅಂದಾಜು ಮಾಡುತ್ತಾರೆ. ಹವಾಮಾನದಲ್ಲಾಗುತ್ತಿರುವ ಬದಲಾವಣೆಗಳಿಗೆ ಅಂಟಾರ್ಟಿಕಾ ಪ್ರದೇಶ ಅತ್ಯಂತ ಅಪಾಯಕಾರಿಯಾಗಿ ಪ್ರತಿಕ್ರಿಯಿಸುತ್ತಿರುವುದು ವಿಜ್ಞಾನಿಗಳಲ್ಲಿ ಚಿಂತೆಯನ್ನುಂಟು ಮಾಡಿದೆ.

:ಗ್ರೀನ್ ಲ್ಯಾಂಡ್ ಹಿಮಬಂಡೆಗಳು:

ಆರ್ಕಟಿಕ್ ಪ್ರದೇಶದ ಗ್ರೀನ್‌ಲ್ಯಾಂಡ್ ಹಿಮ ಮರುಭೂಮಿಯ ಬಂಡೆಗಳು ಸಾಗರಗಳ ನೀರಿನ ಮಟ್ಟ 7.4 ಮೀಟರ್ ಏರಿಕೆಯಾಗುವಷ್ಟು ನೀರನ್ನು ಘನೀಕೃತ ಹಿಮಬಂಡೆಗಳ ರೂಪದಲ್ಲಿ ಶೇಖರಿಸಿಕೊಂಡಿದೆ. ಈ ಹಿಮ ಬಂಡೆಗಳು 1992 ರಿಂದ 2018ರ ಅವಧಿಯಲ್ಲಿ 3800 ಬಿಲಿಯನ್ ಟನ್‌ನಷ್ಟು ಕರಗಿದ್ದು, ಇದರಿಂದಾಗಿ ಮಹಾಸಾಗರಗಳ ನೀರಿನ ಮಟ್ಟದಲ್ಲಿ ಹನ್ನೊಂದು ಮಿಲಿಮೀಟರ್ ಏರಿಕೆಯಾಗಿದೆ.

:ಪಶ್ಚಿಮ ಅಂಟಾರ್ಟಿಕಾ ಹಿಮ ಬಂಡೆಗಳು:

ಈ ಪ್ರದೇಶದ ಹಿಮಬಂಡೆಗಳು ಕೂಡ ಸಾಗರಗಳ ನೀರಿನ ಮಟ್ಟ 5.3 ಮಿ.ಮೀ. ಏರುವಷ್ಟು ಘನೀಕೃತ ಹಿಮವನ್ನು ಶೇಖರಿಸಿಕೊಂಡಿದೆ. ಈ ಹಿಮಬಂಡೆಗಳು ಕೂಡ 1992 ರಿಂದ 2017ರ ಅವಧಿಯಲ್ಲಿ 2000 ಬಿಲಿಯನ್ ಟನ್‌ನಷ್ಟು ಕರಗಿ ಸಾಗರಗಳ ನೀರಿನ ಮಟ್ಟವು ಆರು ಮಿಲಿಮೀಟರ್ ಏರಿಕೆ ದಾಖಲಿಸಿದೆ.

ಇವುಗಳಲ್ಲದೇ ಭಾರೀ ವಿಸ್ತೀರ್ಣವುಳ್ಳ ಹಿಮಾವೃತ ಪೂರ್ವ ಅಂಟಾರ್ಟಿಕಾವು ಉಳಿದ ಪ್ರದೇಶಗಳಷ್ಟು ಅಪಾಯದಲ್ಲಿರದ ಕಾರಣ ಜಾಗತಿಕ ಮಟ್ಟದಲ್ಲಿ ಇನ್ನೂ ಗಮನ ಸೆಳೆದಿಲ್ಲ. ಈ ಪ್ರದೇಶದ ಬೃಹತ್ ಭಾಗವು ಮಿಲಿಯಾಂತರ ವರ್ಷಗಳಿಂದ ಪ್ರಾಕೃತಿಕ ಹವಾಮಾನ ಬದಲಾವಣೆಗೆ ಹೊಂದಿಕೊಂಡಿರುವುದರಿಂದ ಉಳಿದುಕೊಂಡಿವೆ ಹಾಗೂ ಸಾಗರಗಳ ನೀರಿನ ಮಟ್ಟ ಏರಿಕೆಯನ್ನು ತಡೆಗಟ್ಟಿದೆ. ಆದರೆ ಇತ್ತೀಚಿನ ಅಧ್ಯಯನಗಳಿಂದ ತಿಳಿದಂತೆ ಕಳೆದ ಎರಡು ದಶಕಗಳಲ್ಲಿ ಈ ಪ್ರದೇಶವು ಹವಾಮಾನ ಬದಲಾವಣೆಯಿಂದ ಅತ್ಯಂತ ನಾಜೂಕು ಪರಿಸ್ಥಿತಿಯತ್ತ ಧಾವಿಸುತ್ತಿದೆ. ಈ ಪ್ರದೇಶವಲ್ಲದೇ ಟೊಟನ್ ಹಾಗೂ ವಾಂಡರ್‌ಫ್ಲೆರ್ಡ್ ಹೆಸರಿನ ಹಿಮಹಾಳೆಗಳು ಕರಗಲಾರಂಭಿಸಿದ್ದು, ಇನ್ನೂ ಕೆಲವೇ ಸಮಯದಲ್ಲಿ ಕಣ್ಮರೆಯಾಗಲಿವೆ. ಇದೇ ರೀತಿ ಸಾಗರದ ಅಂತರಾಳದಲ್ಲಿರುವ ವಿಲ್ಕಿಸ್‌ಲ್ಯಾಂಡ್ ಎಂಬ ನೀರ್ಗಲ್ ಪ್ರದೇಶವು ಅಸ್ಥಿರವು, ದುರ್ಬಲವು ಆಗುತ್ತಿದೆ. ಇತ್ತೀಚಿನ ಅಧ್ಯಯನದಂತೆ ವಿಲ್ಕಿಸ್ ಲ್ಯಾಂಡ್‌ನ ಹಿಮಹಾಳೆಗಳು ಕಳೆದ ನಾಲ್ಕು ಲಕ್ಷ ವರ್ಷಗಳಲ್ಲಿ ಜಾಗತಿಕ ತಾಪಮಾನದಲ್ಲಾದ 1 ರಿಂದ 2 ಡಿಗ್ರಿಯಷ್ಟು ಹೆಚ್ಚಳದಿಂದ 700 ಕಿ.ಮೀ. ವಿಸ್ತೀರ್ಣ ಕಳೆದುಕೊಂಡು ಪ್ರಸಕ್ತ ಸ್ಥಿತಿಯಲ್ಲಿವೆ. ಈ ಪ್ರಮಾಣದ ನಾಶದಿಂದ ತಿಳಿಯುವ ಅಂಶವೆಂದರೆ ಪೂರ್ವ ಅಂಟಾರ್ಟಿಕಾದ ಹಿಮಹಾಳೆಗಳು ಅತ್ಯಂತ ಸೂಕ್ಷ್ಮ ಹಾಗೂ ಸಂವೇದನಾಶೀಲವಾಗಿದ್ದು ತಾಪಮಾನದಲ್ಲಾಗುವ ಕನಿಷ್ಠ ಹೆಚ್ಚಳಕ್ಕೂ ಪ್ರತಿಕ್ರಿಯೆ ತೋರುತ್ತವೆ.

:ಅಪಾಯ ಹಾಗೂ ಸಮಾಧಾನ:

ಜಾಗತಿಕ ತಾಪಮಾನದ ಹೆಚ್ಚಳದಿಂದಾಗುವ ಹಿಮಕರುವಿಕೆಯು ಹಿಮಪಾತದಿಂದ ಸರಿದೂಗುವ ಸಾಧ್ಯತೆಯಿಂದಾಗಿ ಮುಂದಿನ ಕೆಲವು ವರ್ಷಗಳ ಕಾಲ ಈಗ ಉಳಿದಿರುವ ಹಿಮಹಾಳೆಗಳು ಕರಗದೇ ಉಳಿಯಬಹುದು. ಈ ವಿಷಯದಲ್ಲಿ ಸಮರ್ಪಕ ಅಧ್ಯಯನವಾಗದಿದ್ದರೂ 2100ನೇ ಇಸವಿ ವೇಳೆಗೆ ಪೂರ್ವ ಅಂಟಾರ್ಟಿಕಾದ ಹಿಮಕರಗುವಿಕೆಯಿಂದಾಗಿ ಸಾಗರ ಮಟ್ಟ ಕೇವಲ 2 ಸೆ.ಮೀ. ಏರುವ ಸಾಧ್ಯತೆ ಇದೆ. ಆದರೆ ಮುಂದಿನ ಕೆಲವು ಶತಮಾನಗಳಲ್ಲಿ ಪ್ರಪಂಚವು ವಾತಾವರಣಕ್ಕೆ ಬಿಡುಗಡೆ ಮಾಡುವ ಇಂಗಾಲದ ಪ್ರಮಾಣ ಆಧರಿಸಿ ಪೂರ್ವ ಅಂಟಾರ್ಟಿಕಾದ ಹಿಮಬಂಡೆಗಳ ಕರಗುವಿಕೆ ನಿರ್ಧಾರವಾಗುತ್ತದೆ. 2100 ರ ನಂತರವೂ ವಾತಾವರಣಕ್ಕೆ ಬಿಡುಗಡೆಯಾಗುವ ಇಂಗಾಲದ ಪ್ರಮಾಣ ಹಾಗೂ ತಾಪಮಾನ ಹೆಚ್ಚುತ್ತಿದ್ದರೆ ಪೂರ್ವ ಅಂಟಾರ್ಟಿಕಾದ ಹಿಮಬಂಡೆಗಳು ಕರಗಿ ಸಾಗರಗಳ ನೀರಿನ ಮಟ್ಟ ಒಂದರಿಂದ ಮೂರು ಮೀಟರ್‌ನಷ್ಟು ಏರಿಕೆಯಾಗಲಿದೆ. ಇದರೊಂದಿಗೆ ಗ್ರೀನ್‌ಲ್ಯಾಂಡ್ ಹಾಗೂ ಪಶ್ಚಿಮ ಅಂಟಾರ್ಟಿಕಾ ಹಿಮಬಂಡೆಗಳು ಕರಗಿದಲ್ಲಿ ಜಗತ್ತಿನ ಕರಾವಳಿಗಳಲ್ಲಿ ವಾಸಿಸುತ್ತಿರುವ ಕೋಟ್ಯಾಂತರ ಜನರ ಜೀವನ ದುರ್ಭರವಾಗಲಿದೆ. ವಿಶೇಷವಾಗಿ 2050ರ ವೇಳೆಗೆ ಹತ್ತು ಮಿಲಿಯನ್ ಜನಸಂಖ್ಯೆ ಇರುವ ಇಂಡೋನೇಷ್ಯಾದ ರಾಜಧಾನಿ ಜಕಾರ್ತಾದೊಂದಿಗೆ ಭಾರತದ ಮುಂಬೈ, ಚೀನಾದ ಶಾಂಘೈ, ಅಮೆರಿಕದ ನ್ಯೂಯಾರ್ಕ್ ಹಾಗೂ ಮಿಯಾಮಿ ಮಹಾನಗರಗಳೊಂದಿಗೆ ಕಿರಿಬಾತಿ, ಟುವಾಲು ಹಾಗೂ ಮಾಲ್ಡೀವ್ಸ್‌ನಂತಹ ಪುಟ್ಟ ದ್ವೀಪ ರಾಷ್ಟ್ರಗಳು ಅಪಾಯಕ್ಕೀಡಾಗಲಿವೆ.

ಪ್ರಾಯಶಃ ಪ್ಯಾರಿಸ್ ಒಪ್ಪಂದದಂತೆ ವಿಶ್ವದ ಎಲ್ಲ ದೇಶಗಳು ಒಂದಾಗಿ ಜಾಗತಿಕ ತಾಪಮಾನದ ಪ್ರಮಾಣವನ್ನು 2 ಡಿಗ್ರಿ ಸೆಲ್ಸಿಯಸ್‌ಗೆ ನಿಯಂತ್ರಿಸಿ, ಅಂಟಾರ್ಟಿಕಾದ ಹಿಮಕರಗುವಿಕೆಯಿಂದ ಸಾಗರಗಳ ನೀರಿನ ಏರಿಕೆ ಮಟ್ಟವನ್ನು ಮುಂದಿನ ಕೆಲವು ಶತಮಾನಗಳವರೆಗೆ 0.5 ಮೀಟರ್ ಕೆಳಗೆ ನಿಯಂತ್ರಿಸಿದಲ್ಲಿ ಜಗತ್ತನ್ನು ಜಲಪ್ರಳಯದಿಂದ ರಕ್ಷಿಸುವ ಸಾಧ್ಯತೆ ಇದೆ.

ಮೈಮುಲ್ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ



ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಆಗಸ್ಟ್ 28 ರಂದು ಕುವೆಂಪುನಗರದ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಒಕ್ಕೂಟದ ಅಧ್ಯಕ್ಷರಾದ ಪಿ.ಎಂ. ಪ್ರಸನ್ನ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಒಕ್ಕೂಟದ ಆಡಳಿತ ಮಂಡಳಿಯ ಸದಸ್ಯರಾದ ಎ.ಟಿ. ಸೋಮಶೇಖರ್, ಕೆ.ಜಿ. ಮಹೇಶ್, ಕೆ. ಈರೇಗೌಡ, ಕೆ.ಎಸ್. ಕುಮಾರ್, ಓಂಪ್ರಕಾಶ್, ಕೆ. ಉಮಾಶಂಕರ್, ಹೆಚ್.ಡಿ. ರಾಜೇಂದ್ರ, ಆರ್. ಚೆಲುವರಾಜು, ಬಿ.ಎನ್. ಸದಾನಂದ, ಶ್ರೀಮತಿ ದ್ರಾಕ್ಷಾಯಿಣಿ, ಶ್ರೀಮತಿ ಲೀಲಾ, ಶ್ರೀಮತಿ ಎ. ಶಿವಗಾಮಿ, ಶ್ರೀಮತಿ ನೀಲಾಂಬಿಕೆ ಮಹೇಶ್ ಕುರಹಟ್ಟಿ, ಎಸ್.ಸಿ. ಅಶೋಕ್, ಸಹಕಾರ ಸಂಘಗಳ ಜಂಟಿ ನಿಬಂಧಕ ಡಾ. ಜಿ. ಉಮೇಶ್, ವ್ಯವಸ್ಥಾಪಕ ನಿರ್ದೇಶಕ ಬಿ.ಎನ್. ಜಯಕುಮಾರ್, ಒಕ್ಕೂಟದ ಎಲ್ಲಾ ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು, ಪ್ರತಿನಿಧಿಗಳು ಉಪಸ್ಥಿತರಿದ್ದರು.

ಉತ್ತಮ ಅಕ್ಕಿಯಲ್ಲಿ ಪಡಿತರ ಅಕ್ಕಿ ಮಿಶ್ರಣ ಮಾಡಿ ಸಹಕಾರ ಮಹಾ ಮಂಡಳಿಗೆ ನೀಡಿ ವಂಚನೆ

28.50 ಲಕ್ಷ ಮೌಲ್ಯದ 1900.50 ಕ್ವಿಂಟಾಲ್ ಅಕ್ಕಿ ಜಪ್ತಿ

ನಂಜನಗೂಡು, ಸೆ.2–ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಮಾಡಲು ರಾಜ್ಯ ಸಹಕಾರ ಮಾರಾಟ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ರೈಸ್ ಮಿಲ್ ಮಾಲೀಕ ನೋರ್ವ ರೈತರಿಂದ ಖರೀದಿ ಮಾಡಿದ ಭತ್ತದ ಉತ್ತಮ ಗುಣಮಟ್ಟದ ಅಕ್ಕಿ ಜೊತೆಗೆ ಪಡಿತರ ಅಕ್ಕಿಯನ್ನು ಮಿಶ್ರಣ ಮಾಡಿ ಸಹಕಾರ ಮಹಾ ಮಂಡಳಿಗೆ ನೀಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದ್ದು, ರೈಸ್ ಮಿಲ್‌ನಿಂದ 28.50 ಲಕ್ಷ ರೂ. ಮೌಲ್ಯದ 1900.50 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ವಿವರ: ನಂಜನಗೂಡು ತಾಲೂಕು ಬಿಳಿಗೆರೆ ಹೋಬಳಿ ಕಲ್ಲಮಳ್ಳಿ ಗ್ರಾಮದ ಶಂಭುಲಿಂಗೇಶ್ವರ ರೈಸ್ ಮಿಲ್ ಮಾಲೀಕನ ಜೊತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿಯವರು ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಮಾಡಲು ಒಪ್ಪಂದ ಮಾಡಿಕೊಂಡಿದ್ದು, ಅದರಂತೆ ರೈಸ್ ಮಿಲ್ ಮಾಲೀಕ 1 ಕ್ವಿಂಟಾಲ್ ಭತ್ತಕ್ಕೆ 67 ಕೆ.ಜಿ. ಅಕ್ಕಿಯನ್ನು ಸಹಕಾರ ಮಾರಾಟ ಮಂಡಳಿಗೆ ನೀಡಬೇಕಾಗುತ್ತದೆ.

2022–23ನೇ ಸಾಲಿನಲ್ಲಿ 5621.30 ಕ್ವಿಂಟಾಲ್ ಭತ್ತ ಖರೀದಿ ಮಾಡಲು ಒಪ್ಪಂದವಾಗಿದ್ದು, ಈತ ಈವರೆಗೆ ಭತ್ತ ಹಲ್ಲಿಂಗ್ ಮಾಡಿದ ನಂತರ 1319.50 ಕ್ವಿಂಟಾಲ್ ಅಕ್ಕಿಯನ್ನು ಸಹಕಾರ ಮಾರಾಟ ಮಂಡಳಿಗೆ ಹಸ್ತಾಂತರಿಸಿದ್ದಾನೆ. ಈ ನಡುವೆ ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ನಂಜನಗೂಡು ತಹಶೀಲ್ದಾರ್ ಶಿವಮೂರ್ತಿ, ಆಹಾರ ಶಿರಸ್ತೇದಾರ್ ಎಂ.ಟಿ.ಅರವಿಂದ್ ನೇತೃತ್ವದ ತಂಡ ಆ.18ರಂದು ರೈಸ್ ಮಿಲ್ ಮೇಲೆ ದಾಳಿ ನಡೆಸಿದೆ. ಈ ವೇಳೆ ಪಡಿತರ ಅಕ್ಕಿಯನ್ನು ಉತ್ತಮ ಅಕ್ಕಿಯೊಂದಿಗೆ ಬೆರೆಸುತ್ತಿರುವುದು ಕಂಡು ಬಂದಿದ್ದು, ಕೂಲಿ ಕಾರ್ಮಿಕರ ಸಹಕಾರದೊಂದಿಗೆ ಅಧಿಕಾರಿಗಳು ರೈಸ್ ಮಿಲ್‌ನ ಗೋಡೌನ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದ ಅಕ್ಕಿಯನ್ನು ಆ.18ರಿಂದ 27ರವರೆಗೆ ತಲಾ 50 ಕೆ.ಜಿ.ಯಂತೆ ಮೂಟೆಗಳನ್ನು ನಂತರ ತೂಕ ಹಾಕಿದ್ದಾರೆ.

ರೈಸ್ ಮಿಲ್‌ನಲ್ಲಿ ಒಟ್ಟು 1900.50 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದ್ದು, ಪ್ರತೀ ಕೆ.ಜಿ.ಗೆ 15 ರೂ.ಗಳಂತೆ ಈ ಅಕ್ಕಿಯ ಮೌಲ್ಯ 28,50,750 ರೂ. ಎಂದು ಅಂದಾಜಿಸಲಾಗಿದೆ. ರೈತರಿಂದ ಖರೀದಿಸಿದ ಭತ್ತದಿಂದ ಬಂದ ಉತ್ತಮ ಅಕ್ಕಿಯನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಳ್ಳುತ್ತಿದ್ದ ರೈಸ್ ಮಿಲ್ ಮಾಲೀಕ, ಸುತ್ತಮುತ್ತಲ ಗ್ರಾಮಸ್ಥರಿಂದ ಕೆ.ಜಿ.ವೊಂದಕ್ಕೆ 10 ರೂ.ಗಳಂತೆ ಖರೀದಿ ಮಾಡಿದ ಪಡಿತರ ಅಕ್ಕಿಯನ್ನು ಉತ್ತಮ ಗುಣಮಟ್ಟದ ಅಕ್ಕಿಯೊಂದಿಗೆ ಮಿಶ್ರಣ ಮಾಡಿ ಸಹಕಾರ ಮಾರಾಟ ಮಹಾ ಮಂಡಳಿಗೆ ನೀಡುವುದರ ಮೂಲಕ ಸರ್ಕಾರವನ್ನು ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ. ಈತನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಬಿಳಿಗೆರೆ ಠಾಣೆ ಸಬ್ ಇನ್ಸ್‌ಪೆಕ್ಟರ್ ಆರತಿ ಅವರು ತನಿಖೆ ಮುಂದುವರೆಸಿದ್ದಾರೆ.

ಕಾರು ಡಿಕ್ಕಿ: ಪಾದಚಾರಿ ಸಾವು

ಬಿಳಿಕೆರೆ, ಸೆ.2–ಕಾರು ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿದ ಘಟನೆ ಹುಣಸೂರು ತಾಲೂಕು ಕುಟ್ಟವಾಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ತ್ಯಾಗರಾಜು(45) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ಆ.30ರಂದು ಸಂಜೆ ಪಡುಕೋಟೆ–ಗದ್ದಿಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅತೀ ವೇಗವಾಗಿ ಬಂದ ಕೆಂಪು ಬಣ್ಣದ ಕಾರು ಈತನಿಗೆ ಡಿಕ್ಕಿ ಹೊಡೆದಿದೆ.

ಅಪಘಾತದ ನಂತರ ಚಾಲಕ ಕಾರನ್ನು ನಿಲ್ಲಿಸದೇ ಪರಾರಿಯಾಗಿದ್ದಾನೆ. ತೀವ್ರವಾಗಿ ಗಾಯಗೊಂಡು ತ್ಯಾಗರಾಜು ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಬ್ಬಿನ ಗದ್ದೆಯಲ್ಲಿ ಗಾಂಜಾ ಬೆಳೆ: ತಂದೆ–ಮಗನ ಬಂಧನ

ಹೆಚ್.ಡಿ.ಕೋಟೆ, ಸೆ.2–ಕಬ್ಬಿನ ಗದ್ದೆಯಲ್ಲಿ ಗಾಂಜಾ ಬೆಳೆ ಪತ್ತೆ ಮಾಡಿದ ಹೆಚ್.ಡಿ.ಕೋಟೆ ಠಾಣೆ ಪೊಲೀಸರು 250 ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ತಂದೆ ಹಾಗೂ ಮಗನನ್ನು ಬಂಧಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಹೈರಿಗೆ ಗ್ರಾಮದ ನಾಗನಾಯಕ(62) ಮತ್ತು ಆತನ ಮಗ ಪ್ರವೀಣ (25) ಬಂಧನಕ್ಕೊಳಗಾದವರು. ಹೈರಿಗೆ ಗ್ರಾಮದ ಸರ್ವೆ ನಂ.133ರ ಜಮೀನಿನಲ್ಲಿ ಕಬ್ಬಿನ ಬೆಳೆ ಮಧ್ಯೆ ಗಾಂಜಾ ಬೆಳೆಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಹುಣಸೂರು ಡಿವೈಎಸ್‌ಪಿ ರವಿಪ್ರಸಾದ್ ಮತ್ತು ಹೆಚ್.ಡಿ. ಕೋಟೆ ಠಾಣೆ ಸಬ್ ಇನ್ಸ್‌ಪೆಕ್ಟರ್ ಬಸವರಾಜು ನೇತೃತ್ವದ ತಂಡ ಆ.31ರಂದು ಜಮೀನಿನ ಮೇಲೆ ದಾಳಿ ನಡೆಸಿದೆ.

ಜಮೀನಿನಲ್ಲಿ ಕಬ್ಬಿನ ಬೆಳೆ ನಡುವೆ ಗಾಂಜಾ ಗಿಡಗಳನ್ನು ನೆಟ್ಟು ಪಾತಿ ಮಾಡಿ, ಗೊಬ್ಬರ ಹಾಕಿ ಬೆಳೆಸುತ್ತಿದ್ದುದು ಕಂಡು ಬಂದಿದೆ. ಒಟ್ಟು 250 ಗಾಂಜಾ ಗಿಡಗಳನ್ನು ವಶಪಡಿಸಿಕೊಳ್ಳಲಾಗಿದ್ದು, ನಾಗನಾಯಕ ಮತ್ತು ಪ್ರವೀಣನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ತಂದೆ–ಮಗನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ ಹೆಚ್.ಡಿ. ಕೋಟೆ ಠಾಣೆ ಸಬ್ ಇನ್ಸ್‌ಪೆಕ್ಟರ್ ರಸೂಲ್ ಪಾಗಾವಲೆ, ಸಿಬ್ಬಂದಿಗಳಾದ ನಾರಾಯಣ, ಮಹದೇವಸ್ವಾಮಿ, ಸಯ್ಯದ್ ಕಬೀರ್ ಉದ್ದೀನ್ ಇನ್ನಿತರರು ಭಾಗವಹಿಸಿದ್ದರು.

ಅಧಿಕ ಲಾಭ ದೊರಕಿಸಿಕೊಡುವುದಾಗಿ ಹೇಳಿ ಗೃಹಿಣಿಗೆ 2.20 ಲಕ್ಷ ವಂಚನೆ

ಮೈಸೂರು, ಸೆ.2– ಹೆಚ್ಚಿನ ಲಾಭ ಬರುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 2.20 ಲಕ್ಷ ರೂ. ಹೂಡಿಕೆ ಮಾಡಿಸಿ ಕೊಂಡು ಗೃಹಿಣಿಗೆ ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಲೋಕನಾಯಕನಗರ ನಿವಾಸಿ ಪ್ರಿಯಾ ಕುಮಾರಿ(29) ವಂಚನೆಗೊಳಗಾದವರಾಗಿದ್ದು, ಇವರು amazon 962.com ವೆಬ್‌ಸೈಟ್‌ನಲ್ಲಿ 2.20 ಲಕ್ಷ ರೂ. ಹೂಡಿಕೆ ಮಾಡಿದ್ದು, ತನ್ನ ಹಣವನ್ನು ಹಿಂತಿರುಗಿ ಸುವಂತೆ ಹೇಳಿದಾಗ ವೆಬ್‌ಸೈಟ್‌ನವರು 11 ಲಕ್ಷ ರೂ. ತೆರಿಗೆ ಪಾವತಿಸಬೇಕು ಎಂದು ಒತ್ತಾಯಿಸಿದ್ದಾರೆ. ಇವರು ಹೂಡಿಕೆ ಮಾಡಿದ ಹಣವನ್ನೂ ನೀಡದೆ ಮತ್ತೆ 11 ಲಕ್ಷ ರೂ. ತೆರಿಗೆ ನೀಡಬೇಕೆಂದು ಒತ್ತಾಯಿಸುವ ಮೂಲಕ ವಂಚನೆ ಎಸಗಲಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ನಗರ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರಲ್ಲಿ ಇಂದು ಉದ್ಯೋಗ ಮೇಳ

ಮೈಸೂರು, ಸೆ.2(ಆರ್‌ಕೆಬಿ)– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಾದರಿ ವೃತ್ತಿ ಕೇಂದ್ರ, ಸೇವಾ ಚಿಲುಮೆ ಚಾರಿಟೆಬಲ್ ಟ್ರಸ್ಟ್ ಸಹಯೋಗದಲ್ಲಿ ಶನಿವಾರ (ಸೆ.3) ಮೈಸೂರಿನ ರಾಜೇಂದ್ರನಗರ (ಕೆಸರೆ) ಎನ್.ಆರ್.ಮೊಹಲ್ಲಾ ಆರ್ಚ್ ಸರ್ಕಲ್ ನಲ್ಲಿರುವ ಕೆಪಿಟಿಸಿಎಲ್ ಸಮುದಾಯ ಭವನದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಮೇಳ ಬೆಳಗ್ಗೆ 9 ಗಂಟೆಗೆ ಆರಂಭವಾಲಿದ್ದು, ಸುಮಾರು 25 ರಿಂದ 30 ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿವೆ. 18 ರಿಂದ 35 ವಯೋಮಿತಿಯುಳ್ಳ ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಅನುತ್ತೀರ್ಣ, ಪಿಯುಸಿ, ಜೆಓಸಿ, ಐಟಿಐ, ಡಿಪ್ಲೊಮಾ, ಬಿಇ., ಯಾವುದೇ ಪದವಿಗಳಲ್ಲಿ ತೇರ್ಗಡೆ ಯಾದ ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಉದ್ಯೋಗ ಮೇಳದಲ್ಲಿ ಭಾಗವಹಿಸಲು ಆಸಕ್ತ ಅಭ್ಯರ್ಥಿಗಳು ಕನಿಷ್ಠ 10 ಬಯೋಡೇಟಾದೊಂದಿಗೆ ಹಾಜರಾಗಲು ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು, ದೂರವಾಣಿ– 0821–2489972, ಮೊಬೈಲ್– 9538901099 ಸಂಖ್ಯೆಯನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

REQUIRED
Receptionist (M/F) for a reputed Lodge. Call:
8095155574
Call after 10 am onwards

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ದೋಸೆ ಮಾಸ್ಟರ್ ಬೇಕಾಗಿದ್ದಾರೆ. ಸಂಬಳ: 20,000/- ಸಂಪರ್ಕಿಸಿ:
7975973014

ಬೇಕಾಗಿದ್ದಾರೆ
ದಟ್ಟಗಳ್ಳಿಯಲ್ಲಿರುವ ಆಫೀಸ್‌ಗೆ ಇಂಗ್ಲೀಷ್ ಮತ್ತು ಕಂಪ್ಯೂಟರ್ ಬಗ್ಗೆ ಅನುಭವವಿರುವ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂದರ್ಶನಕ್ಕಾಗಿ ಸಂಪರ್ಕಿಸಿ:
9844596071

ಸೈಟ್ಸ್ ಫಾರ್ ಸೇಲ್
30x40
ಆಳತೆ, ಮೈಸೂರು, ಜೆ.ಪಿ.ನಗರದ ರಿಂಗ್ ರೋಡ್‌ನಿಂದ ಕೇವಲ 5 ಕಿ.ಮೀ ದೂರದ ಜ್ಞಾನಭಾರತಿ ಲೇಔಟ್, ದಡದಹಳ್ಳಿ, 2ನೇ ಸ್ಟೇಜ್, MUDA ಖಾತೆ ಆಗಿದೆ. ಈಸ್ಟ್ ಫೇಸಿಂಗ್ ಮತ್ತು ಸೌತ್ ಈಸ್ಟ್ ಕಾರ್ನರ್.
9342123373

20x30 ಹೊಸಮನೆ – 36 ಲಕ್ಷ
30x40 ಹಳೆ ಮನೆ – 75 ಲಕ್ಷ
30x40 ಡುಪ್ಲೆಕ್ಸ್ ಮನೆ – 88 ಲಕ್ಷ
20x30 ಡುಪ್ಲೆಕ್ಸ್ ಮನೆ – 58 ಲಕ್ಷ
ಸೈಟು ಹಳೆ ಮನೆ, ಹೊಸಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

ಮಾರುವವರು/ಕೊಳ್ಳುವವರು
20x30, 30x40, 40x60, 50x80, ಸೈಟು, ಹಳೆಮನೆ, ಹೊಸ ಮನೆ, ಡುಪ್ಲೆಕ್ಸ್ ಮನೆ, ದಟ್ಟಗಳ್ಳಿ, ನ್ಯಾಯಾಂಗ ಬಡಾವಣೆ, ಸುತ್ತಮುತ್ತ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
8618495118

HOUSES FOR RENT
1) Independent 2BHK House @ 40x60 Plot Near Kuvempunagar Bus Depot.
2) Independent 2BHK House @ 40x60 Plot Near Metagalli post office.
9036413529

ಸೈಟು ಮಾರಾಟಕ್ಕಿದೆ
ದೃಷ್ಟಿ ಎನ್‌ಕ್ಲೇವ್, 30 X 50
ಪೋಲೀಸ್ ಲೇಔಟ್ ಹತ್ತಿರ
ಟಿ. ನರಸೀಪುರ ಮೈನ್ ರೋಡ್
Contact: 9743057576

ಜಮೀನು ಮಾರಾಟಕ್ಕಿದೆ
4 ಎಕರೆ ನದಿ ಪಕ್ಕದ ಜಮೀನು ಮೈಸೂರಿನಿಂದ 30 ಕಿ.ಮಿ.
5 ಎಕರೆ ತೋಟ ಮಾಡಲು ಅನುಕೂಲವಾದ ಜಮೀನು, ಇಲವಾಲ ಹತ್ತಿರ ಮೈಸೂರಿನಿಂದ 20 ಕಿ.ಮಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
7022360170

ಗೌರಿ ಗಣೇಶ ಹಬ್ಬಕ್ಕೆ ಆರ್ಕೇಸ್ಟ್ರಾ ಕಾರ್ಯಕ್ರಮಕ್ಕಾಗಿ ಸಂಪರ್ಕಿಸಿ:
ರವಿ ಮೆಲೋಡಿಸ್ ಆರ್ಕೇಸ್ಟ್ರಾ, ಹುಣಸೂರು & ಮೈಸೂರು



9538581847 / 8553602626
9964587655

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ಪುರುಷರು ಮತ್ತು ಮಹಿಳೆಯರು, ಕೆಲಸದ ಸ್ಥಳ: ನಜರ್‌ಬಾದ್, ಸಮಯ ಬೆಳಿಗ್ಗೆ 9 ಗಂಟೆಯಿಂದ ಸಂಜೆ 7.30 ಗಂಟೆ
9742531666

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಅಥವಾ ಪುರುಷರು ಬೇಕಾಗಿದ್ದಾರೆ. ವೇತನ 11,000 ರೂ.ಗಳು. ಡೇ ಹಾಗೂ ನೈಟ್ ಶಿಫ್ಟ್‌ಗಳು ಇರುತ್ತವೆ.
7829490009

ಮಳಿಗೆ, ಮನೆ, ನೀರಾವರಿ ಜಮೀನು ಬಾಡಿಗೆಗಿದೆ
ಮೈಸೂರು ಕುವೆಂಪುನಗರ ಆರ್.ಎಂ.ಪಿ ಕ್ವಾರ್ಟ್ರಸ್ ಎದುರು ಪೂರ್ವ ದಿಕ್ಕಿಗೆ ಮುಖ್ಯ ರಸ್ತೆಯಲ್ಲಿ 1 ಮಳಿಗೆ ಹಾಗೂ 8 ಚದರ ಮನೆ ಬಾಡಿಗೆಗಿದೆ ಹಾಗೂ ಬೋಗಾದಿ ಸಿಗ್ನಲ್ ಲೈಟ್‌ನಿಂದ 3 ಕಿ.ಮೀ ದೂರದ ಮಹಲಿಂಗೇಶ್ವರ ದೇವಸ್ಥಾನದ ಪಕ್ಕ ಕಾಂಪೌಂಡ್, ವಾಸಕ್ಕೆ ಮನೆ, ವಿದ್ಯುಚ್ಛಕ್ತಿ ಬೋರ್‌ವೆಲ್ ಇರುವ 1 1/4 ಎಕರೆ ಜಮೀನು, ವ್ಯವಸಾಯ, ಪಶುಸಂಗೋಪನೆ ಹಾಗೂ ಇತರೆ ಉದ್ದೇಶಕ್ಕೆ ತಿಂಗಳಿಗೆ 9000/- ಬಾಡಿಗೆಗೆ 10 ವರ್ಷಕ್ಕೆ ದೊರೆಯುತ್ತದೆ.
8197609290

ವಧು ಬೇಕಾಗಿದೆ
37 ವರ್ಷದ ಮಂತ್ರಾಲಯದಲ್ಲಿ ವಾಸವಾಗಿರುವ ತಿಂಗಳಿಗೆ ಒಂದು ಲಕ್ಷ ಆದಾಯ ಹೊಂದಿರುವ ಬ್ರಾಹ್ಮಣ ವರನಿಗೆ, ಕಡು ಬಡತನದ ಅನಾಥ ಲಿಂಗಾಯಿತ ಅಥವಾ ಬ್ರಾಹ್ಮಣ ವಧು ಬೇಕಾಗಿದೆ. ಮದುವೆಯ ಸಂಪೂರ್ಣ ಖರ್ಚು ವೆಚ್ಚಗಳನ್ನು ವರನ ಮನೆಯಿಂದಲೇ ಭರಿಸಲಾಗುತ್ತದೆ. ಸಸ್ಯಹಾರಿ ಅನಾಥ ವಧುವಿಗೆ ಮೊದಲ ಆದ್ಯತೆ.
6366125016

ಬೇಕಾಗಿದ್ದಾರೆ
ಸಂಭ್ರಮ ಬಾರ್ & ರೆಸ್ಟೋರೆಂಟ್
ಸಪ್ಲೆಯರ್, ಕ್ಲೀನರ್
9945108109
9900422201

ಜಮೀನು ಮಾರಾಟಕ್ಕಿದೆ
5 ಎಕರೆ ನೀರಾವರಿ ಸೌಲಭ್ಯ ಮತ್ತು ಥಾರ್ ರಸ್ತೆ ಇರುವ ಜಮೀನು ಬನ್ನೂರು ಹತ್ತಿರ, ಮೈಸೂರಿನಿಂದ 30 ಕಿ.ಮಿ.
4.20 ಎಕರೆ ಬೋರ್‌ವೆಲ್ ಇರುವ ಜಮೀನು HD ಕೋಟೆರಸ್ತೆ, ಮೈಸೂರಿನಿಂದ 27 ಕಿ.ಮಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
7022360170

ಬೇಕಾಗಿದ್ದಾರೆ
ಸಸ್ಯಹಾರಿ ಅಡುಗೆ (ಮಹಿಳೆ) ಕೆಲಸಕ್ಕೆ (ಮನೆಯಲ್ಲಿ) ಬೇಕಾಗಿದ್ದಾರೆ
ಗಂಗೋತ್ರಿ ಲೇಔಟ್, ಮೈಸೂರು
Call: 9945040509

Automatic Water Level



SALES & SERVICE
SUN POWER SOLUTIONS
Yeraganahalli, Mysore
9739804444

ಶ್ರೀ ಬಾಲಾಜಿ ಟೂರಿಸ್ಟ್
12-11-22 ರಿಂದ 14 ದಿನಗಳ ಗುಜರಾತ್, ರಾಜಸ್ತಾನ್ ಮಧ್ಯಪ್ರದೇಶ್ ಪ್ರವಾಸ, ಮಹಾಕಾಳೇಶ್ವರ್, ಓಂಕಾರ್, ನಾಗೇಶ್ವರ್, ಸೋಮನಾಥ್, ದ್ವಾರಕ, ಪಟೇಲರ ಸ್ಟ್ಯಾಚು, ಭಾವನಗರ, ಅಂಬಾಜಿ, ಪುಷ್ಕರ್, ಜೈಪುರ, ಇತ್ಯಾದಿ.
05-12-22 ರಿಂದ 14 ದಿನಗಳ ನೇಪಾಳ-ಪಶುಪತಿನಾಥ್ ಕಾಠ್ಮಂಡು, ಮುಕ್ತಿನಾಥ್, ಪೋಕ್ರಾ, ಮನೋಕಾಮನ, ಜನಕ್‌ಪುರ್, ವೈದ್ಯನಾಥ್, ಕಾಶೀ, ಗಯಾ ಇತ್ಯಾದಿ ವಿಮಾನ/ರೈಲು/ಬಸ್ ಊಟ-ವಸತಿ (ರೂಂ) ಸೇರಿದೆ.
9945770486

ಡೆಲಿವರಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಮೈಸೂರು ಈಕಾಂ ಎಕ್ಸ್‌ಪ್ರೆಸ್‌ನಲ್ಲಿ ಡೆಲಿವರಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ತಿಂಗಳಿಗೆ 25,000 ದಿಂದ 30,000 ಗಳಿಸಬಹುದು ಪೆಟ್ರೋಲ್ ಕೊಡಲಾಗುತ್ತದೆ. ದ್ವಿಚಕ್ರ ವಾಹನ ಹೊಂದಿರಬೇಕು DL ಇರಬೇಕು.
9590471203 / 7760792889
9880894996

ಬಂಡವಾಳ ಹೂಡಿ ಖಾಸಗಿ ಶಾಲೆ ನಿರ್ವಹಿಸಲು ಬೇಕಾಗಿದ್ದಾರೆ.
8147472526

ತಕ್ಷಣ ಬೇಕಾಗಿದ್ದಾರೆ
1) ಪೆಟ್ರೋಲ್ ಬಂಕ್ ಆಪರೇಟರ್-10 ಮಂದಿ (ಹುಡುಗ / ಹುಡುಗಿಯರು)
2) ಹೌಸ್ ಕೀಪಿಂಗ್-10 ಮಂದಿ (ಮಹಿಳೆಯರು ಮಾತ್ರ) ಸಂಪರ್ಕಿಸಿ:
9686566261/9242406261

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

S.M GOLD COMPANY
ಗಿರವಿ ಚಿನ್ನಾಭರಣ ಖರೀದಿ
24 ಕ್ಯಾರೆಟ್-5150
22 ಕ್ಯಾರೆಟ್-4600
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಶ್ರೀ ಗೌರಿಶಂಕರ ಟ್ರಾವೆಲ್ಸ್
26/9/22 (7 ದಿನ) : ISHA ಫೌಂಡೇಷನ್, ಪಳನಿ, ಮಧುರೈ, ಕನ್ಯಾಕುಮಾರಿ, ರಾಮೇಶ್ವರ, ಶ್ರೀರಂಗಂ, 9 ನವಗ್ರಹ ಇತ್ಯಾದಿ.
8/10/22 (14/18 ದಿನ) ದೆಹಲಿ, ಹರಿದ್ವಾರ್, ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ಇತ್ಯಾದಿ.
30/10/22 (8/12 ದಿನ) ದೆಹಲಿ, ಆಗ್ರಾ, ಮಥುರ, ಅಲಹಾಬಾದ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
12/11/22 (4 ದಿನ) ಶಿರಡಿ, ಬಾಂಬೆ, ಎಲ್ಲೋರ, 3 ಜ್ಯೋತಿರ್ಲಿಂಗ ಇತ್ಯಾದಿ. (ವಿಮಾನ ಟ್ರೈನ್ ಮತ್ತು ಬಸ್ಸು)
9620002114

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಬೇಕಾಗಿದ್ದಾರೆ
ನೆಕ್ಸಸ್ (ಫೋರಂ) ಮಾಲ್‌ನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ: PUC ಮೇಲ್ಪಟ್ಟು, ವೇತನ: 10 ರಿಂದ 11 ಸಾವಿರ, ವಯಸ್ಸಿನ ಮಿತಿ: 20–30 ವರ್ಷ
8431588337

ನೇಪಾಳ ಪಶುಪತಿನಾಥ ಮುಕ್ತಿನಾಥ ಮತ್ತು ಕಾಶಿ ದಸರಾ ವಿಶೇಷ ವಿಮಾನದಲ್ಲಿ ಎಲ್ಲಾ ಸೇರಿ ರೂ.41500/-
ಸಂಪರ್ಕಿಸಿ: ಶ್ರೀ ರಾಮ್ ಟೂರ್
9108933383/9606600383

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಾನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗಳು, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು.

ಬೇಕಾಗಿದ್ದಾರೆ
ಡೆಲಿವರಿ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000/-
Ph.9380142144

ಕೊಳ್ಳೇಗಾಲ ಜ್ಯೋತಿಷ್ಯರು ನಂ.01 ಮೋಡಿ ಮಾಂತ್ರಿಕರು.
ಪಂ.ಎಸ್.ಕುಮಾರಸ್ವಾಮಿ
ಮೊ: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ-ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (ರಿಲಾಯನ್ ಮಾಲ್), ಬಿ.ಎನ್.ರೋಡ್ ಕೆ.ಎಸ್.ಆರ್.ಟಿ.ಸಿ ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ.
7996504996

ತಕ್ಷಣವೇ ಬೇಕಾಗಿದ್ದಾರೆ
ಆಸ್ಪತ್ರೆ ಮತ್ತು ಹೋಟೆಲ್‌ಗಳಿಗೆ ಹೌಸ್‌ಕೀಪಿಂಗ್ ಸೂಪರ್ ವೈಸರ್, ಹೌಸ್‌ಕೀಪಿಂಗ್ ಲೇಡೀಸ್, ಹುಡುಗರು, ವಾರ್ಡ್ ಬಾಯ್ಸ್, ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ,
ಮೊ: 94821 42207

ಹೊಸ ಮನೆ ಮಾರಾಟಕ್ಕಿದೆ
20x30 ನಂ.590, 2ನೇ ಫೇಸ್, ವಿಜಯನಗರ 4ನೇ ಹಂತ, ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್, ಪೂರ್ವಕ್ಕೆ ಬಾಗಿಲು ಎದುರು ಪಾರ್ಕ್, ಫಿಲ್ಲರ್ ಕಟ್ಟಡ.
9972165301

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಳೀರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೆ, ಪ್ರೇತಾ ಭಾದೆ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಃಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಹೊಸ ಮನೆ ಮಾರಾಟಕ್ಕಿದೆ
20x30 ಡುಪ್ಲೆಕ್ಸ್ ಮನೆ ವೆಸ್ಟ್ ಫೇಸ್ ನಾರ್ಥ್ ಡೋರ್, ಇಟಾಲಿಯನ್ ಕಿಚನ್, ವಾರ್ಡ್ರೋಬ್, ಗ್ರಾನೈಟ್, ಸಿಸಿ ಕ್ಯಾಮೆರಾ, ಸೋಲಾರ್ ಚಿಮಿಣಿ ರೂಮ್ ಮತ್ತು ಬಾಗಿಲು ಮೇಲಗಡೆ, ಉಯ್ಯಾಲೆ ಜಾಗ್ವಾರ್‌ನಲ್ಲಿ ಜಾಗ್ವಾರ್ ಕಮೋಡ್, ಪಿಪಿಪೊ ಆರ್ಕಿಟೆಕ್ ಮನೆ ಕೌಟಿಲ್ಯ ಸ್ಕೂಲ್ ಹತ್ತಿರ, ದಟ್ಟಗಳ್ಳಿ ರವಿಚಂದ್ರ.ಪಿ:
9900372013

JOB FOR RTD. OFFICERS
Job for retired oficers, Unlimited earnings and quarterly Foreign Trips.
Required documents:
1) Education qualification documents 2) Aadhar Card, 3) Pan Card 4) Bank Pass Book 5) Passport size photo
Contact: 9886647852

VOKKALIGA MATRIMONY
Degree/BE/MBA/MCA/ MBBS/Govt. Employee
ವಧು–ವರರಿಗಾಗಿ ಸಂಪರ್ಕಿಸಿ
(Contact for all caste)
9343175000

ಸೈಟು ಮಾರಾಟಕ್ಕಿದೆ
30x40
ಪಶ್ಚಿಮ ದಿಕ್ಕು
ಕೆ.ಹೆಚ್.ಬಿ. ಕಾಲೋನಿ, ರಾಜಾಪುರ, ಪಿರಿಯಾಪಟ್ಟಣದಲ್ಲಿ
9980556186

ಸೈಟ್ ಮಾರಾಟಕ್ಕಿದೆ
30x50 (1800 Sqft)
ಉತ್ತರ ದಿಕ್ಕು
Vidyaranyapuram, Mysore
Contact:
8711891660

FOR RENT
Two separate (9x10 ft) Shops for Rent on Giridarshini layout main road, near Lalitha Mahal, Mysuru
Contact: 9880779246

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2) ಶಿಷ್ಯರಣೆ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ಸೈಟು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

WANTED
PART TIME LECTURERS
(Required for Reputed Institution)
Physics, Maths, Chemistry, Biology, Accountancy, Business Studies, English, Spoken English Trainer
Call: 9535161811
Address: # 399, Krishnavilas road
GRN Academy, Mysore

GODOWN FOR RENT
1000sqft
Vehicle parking space
5hp power 3 phase
Hinkal ring road
Contact-9060768800

ಪೇಪರ್ ಬ್ಯಾಗ್, ಟೀಕಪ್ಸ್, ಎಲ್‌ಇಡಿ ಬಲ್ಬ್ ಯೂನಿಟ್ ಸ್ಥಾಪಿಸಿ ಮತ್ತು ತಿಂಗಳಿಗೆ ಗಳಿಸಿ 65000/– ದಿಂದ 90000/–ನಾವು ಉಚಿತವಾಗಿ ಕಚ್ಚಾ ಪದಾರ್ಥ ಕೊಡುತ್ತೇವೆ, ಬೈ ಬ್ಯಾಕ್ ಅಗ್ರಿಮೆಂಟ್‌ನೊಂದಿಗೆ. ಸಂಪರ್ಕಿಸಿ:
8527650177

WANTED URGENT
SALES REPRESENTATIVE -3
DISPATCH ASST CUM DRIVER -2
FEMALE ACCOUNTANT -2
Contact: MONARCH DISTRIBUTOR
#44/C, near Sterling theatre vishveshwaranagara, Mysore - 570008
0821-3502374
Mobile: 8971953235
Mobile :9482210793

30 X 50 ಸೈಟು @ Rs. 22.50 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಸೌಲಭ್ಯ
ತಕ್ಷಣ ಮನೆ ಕಟ್ಟಬಹುದು
ಮೈದನಹಳ್ಳಿ ಪಕ್ಕ, ಇಲವಾಲ ಹತ್ತಿರ, ಹುಣಸೂರು ರೋಡ್, ಮೈಸೂರು
Contact: 9538583377

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ.
9743217566
9108418233

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ)
8050699742 / 7892480649

WORK FROM HOME
Process Executives
Telecallers
Non Voice Executives
ಕನ್ನಡ+ಇಂಗ್ಲೀಷ್, ಇಂಗ್ಲೀಷ್+ಹಿಂದಿ
Sal: 9000 to 12000/-
(Broadband or Wifi necessary)
Laptops ಕಂಪನಿಯಿಂದ ಕೊಡಲಾಗುವುದು
Only Female No Marketing No Target
Call:9483434329/9900629071

HOUSE FOR RENT
30x40, First Flor, 2 BHK House with solar is for rent at Vijayanagar 2nd Stage, near K.D. Circle, Mysore.
(Brokers Excuse)
Ph: 9986741909/ 8310181951

WANTED TEACHERS
NST or MONTESSORI TEACHERS, D,ED TEACHERS WANTED IMMEDIATELY FOR PRIMARY SCHOOL.
CONTACT-
9845390377/8197057626

ಸಾಲ/LOANS
- HOUSE BUYING LOAN
- SITE BUYING LOAN
- CONSTRUCTION LOAN
- MORTGAGE LOAN

Call: 77605-98705

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ. SMM Institute ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು
9986926101

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ. ವಯೋಮಿತಿ: 50 ವರ್ಷದೊಳಗಿರಬೇಕು. ಎಸ್.ಎಸ್.ಎಲ್.ಸಿ ಪಾಸಾಗಿರಬೇಕು. ಸಂಪರ್ಕಿಸಿ:
ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ
ನಂ.513, ಕೆ.ಎನ್.ಅಗ್ರಹಾರ, ಲಕ್ಷ್ಮೀ ಚಿತ್ರಮಂದಿರ ಹತ್ತಿರ, ಕೆ.ಆರ್.ಮೊಹಲ್ಲಾ, ಮೈಸೂರು
0821-4247358 / 9480420666

ಸ್ಕೂಟರ್ ಬೇಕಾಗಿದೆ
1990 ರಿಂದ 2000 or 2005 ಮಾಡಲ್‌ನ ಬಜಾಜ್ ಚೇತಕ್ ಅಥವಾ ಬಜಾಜ್ ಸೂಪರ್ ಗಾಡಿಯು ಗುಡ್ (ರನ್ನಿಂಗ್) ಕಂಡಿಷನ್ ಇರಬೇಕು. ಸಿಂಗಲ್ ಓನರ್ ಆಗಿರಬೇಕು. ದಾಖಲಾತಿಗಳು ಸರಿ ಇರಬೇಕು FC ಮತ್ತು ಇನ್ಶೂರೆನ್ಸ್ ರನ್ನಿಂಗ್ ಇರುವ ಸ್ಕೂಟರ್ ತಕ್ಷಣ ಬೇಕಾಗಿದೆ. ಸಂಪರ್ಕಿಸಿ:
8553501505 / 9611240336

WANTED
SECURITY FIELD OFFICER (MALE) CANDIDATE
Freshers can also apply with good communication
Interested candidates send your CV to: Email: nimishpvtltd@gmail.com
Contact:951399755

ಮನೆ ಬಾಡಿಗೆಗಿದೆ
40x40 ರಲ್ಲಿ ಕಟ್ಟಿರುವ ಕಾರ್ನರ್ ಮನೆ ಅಗತ್ಯ ಸೌಲಭ್ಯಗಳು ಹಾಗೂ ಪಾರ್ಕಿಂಗ್‌ನೊಂದಿಗೆ ಬಾಡಿಗೆಗಿದೆ. ಹಿನಕಲ್ ರಿಂಗ್ ರಸ್ತೆ ಸರ್ಕಲ್ ಹತ್ತಿರ ಅಧಿಕಾರಿವರ್ಗದವರಿಗೆ ಆದ್ಯತೆ. ಮಧ್ಯವರ್ತಿಗಳು ಕ್ಷಮಿಸಿ
9741534036/9148392414

IMMEDIATE HIRING IN MYSORE
Front Office
(Good Computer knowledge)
Salary: 15000 above
Age Limit: Below 35,
Aplicable for Male Candidates only.
6366638189/9880151303

CHANGE OF NAME
I, MOHAMMED ZAKI, S/o. Mohammedahamed, residing at Nanjangud Taluk, Hullahalli Hobli,Haradanahalli Post, Mysore-571314, have changed my name as MOHAMEDZAKI vide affidavit sworn in before Notary Ayesha Banu, Mysore on 1.9.2022. In future all my documents whatsoever I will sign in the name of MOHAMEDZAKI
Sd/- MOHAMEDZAKI

ಮನೆ ಭೋಗ್ಯಕ್ಕೆ ಬೇಕಾಗಿದೆ
ಇಂಡಿಪೆಂಡೆಂಟ್ ಮನೆ 3BHK / 2BHK ಸರಸ್ವತಿಪುರಂ, ಜಯನಗರ, ಕುವೆಂಪುನಗರ, ಲಕ್ಷ್ಮೀಪುರಂ, ವಿದ್ಯಾರಣ್ಯಪುರಂ, ಯಾದವಗಿರಿ, ಒಂಟಿಕೊಪ್ಪಲು ಅಥವಾ ಗೋಕುಲಂ ಈ ಸ್ಥಳಗಳಲ್ಲಿ ಮನೆ ಭೋಗ್ಯಕ್ಕೆ ಬೇಕಾಗಿದೆ.
8050205475

FOR SALE
30x40 Duplex, Vijayanagar 2nd Stage
9741628964

ಹೋಟೆಲ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ನಾರ್ತ್ ಇಂಡಿಯನ್ ಭಟ್ಟರು, ರೋಟಿ ಮಾಡುವವರು, ಹೆಲ್ಪರ್‌ಗಳು, ಪಾತ್ರೆ ತೊಳೆಯುವವರು, ಕೌಂಟರ್ ಬಾಯ್ಸ್, ಕ್ಲೀನರ್‌ಗಳು, ಚೈನೀಸ್ ಚಾಟ್ಸ್ ಜೂಸ್ ಮಾಡುವವರು, ಟೀ ಮಾಡುವವರು ಬೇಕಾಗಿದ್ದಾರೆ.
8088337564

ಮನೆ ಭೋಗ್ಯಕ್ಕೆ ಇದೆ
(ಸಸ್ಯಹಾರಿಗಳಿಗೆ ಮಾತ್ರ)
2 BHK, 1st Floor Ramanuja Road, Mysore.
9986698617

ಆದಿ ಕರ್ನಾಟಕ(SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com M.Sc, MBA , MBBS, BE, M.Tech, B.ED, D.ED, M.Ed
ವಿವಾಹ ನೊಂದಣಿಗೆ ಕರೆಮಾಡಿ
(2nd Marriage also)
9164743059

FOR SALE
A) 40x60 and 50x80 commercial in ring road facing
B) 30x40 30x50 sites new RT NAGAR
C) 20x30 duplex Niveditha nagar
D) 30x40 12 Lakhs 30x50 15 L sites available attch Brahmins E Blk Layout
PRAKRUTHI PROPERTIES
90359 90359/95386 90359

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮಡಿಕೇರಿಯಲ್ಲಿ ಕಾರ್ಯ ನಿರ್ವಹಿಸಲು ತಿಂಡಿ, ಊಟ & ವಸತಿ ಸೌಲಭ್ಯವಿದೆ. ತಿಂಗಳಿಗೆ ಎರಡು ದಿನ ರಜೆ, ESI, PF ಇದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364560079 / 9900763507

SITE FOR SALE
In prime Location 30x40, 40x60, 50x80 On Vijayanagar, 4th Stage. Call Now:
9036750192 / 9036750194

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ವಿರಾಜಪೇಟೆಯಲ್ಲಿ 28 ಸಮಿತಿಗಳಿಂದ ಗೌರಿ-ಗಣೇಶ ಪ್ರತಿಷ್ಠಾಪನೆ

ಸೆ.9ರವರೆಗೆ ಬೆಳಗ್ಗೆ, ರಾತ್ರಿ ವಿಶೇಷ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ



ವಿರಾಜಪೇಟೆ, ಸೆ.2- ವಿರಾಜಪೇಟೆ ಐತಿಹಾಸಿಕ ಶ್ರೀ ಗೌರಿ ಗಣೇಶೋತ್ಸವದ ಅಂಗವಾಗಿ ವಿರಾಜಪೇಟೆ ಪಟ್ಟಣದಲ್ಲಿ ಸುಮಾರು 28 ಸಮಿತಿಗಳಿಂದ ಗೌರಿ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ.

ನಗರದ 22 ಸಮಿತಿಗಳು 10 ದಿನಗಳ ಕಾಲ ಬೆಳಿಗ್ಗೆ ಮತ್ತು ರಾತ್ರಿ ಗೌರಿ ಗಣೇಶನಿಗೆ ಪೂಜೆ ಸಲ್ಲಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಿವೆ. ಸೆ.9 ರಂದು ರಾತ್ರಿ 9 ಗಂಟೆಗೆ ವಿದ್ಯುತ್ ದೀಪಾಲಂಕೃತ ಹೂವಿನ ಭವ್ಯ ಮಂಟಪದಲ್ಲಿ ವಿಶೇಷ ವಾದ್ಯಗೋಷ್ಠಿಯೊಂದಿಗೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಳಿಕ ಗೌರಿ ಕೆರೆಯಲ್ಲಿ ವಿಸರ್ಜಿಸಲಾಗುವುದು.

ವಿರಾಜಪೇಟೆ ನಗರದ ಶ್ರೀ ಗಣಪತಿ ದೇವಸ್ಥಾನ ಗಡಿಯಾರ ಕಂಬದ ಬಳಿ, ಜೈನರ ಬೀದಿ ಶ್ರೀ ಬಸವೇಶ್ವರ ದೇವಸ್ಥಾನ, ವಿಘ್ನೇಶ್ವರ ಸೇವಾ ಸಮಿತಿ ಅರಸುನಗರ, ವಿನಾಯಕ ಯುವಕ ಭಕ್ತ ಮಂಡಳಿ, ಅಂಗಾಳ ಪರಮೇಶ್ವರಿ ದೇವಸ್ಥಾನ, ವಿಜಯ ವಿನಾಯಕ ಉತ್ಸವ ಸಮಿತಿ ದಖ್ಖನಿ ಮೊಹಲ್ಲಾ, ಕಾವೇರಿ ಗಣೇಶ ಉತ್ಸವ ಸಮಿತಿ ಮೂರ್ನಾಡು ರಸ್ತೆ, ನೇತಾಜಿ ಉತ್ಸವ ಸಮಿತಿ ನೆಹರು ನಗರ, ಗಣಪತಿ ಸೇವಾ ಸಂಘ ಗಣಪತಿ ಬೀದಿ, ವಿನಾಯಕ ಸೇವಾ ಸಮಿತಿ ಪಂಜರುಪೇಟೆ, ಜಲದರ್ಶಿನಿ ವಿನಾಯಕ ಸೇವಾ ಸಮಿತಿ ಆಂಜನೇಯ ದೇವಸ್ಥಾನ ಚಿಕ್ಕಪೇಟೆ, ವಿಘ್ನೇಶ್ವರ ಉತ್ಸವ ಸಮಿತಿ ಕುಕ್ಲೂರು, ಸರ್ವಸಿದ್ಧಿ ವಿನಾಯಕ ಉತ್ಸವ ಸಮಿತಿ ಸುಂಕದಕಟ್ಟೆ, ಕಣ್ಮಣಿ ವಿನಾಯಕ ಉತ್ಸವ ಸೇವಾ ಸಮಿತಿ ಮಲೆತಿರಿಕೆ ಬೆಟ್ಟ, ಗಣಪತಿ ಸೇವಾ ಸಮಿತಿ ಗಾಂಧಿನಗರ, ದೊಡ್ಡಮ್ಮ ಚಿಕ್ಕಮ್ಮ ತಾಯಿ ವಿನಾಯಕ ಸೇವಾ ಸಮಿತಿ ಹರಿಕೇರಿ, ವಿಘ್ನೇಶ್ವರ ಗಣಪತಿ ಸೇವಾ ಸಮಿತಿ ಕೆ.ಬೋಯಿಕೇರಿ, ವಿಶ್ವ ವಿನಾಯಕ ಗಣೇಶೋತ್ಸವ ಸಮಿತಿ ಮೀನುಪೇಟೆ, ಗೌರಿಕೆರೆ ಗಣಪತಿ ಸೇವಾ ಸಮಿತಿ ವಿರಾಜಪೇಟೆ, ವಿಘ್ನೇಶ್ವರ ಉತ್ಸವ ಸೇವಾ ಸಮಿತಿ ಪಟ್ಟಣ ಪಂಚಾಯಿತಿ, ವರದ ವಿನಾಯಕ ಸೇವಾ ಸಮಿತಿ ಅಯ್ಯಪ್ಪ ಬೆಟ್ಟ, ವಿನಾಯಕ ಯುವ ಸಮಿತಿ ಶಿವಕೇರಿ, ಶ್ರೀ ಬಾಲಂಜನೇಯ ವಿನಾಯಕ ಉತ್ಸವ ಸಮಿತಿ ಅಪ್ಪಯ್ಯಸ್ವಾಮಿ ರಸ್ತೆ, ಒಟ್ಟು 22 ಮಂಟಪಗಳು ಮೆರವಣಿಗೆಯಲ್ಲಿ ಭಾಗವಹಿಸುವ ಗೌರಿ-ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ದೇವರಿಗೆ ಭಕ್ತಿಯಿಂದ ವಿಶೇಷ ಪೂಜೆ ಸಲ್ಲಿಸಿದರು.

ನವೀಕರಣದ ಹೆಸರಿನಲ್ಲಿ ಇಗ್ಗುತಪ್ಪ ದೇವಾಲಯದ ಕಟ್ಟುಪಾಡುಗಳಿಗೆ ಧಕ್ಕೆ

ದೇವಾಲಯದ ದೇವತಕ್ಕರಾದ ಪರದಂಡ ಕುಟುಂಬಸ್ಥರ ಆರೋಪ

ಮಡಿಕೇರಿ,ಸೆ.2- ಪಾಡಿ ಶ್ರೀ ಇಗ್ಗುತಪ್ಪ ದೇವಾಲಯ ನವೀಕರಣದ ಹೆಸರಿನಲ್ಲಿ ದೇವಾಲಯದ ಕಟ್ಟುಪಾಡುಗಳಿಗೆ ದಕ್ಕೆ ಉಂಟು ಮಾಡಲಾಗುತ್ತಿದೆ ಎಂದು ದೇವಾಲಯದ ದೇವತಕ್ಕರಾದ ಪರದಂಡ ಕುಟುಂಬಸ್ಥರು ಆರೋಪಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವತಕ್ಕ ಪರದಂಡ ಸುಬ್ರಮಣಿ, ದೇವಾಲಯದ ಮುಂಭಾಗದ ಪೂರ್ವ ಭಾಗಕ್ಕಿರುವ ಮೆಟ್ಟಿಲುಗಳು ನವೀಕರಣಗೊಂಡಿದ್ದು, ಅನಾದಿಕಾಲದಿಂದಲೂ ಈ ಮೆಟ್ಟಿಲುಗಳನ್ನು ಹತ್ತಿ ಬರುವುದು ನಿಷೇಧಿಸಲಾಗಿದೆ. ವಿಶೇಷ ಸಂದರ್ಭದಲ್ಲಿ ಸತ್ಯಪ್ರಮಾಣ ಮಾಡುವವರು ಮಾತ್ರ ತಕ್ಕ ಮುಖ್ಯಸ್ಥರ ಸಮ್ಮುಖದಲ್ಲಿ ಮೆಟ್ಟಿಲೇರಿ ಬರಲು ಅವಕಾಶ ನೀಡಲಾಗುತ್ತದೆ. ಆದರೆ, ಈ ಮೆಟ್ಟಿಲನ್ನು ಕೆಲವರು ಹೆಬ್ಬಾಗಿಲಾಗಿ ಬಿಂಬಿಸಿ ಭಕ್ತಾದಿಗಳಿಗೆ ಪ್ರವೇಶ ಕಲ್ಪಿಸಲು ಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಭಕ್ತರು ದೇವಾಲಯದ ವಾಯುವ್ಯ ದಿಕ್ಕಿನಲ್ಲಿರುವ ದ್ವಾರದ ಮೂಲಕ ಆಗಮಿಸಿ ಪಾವಿತ್ರ್ಯತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು.

ಪೂರ್ವ ಭಾಗದ ಮೆಟ್ಟಿಲಿನಿಂದ ಪ್ರವೇಶ ಮಾಡುವುದು ಸಂಪ್ರದಾಯಕ್ಕೆ ವಿರುದ್ಧವಾಗಿದೆ. ಇದು ಹಿಂದಿನಿಂದಲೂ ಜಾರಿಯಲ್ಲಿದ್ದ ನಿಯಮಗಳಿಗೆ, ದೇವರ ಸ್ಥಳ ಮಹಿಮೆಗೆ ದಕ್ಕೆ ತರುವಂತಿದೆ. ದೇವಾಲಯದ ನವೀಕರಣದ ಜೊತೆಗೆ ಹಲವು ಕಾಮಗಾರಿಗಳು ನಡೆದಿದೆ. ಇದಕ್ಕೆ ನಮ್ಮ ವಿರೋಧವಿಲ್ಲ, ಆದರೆ, ಈ ಹಿಂದಿನ ಸಂಪ್ರದಾಯದಂತೆ ವಿಧಿವಿಧಾನಗಳು ನಡೆಯಬೇಕು ಎಂದು ಆಗ್ರಹಿಸಿದರು.

ದೇವತಕ್ಕ ಮತ್ತು ಭಕ್ತಜನ ಸಂಘದ ಉಪಾಧ್ಯಕ್ಷ ಪರದಂಡ ಡಾಲಿ ಮಾತನಾಡಿ, ರಾಜಕಾರಣಿಗಳು ದೇವಾಲಯದ ಸಂಪ್ರದಾಯವನ್ನು ಹಾಳು ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ದೇವಾಲಯದ ಕಟ್ಟುಪಾಡುಗಳಿಗೆ ತೊಂದರೆಯಾಗದಂತೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಆಗ್ರಹಿಸಿದರು.

ದೇವತಕ್ಕ ಪರದಂಡ ವಿಠಲ ಭೀಮಯ್ಯ ಮಾತನಾಡಿ, ಭಕ್ತ ಜನಸಂಘದ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದ್ದು, ನಡಾವಳಿ ಪುಸ್ತಕದಲ್ಲಿ ಮೆಟ್ಟಿಲುಗಳನ್ನು ಹತ್ತಿ ಪ್ರವೇಶಿಸುವುದನ್ನು ನಿಷೇಧಿಸಲು ನಿರ್ಣಯ ಕೈಗೊಳ್ಳಲಾಗಿತ್ತು. ಅಲ್ಲದೆ ದೇವಸ್ಥಾನದ ಪೂಜಾ ಕಾರ್ಯ, ಹಬ್ಬ, ಉತ್ಸವ ಇತ್ಯಾದಿಗಳ ಕುರಿತು ಜ್ಯೋತಿಷ್ಯ ಮಾಹಿತಿಗಳನ್ನು ಪತ್ರಿಕಾ ಪ್ರಕಟಣೆ ನೀಡುವ ಜವಾಬ್ದಾರಿ ಪರದಂಡ ಕುಟುಂಬಸ್ಥರದ್ದು ಆಗಿದೆ. ಆದರೆ ಪರದಂಡ ಮನೆತನದವರನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡುವ ಕಾರ್ಯ ಕೆಲವರಿಂದ ನಡೆಯುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪರದಂಡ ಕುಟುಂಬದ ಪಟ್ಟೆದಾರ ಮತ್ತು ತಕ್ಕ ಮುಖ್ಯಸ್ಥ ಬಿ.ಅಪ್ಪಣ್ಣ, ದೇವತಕ್ಕರಾದ ಪರದಂಡ ಮುದ್ದು ಸುಬ್ರಮಣಿ ಹಾಗೂ ಪರದಂಡ ಸದಾ ನಾಣಯ್ಯ ಉಪಸ್ಥಿತರಿದ್ದರು.

ಕೆರೆ ಕೋಡಿ ಬಿದ್ದು ಕೊಚ್ಚಿ ಹೋದ ಮೀನುಗಳು

ಗುಡ್ಡೆಹೊಸೂರು, ಸೆ.2- ಭಾರೀ ಮಳೆಯ ಕಾರಣ ಕೆರೆ ಕೋಡಿ ಬಿದ್ದು ಸುಮಾರು ಮೂರು ಕ್ವಿಂಟಾಲ್ ನಷ್ಟು ಮೀನುಗಳು ಕೊಚ್ಚಿ ಹೋಗಿರುವ ಘಟನೆ ಇಲ್ಲಿನ ಬೊಳ್ಳೂರು ಗ್ರಾಮದ ಸುಣ್ಣದಕೆರೆ ನಿವಾಸಿ ಸಿ.ಬಿ.ಪಳಂಗಪ್ಪ ಎಂಬುವವರ ಕೆರೆಯಲ್ಲಿ ಸಂಭವಿಸಿದೆ.

ಇದರೊಂದಿಗೆ ಹಲವು ಹೋಟೆಲ್‌ಗಳು ಮತ್ತು ಮನೆಗಳಿಗೆ ನೀರು ನುಗ್ಗಿತ್ತು. ಅಲ್ಲದೆ ನಿಸರ್ಗಧಾಮ, ಗಂಧದ ಕೋಟೆ ಬಳಿ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಇಂದು ಜಿಲ್ಲೆಯಾದ್ಯಂತ ಕೈಲ್ ಮುಹೂರ್ತ ಹಬ್ಬ ಆಚರಣೆ

ಮಡಿಕೇರಿ, ಸೆ2- ಕೊಡಗು ಜಿಲ್ಲೆಯಾದ್ಯಂತ ನಾಳೆ (ಸೆ3) ಕೈಲ್ ಮುಹೂರ್ತ ಹಬ್ಬವನ್ನು ಸಂಪ್ರದಾಯ ಬದ್ಧವಾಗಿ ಸಾರ್ವತ್ರಿಕವಾಗಿ ಆಚರಿಸಲಾಗುತ್ತಿದೆ 3ನೇ ತಾರೀಕಿನಂದೇ ಕೊಡಗಿನ ಹೆಚ್ಚಿನ ಕಡೆಗಳಲ್ಲಿ ಹಬ್ಬಾಚರಣೆ ನಡೆಯುತ್ತದೆಯಾದರು, ನಾಲ್ಕುನಾಡ್ ಹಾಗೂ ಮುತ್ತ್‌ನಾಡ್‌ಗಳಲ್ಲಿ ಶಾಸ್ತ್ರ ನೋಡಿಯೇ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಹಬ್ಬಕ್ಕೆ ದಿನ ನಿಶ್ಚಯಿಸುತ್ತಾರೆ. ಹೀಗಾಗಿ ಜಿಲ್ಲೆಯ ಹಲವು ಕಡೆಗಳಲ್ಲಿ ಒಂದೊಂದು ದಿನ ಹಬ್ಬಾಚರಣೆ ನಡೆಯುತ್ತದೆ.



ಕೈಲ್‌ಪೊಳ್ದ್ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಆಯುಧಗಳಾದ ಕೋವಿ, ಒಡಿಕತ್ತಿ, ಪೀಚೆಕತ್ತಿ, ಕೃಷಿ ಪರಿಕರಗಳಾದ ನೊಗ, ನೇಗಿಲು, ಈಟಿ, ಭರ್ಜಿ ಸೇರಿದಂತೆ ಆಯುಧಗಳಿಗೆ ಗಂಧದ ತಿಲಕ ಹಾಗೂ ವಿಶೇಷವಾದ 'ತೋಕ್‌ಪೂ'ವನ್ನು ಅಲಂಕರಿಸಲಾಗುತ್ತದೆ. ಹಲವು ಕಡೆಗಳಲ್ಲಿ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ಹಮ್ಮಿಕೊಂಡು ಹಿರಿಯರು, ಕಿರಿಯರು, ಮಹಿಳೆಯರಾದಿಯಾಗಿ ತೆಂಗಿನಕಾಯಿಗೆ ಗುಂಡು ಹೊಡೆದು ಶೌರ್ಯ ಪ್ರದರ್ಶಿಸುತ್ತಾರೆ.

ಈ "ಕೈಲ್‌ಪೊಳ್ದ್" ಹಬ್ಬಕ್ಕೆ ತನ್ನದೆ ಆದ ಸಂಪ್ರದಾಯಿಕ ಹಿನ್ನೆಲೆ ಇದ್ದು, ಕೊಡವ ಜನಾಂಗದವರ ಪಾಲಿಗೆ ಆಯುಧ ಪೂಜೆ ಎಂದೇ ಕರೆಯಲಾಗುತ್ತದೆ. ಕೊಡವ ಜಾನಪದ ಸಾಹಿತ್ಯ ಒಂದರ ಪ್ರಕಾರ ಕೊಡವರು ಆಯುಧಗಳನ್ನು ಪೂಜಿಸುವ ಸಾಂಕೇತವಾಗಿ ಕೈಲ್‌ಪೊಳ್ದ್‌ನ್ನು ಆಚರಿಸುತ್ತಿರುವ ಬಗ್ಗೆ ಪುರಾಣಗಳು ಹೇಳುತ್ತವೆ.

ಸೋಮವಾರಪೇಟೆ ಸ್ಟೇಡಿಯಂನಲ್ಲಿ ಕಳವು



ಸೋಮವಾರಪೇಟೆ, ಸೆ.2- ಟರ್ಫ್ ಮೈದಾನದಲ್ಲಿರುವ ಸ್ಟೇಡಿಯಂನ ಬೀಗ ಒಡೆದು ಅದರ ಒಳಗಿದ್ದ ಕಬ್ಬಿಣ ಹಾಗೂ ಅಲ್ಯೂಮಿನಿಯಂ ಪರಿಕರಗಳನ್ನು ಕಳವು ಮಾಡಿರುವ ಘಟನೆ ನಿನ್ನೆ ರಾತ್ರಿ ನಡೆದಿದೆ.

ಸ್ಟೇಡಿಯಂನ ಗೇಟ್‌ಗೆ ಅಳವಡಿಸಿದ್ದ ಬೀಗವನ್ನು ಒಡೆದು ಒಳಗೆ ನುಗ್ಗಿರುವ ಕಳ್ಳರು, ಅದರೊಳಗಿದ್ದ ಕಬ್ಬಿಣ ಹಾಗೂ ಅಲ್ಯೂಮಿನಿಯಂ ವಸ್ತುಗಳನ್ನು ಕಳವು ಮಾಡಿದ್ದಾರೆ. ಈ ಬಗ್ಗೆ ಸೋಮವಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಠಾಣಾಧಿಕಾರಿ ರಮೇಶ್ ಕುಮಾರ್ ಮತ್ತು ತಂಡ ಕಳ್ಳರ ಪತ್ತೆಗೆ ಬಲೆ ಬೀಸಿದೆ.

ಲಾರಿ ಡಿಕ್ಕಿ: ಮೂರು ಎತ್ತು ಸಾವು

ಮೂವರಿಗೆ ಗಾಯ, ಎರಡು ಎತ್ತುಗಳ ಸ್ಥಿತಿ ಗಂಭೀರ



ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು ಅವರಿಂದ ವೈಯಕ್ತಿಕ ಪರಿಹಾರ ವಿತರಣೆ

ಪಾಂಡವಪುರ, ಸೆ.2- ಲಾರಿಯೊಂದು ಎತ್ತಿನಗಾಡಿಗೆ ಡಿಕ್ಕಿ ಹೊಡೆದ ಪರಿಣಾಮ ಮೂರು ಎತ್ತುಗಳು ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಎತ್ತಿನಗಾಡಿಯ ಮೂವರು ಮಾಲೀಕರು ಗಾಯಗೊಂಡಿರುವ ಘಟನೆ ತಾಲೂಕಿನ ಮಹದೇಶ್ವರಪುರ ಗ್ರಾಮದ ಬಳಿ ನಡೆದಿದೆ.

ಮಹದೇಶ್ವರಪುರ ಗ್ರಾಮದ ಯೋಗೇಶ್, ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದ ಸುರೇಶ್, ವಿನೋದ್ ಎಂಬುವರಿಗೆ ಸೇರಿದ ಮೂರು ಎತ್ತುಗಳು ಸಾವಪ್ಪಿದ್ದು, ಎರಡು ಎತ್ತುಗಳು ಗಂಭೀರವಾಗಿ ಗಾಯಗೊಂಡಿವೆ. ಎತ್ತಿನಗಾಡಿಯ ಮಾಲೀಕರಾದ ಯೋಗೇಶ್, ಸುರೇಶ್, ವಿನೋದ್ ಎಂಬುವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾರ್ಖಾನೆಗೆ ಕಬ್ಬು ಸಾಗಾಣೆ ಮಾಡುತ್ತಿದ್ದ ಯೋಗೇಶ್, ಸುರೇಶ್, ವಿನೋದ್ ಅವರುಗಳು ಗುರುವಾರ ರಾತ್ರಿ ಕಬ್ಬು ಅನ್‌ಲೋಡ್ ಮಾಡಿ ಮನೆಗೆ ಬರುತ್ತಿದ್ದಾಗ ನಾಗಮಂಗಲ ಕಡೆಯಿಂದ ಬಂದ ತರಕಾರಿ ಲಾರಿಯೊಂದು ನೇರವಾಗಿ ಎತ್ತಿನಗಾಡಿಗಳಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಮೂರು ಎತ್ತಿನ ಗಾಡಿಗಳು ಮೊಗಚಿ ಮೂರು ಎತ್ತುಗಳು ಸಾವನ್ನಪ್ಪಿದ್ದು, ಎರಡು ಎತ್ತು ಗಂಭೀರವಾಗಿ ಗಾಯಗೊಂಡಿದೆ. ದೊಡ್ಡಬ್ಯಾಡರಹಳ್ಳಿ ಚೈತ್ರ ಗೋ ಶಾಲೆಗೆ ಬಿಡಲಾಗಿದೆ.

ಘಟನೆಯನ್ನು ಖಂಡಿಸಿ ಪ್ರತಿಭಟನೆ: ಎತ್ತಿನಗಾಡಿಗೆ ಡಿಕ್ಕಿ ಹೊಡೆದು ಎತ್ತುಗಳ ಸಾವನ್ನಪ್ಪಿರುವ ಘಟನೆಯನ್ನು ಖಂಡಿಸಿ ಸುತ್ತಮುತ್ತಲಿನ ಗ್ರಾಮಸ್ಥರು ಗುರುವಾರ ರಾತ್ರಿ ಹಾಗೂ ಶುಕ್ರವಾರ ಬೆಳಗ್ಗೆ ಶ್ರೀರಂಗಪಟ್ಟಣ-ಜೇವರ್ಗಿ ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿದರು. ರಸ್ತೆಯಲ್ಲಿ ವಾಹನಗಳ ದಟ್ಟನೆ ಹೆಚ್ಚಾಗಿ, ಮಹದೇಶ್ವರಪುರ ಗ್ರಾಮದ ಬಳಿ ಪದೇಪದೇ ಅಪಘಾತಗಳು ಸಂಭವಿಸುತ್ತಿದ್ದು, ಸಾಕಷ್ಟು ಸಾವು-ನೋವುಗಳು ಸಂಭವಿಸುತ್ತಿವೆ. ಹಾಗಾಗಿ ಗ್ರಾಮದಲ್ಲಿ ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ ವಾಹನ ದಟ್ಟನೆಯನ್ನು ಕಡಿಮೆ ಮಾಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಪೊಲೀಸರು ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿಯೂ ಸಹ ನಡೆಯಿತು.

ಶಾಸಕರು ಭೇಟಿ ಪರಿಹಾರ: ಘಟನಾ ಸ್ಥಳಕ್ಕೆ ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು ಅವರು ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು. ಬಳಿಕ ಎಲ್ಲರೊಂದಿಗೆ ಚರ್ಚಿಸಿ ಮೃತಪಟ್ಟ ಎತ್ತುಗಳ ಮಾಲೀಕರಿಗೆ ಲಾರಿ ಮಾಲೀಕರಿಂದ ತಲಾ 2 ಲಕ್ಷ ಪರಿಹಾರ ಕೊಡುವ ಹಾಗೆ ತೀರ್ಮಾನಿಸಿದರು. ಅಲ್ಲದೆ ಶಾಸಕರು ಮೃತ ಎತ್ತುಗಳ ಮಾಲೀಕರಿಗೆ ತಲಾ 25 ಸಾವಿರ ವೈಯುಕ್ತಿಕ ಪರಿಹಾರ ನೀಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಇಂತಹ ಘಟನೆಗಳು ನಡೆಯಬಾರದು. ಲಾರಿ ಚಾಲಕನ ನಿರ್ಲಕ್ಷ್ಯದಿಂದ ಇಂತಹ ದೊಡ್ಡ ದುರಂತ ನಡೆದಿದೆ. ಎತ್ತಿನಗಾಡಿಯಲ್ಲಿ ಕಬ್ಬು ಸಾಗಿಸುವ ರೈತರ ಕಷ್ಟವನ್ನು ರೈತನ ಮಗನಾಗಿ ಅರ್ಥೈಸಿ ಕೊಂಡಿದ್ದೇನೆ ನ್ಯಾಯ ಸಿಗುವ ಕೆಲಸ ಮಾಡಿಸುತ್ತೇನೆ. ಕ್ಷೇತ್ರದಲ್ಲಿ ಎಲ್ಲೆಲ್ಲಿ ಅಪಘಾತ ವಲಯಗಳಿವೆ ಅವುಗಳನ್ನು ಗುರುತಿಸಲಾಗುವುದು. ಇದೀಗ ಮೃತಪಟ್ಟಿರುವ ಎತ್ತುಗಳ ಕುಟುಂಬಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡುವ ಕೆಲಸ ಮಾಡುತ್ತೇನೆ ಎಂದರು.

ಅದಾದ ಬಳಿಕ ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್ ಭೇಟಿಕೊಟ್ಟು ಮಹದೇಶ್ವರಪುರ ಗ್ರಾಮದ ಯೋಗೇಶ್ ಅವರಿಗೆ ವೈಯುಕ್ತಿಕ ಪರಿಹಾರ ವಿತರಣೆ ಮಾಡಿದರು. ಘಟನೆ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಪನಿರ್ದೇಶಕರಾಗಿ ನಾಗರಾಜ್ ಅಧಿಕಾರ ಸ್ವೀಕಾರ

ಮಂಡ್ಯ, ಸೆ.2-ಮಂಡ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾಗಿ ಆರ್.ನಾಗರಾಜ್ ಆಗಸ್ಟ್ 29 ರಂದು ಅಧಿಕಾರ ಸ್ವೀಕರಿಸಿದ್ದಾರೆ.

ಇಲಾಖೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಹಾಗೂ ಕುಂದುಕೊರತೆಗಳಿದ್ದಲ್ಲಿ ಕಚೇರಿ ದೂರವಾಣಿ ಸಂಖ್ಯೆ 08232-221315/227336 ಅಥವಾ ಖುದ್ದಾಗಿ ಭೇಟಿ ಮಾಡಬಹುದು ಎಂದು ಮಂಡ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಸೆ.2- ಮಂಡ್ಯ ಕೆ.ಐ.ಎ.ಡಿ.ಬಿ ಎಂಯುಎಸ್‌ಎಸ್ ನಿಂದ ಹೊರಹೊಮ್ಮುವ ಎಫ್-3 ಡೈರಿ ಫೀಡರ್ ಮತ್ತು ಎಫ್-2 ಹನಕೆರೆ ಮತ್ತು ಎಫ್-7 ವೆಲ್ಸನ್ ಫೀಡರ್ನ ಅಡಿ ಬರುವಂತಹ ಗ್ರಾಮಗಳಾದ



ಶ್ರೀನಿವಾಸಪುರ ಗೇಟ್, ಮರಕಾಡದೊಡ್ಡಿ, ಹೊಸಬೂದನೂರು, ಹಳೆಬೂದನೂರು, ಕಟ್ಟೆದೊಡ್ಡಿ, ಮಲ್ಲಯ್ಯನದೊಡ್ಡಿ, ಬಿ.ಗೌಡಗೆರೆ ಹಾಗೂ ಹುಲಿಕೆರೆ ಗ್ರಾಮಗಳಲ್ಲಿ ಮಂಡ್ಯ ಬೆಂಗಳೂರು ಮುಖ್ಯ ರಸ್ತೆಯ ಅಗಲೀಕರಣ ಪ್ರಯುಕ್ತ ಲೈನ್ ಕಾಮಗಾರಿ ನಡೆಯುತ್ತಿರುವುದರಿಂದ ಸೆ.4 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಗ್ರಾಮಗಳಿಗೆ ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ ಎಂದು ಮಂಡ್ಯ ಕೆರಗೋಡು ಉಪ ವಿಭಾಗ ಚಾವಿಸನಿನಿ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಶುಗರ್ ಕಾರ್ಖಾನೆ ಆರಂಭಿಸಿದ್ದು ಬಿಜೆಪಿ ಸರ್ಕಾರದ ಹೆಗ್ಗಳಿಕೆ

ಬಿಜೆಪಿ ಅಧ್ಯಕ್ಷ ರಮೇಶ್ ಪೀಹಳ್ಳಿ ಹೇಳಿಕೆ

ಶ್ರೀರಂಗಪಟ್ಟಣ, ಸೆ.2-ಜಿಲ್ಲೆಯಲ್ಲಿ ರೈತರ ಜೀವನಾಡಿ ಮಂಡ್ಯ ಶುಗರ್ ಕಾರ್ಖಾನೆಯನ್ನು ಆರಂಭಿಸಿದ್ದು ನಮ್ಮ ಬಿಜೆಪಿ ಸರ್ಕಾರದ ಹೆಗ್ಗಳಿಕೆಯಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ರಮೇಶ್ ಪೀಹಳ್ಳಿ ತಿಳಿಸಿದರು.

ಪಟ್ಟಣದ ಪತ್ರಿಕಾಭವನದಲ್ಲಿ ಘೋಷ್ಠಿ ನಡೆಸಿ ಅವರು ಮಾತನಾಡಿದರು. ಕಳೆದ 8 ವರ್ಷಗಳಿಂದ ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ಕಾರ್ಖಾನೆ ನಡೆಸದಂತೆ ಮುಚ್ಚಿ ಜಿಲ್ಲೆಯ ರೈತರಿಗೆ ಅನ್ಯಾಯ ಮಾಡಿದ್ದರು. ರೈತರು, ಜನಪ್ರತಿನಿಧಿಗಳು, ಹಲವಾರು ಮಂದಿ ಕಾರ್ಖಾನೆ ಉಳಿಯಬೇಕು ಜೊತೆಗೆ ಕಾರ್ಖಾನೆ ಆರಂಭಿಸಬೇಕು ಎಂಬ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಅದಕ್ಕೆ ಸ್ಪಷ್ಟನೆ ನೀಡಿ ಇದೀಗ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿಯವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ 50 ಕೋಟಿ ರೂಗಳನ್ನು ಬಿಡುಗಡೆ ಮಾಡಿ ಕಾರ್ಖಾನೆಯನ್ನು ತೆರೆದು ಸಂಕಷ್ಟಕ್ಕೆ ಸಿಲುಕಿದ್ದ ಇಲ್ಲಿನ ರೈತರಿಗೆ ನೆರವಾಗಿದೆ ಇದರಿಂದ ಜಿಲ್ಲೆಯ ಪರವಾಗಿ ಮುಖ್ಯ ಮಂತ್ರಿಗಳನ್ನು ಅಭಿನಂಧಿಸುತ್ತಿದ್ದೇವೆ ಎಂದರು. ಇದಲ್ಲದೆ ಮಂಡ್ಯ ಜಿಲ್ಲೆಗೆ ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯವನ್ನು ಜಾರಿಗೊಳಿಸಿದ ಉನ್ನತ ಶಿಕ್ಷಣ ಸಚಿವರಿಗೂ ಅಭಿನಂಧಿಸುತ್ತೇವೆ. ಸ್ಥಳೀಯ ಶಾಸಕರು ಸಂಸದರ ಒತ್ತಾಯದ ಮೆರೆಗೆ ಸಚಿವರು ಕೆಆರ್‌ಎಸ್ ಶ್ರೀರಂಗಪಟ್ಟಣ ರಸ್ತೆ ಅಭಿವೃದ್ಧಿಗೆ 9 ಕೋಟಿ ರೂ.ಗಳು ಬಿಡುಗಡೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ನಡೆದಿದೆ. ಶೀಘ್ರದಲ್ಲಿ ಕಾಮಗಾರಿ ನಡೆಯುತ್ತದೆ ಇದಕ್ಕೆ ಆತಂಕಬೇಡ ಅಪಪ್ರಚಾರವು ಬೇಡ ಎಂದರು.

ಸೆ.12ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರು ಆಗಮನ: ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ಶ್ರೀರಂಗಪಟ್ಟಣ ಸೆ.12ರ ಮಧ್ಯಾಹ್ನ 3 ಗಂಟೆಗೆ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ನಡೆಯುವ ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಮಾವೇಶಕ್ಕೆ ಆಗಮಿಸುತ್ತಿದ್ದು ಬೂತ್ ಮಟ್ಟದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಗಮಿಸಲು ಕೋರಲಾಗಿದೆ ಎಂದು ಅವರು ತಿಳಿಸಿದರು.

ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಸಂತೋಷ್ ಕುಮಾರ್, ನಂದೀಶ್, ನಗರಾಧ್ಯಕ್ಷ ಹೇಮಂತ್ ಕುಮಾರ್ ಇತರರು ಉಪಸ್ಥಿತರಿದ್ದರು.

ಎಲ್ಲಾ ಜಿಲ್ಲೆಗಳಲ್ಲೂ ಯೋಗಥಾನ್ ಕಾರ್ಯಕ್ರಮ

ಸಚಿವ ಡಾ.ಕೆ.ಸಿ.ನಾರಾಯಣಗೌಡ ವಿಡಿಯೋ ಸಂವಾದದಲ್ಲಿ ಚರ್ಚೆ

ಮಂಡ್ಯ, ಸೆ.2- ಯೋಗಾಥಾನ್ 2022ರ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಲ್ಲಿ ಆಯೋಜಿಸುವ ಸಂಬಂಧ ಪೂರ್ವಭಾವಿ ಸಭೆಯು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವ ಡಾ.ಕೆ.ಸಿ.ನಾರಾಯಣಗೌಡ ಅಧ್ಯಕ್ಷತೆಯಲ್ಲಿ ವಿಡಿಯೋ ಸಂವಾದದ ಮೂಲಕ ನಡೆಯಿತು.

ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಹೊಸ ಸ್ವಯಂ ಉದ್ಯೋಗ ಯೋಜನೆಗಳು/ ಕಿರು ಉದ್ಯಮಗಳು/ ಡೈರಿ ಘಟಕಗಳನ್ನು ಸ್ಥಾಪಿಸುವ ಮೂಲ ಉದ್ದೇಶದಿಂದ ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಯನ್ನು ಜಾರಿಗೆ ತಂದು ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಒಂದು ಯುವಕರ ಸಂಘವನ್ನು ಸ್ಥಾಪಿಸಲು ಹಾಗೂ ಕ್ರೀಡಾಂಗಣ ಅನುಷ್ಠಾನ ಯೋಜನೆ ಕುರಿತು ಚರ್ಚಿಸಿ ಸಚಿವರು ಸಲಹೆ ನೀಡಿದರು.



ಇದೇ ವೇಳೆ ಜಿಲ್ಲಾಧಿಕಾರಿ ಎಸ್.ಅಶ್ವತಿ ಜಿಲ್ಲೆಯಲ್ಲಿನ ಕ್ರೀಡಾಂಗಣ ಅನುಷ್ಠಾನ ಯೋಜನೆ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು, ಜಿಪಂ ಉಪ ಕಾರ್ಯದರ್ಶಿ ಸಂಜೀವಪ್ಪಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಆಸಿಫಾ, ನಿರ್ಮಿತಿ ಕೇಂದ್ರದ ಅಧಿಕಾರಿ ನರೇಶ್,ಯುವಸಬಲಿಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಓಂ ಪ್ರಕಾಶ್ ಇತರರು ಉಪಸ್ಥಿತರಿದ್ದರು.

ಮಳೆ, ಪ್ರವಾಹ ಹಾನಿ ಪರಿಹಾರ ಕಾರ್ಯ ತ್ವರಿತಗೊಳಿಸಿ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚನೆ



ಚಾಮರಾಜನಗರ, ಸೆ.2-ಜಿಲ್ಲೆಯಲ್ಲಿ ಮಳೆ ಹಾಗೂ ಪ್ರವಾಹದಿಂದಾಗಿರುವ ತೊಂದರೆಗಳಿಗೆ ಪರಿಹಾರ ಹಾಗೂ ಪುನರ್ವಸತಿ ಕಾರ್ಯವನ್ನು ಸಮರೋಪಾದಿಯಲ್ಲಿ ಅಧಿಕಾರಿಗಳು ನಿರ್ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚಿಸಿದರು.

ನಗರದ ಜಿಪಂ ಸಭಾಂಗಣದಲ್ಲಿಂದು ಜಿಲ್ಲೆಯಲ್ಲಿ ಮಳೆಹಾನಿ ಹಾಗೂ ಪ್ರವಾಹದಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ಕೈಗೊಂಡ ಹಾಗೂ ಕೈಗೊಳ್ಳಬೇಕಿರುವ ಪರಿಹಾರ ಕ್ರಮಗಳ ಕುರಿತು ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ಪ್ರವಾಹ, ಪ್ರಕೃತಿ ವಿಕೋಪಗಳಿಂದ ಜನರು ಸಂಕಷ್ಟದಲ್ಲಿದ್ದಾರೆ. ರೈತರಿಗೆ ಸಾಕಷ್ಟು ತೊಂದರೆಯಾಗಿದೆ. ಶಾಲೆ, ರಸ್ತೆ ಸೇರಿದಂತೆ ಇತರೆ ಮೂಲ ಸೌಕರ್ಯಗಳಿಗೂ ಧಕ್ಕೆಯಾಗಿದೆ. ನಷ್ಟದ ಕುರಿತು ವ್ಯಾಪಕ ಸಮೀಕ್ಷೆ ಕೈಗೊಂಡು ನಿಖರ ಅಂಕಿ ಅಂಶ ಒದಗಿಸಬೇಕು. ಪುನರ್ವಸತಿ ಹಾಗೂ ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಮಳೆ- ಪ್ರವಾಹ ಸಂತ್ರಸ್ತರಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಪರಿಶೀಲಿಸಿ ಪರಿಹಾರ ತಲುಪಿಸಬೇಕು ಎಂದು ತಿಳಿಸಿದ ಸಚಿವರು, ಕೆರೆ-ಕಟ್ಟೆಗಳ ರಾಜಕಾಲುವೆಗಳು ಸೇರಿದಂತೆ ಎಲ್ಲಾ ಕಾಲುವೆಗಳನ್ನು ಸ್ವಚ್ಛಗೊಳಿಸಬೇಕು. ಒತ್ತುವರಿಯಾಗಿದ್ದಲ್ಲಿ ಪೊಲೀಸರ ನೆರವು ಪಡೆದು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಬೇಕು ಎಂದು ತಾಕೀತು ಮಾಡಿದರು.

ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪುನಾರಂಭಿಸಿ

ಚಾಮರಾಜನಗರ: ಜಿಲ್ಲಾ ಕೇಂದ್ರದ ಮಧ್ಯದಲ್ಲಿರುವ ಜಿಲ್ಲಾಸ್ಪತ್ರೆಯನ್ನು ನಾಳೆಯಿಂದಲೇ ಪುನಾರಂಭಿಸುವಂತೆ ಸಚಿವ ವಿ.ಸೋಮಣ್ಣ ಡೀನ್ ಹಾಗೂ ಡಿಎಚ್‌ಓಗೆ ಸೂಚಿಸಿದರು. ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಹಳೆ ಜಿಲ್ಲಾಸ್ಪತ್ರೆ ಕಟ್ಟಡವನ್ನು ಖಾಲಿ ಬಿಟ್ಟಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಸೋಮಣ್ಣ, ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಡೀನ್ ಡಾ.ಜಿ.ಎಂ.ಸಂಜೀವ್‌ರನ್ನು ತರಾಟೆಗೆ ತೆಗೆದುಕೊಂಡರು.

ಹೊಸ ಆಸ್ಪತ್ರೆ ಬಂದ ತಕ್ಷಣ, ಹಳೆಯ ಆಸ್ಪತ್ರೆಯನ್ನು ಖಾಲಿ ಮಾಡಿದ್ದೀರಿ. ಜನರು ಅಷ್ಟು ದೂರ ಬರುವುದಕ್ಕೆ ಕಷ್ಟ ಆಗುತ್ತದೆ. ಇಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು ಎಂದು ಸಚಿವರು ಹೇಳಿದರು. ಜಿಲ್ಲಾಧಿಕಾರಿ ಅವರೊಂದಿಗೆ ಚರ್ಚಿಸಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿ ಎಂದು ತಾಕೀತು ಮಾಡಿದರು.

ಹಾನಿಗೀಡಾಗಿರುವ ಅಂಗನವಾಡಿ, ಶಾಲಾ ಕೊಠಡಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಹಾಸ್ಟೆಲ್‌ಗಳ ಕಟ್ಟಡಗಳನ್ನು ದುರಸ್ತಿಪಡಿಸಬೇಕು. ವೈದ್ಯಕೀಯ ಕಾಲೇಜಿನ ಬೋಧನಾ ಆಸ್ಪತ್ರೆಯಲ್ಲಿ ರೋಗಿಗಳ ಸೇವೆಗೆ 24X7 ಅವಧಿಯಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ದಿಂಬಂನಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿಷೇಧದಿಂದಾಗಿ ಮಲೆಮಹದೇಶ್ವರಬೆಟ್ಟ, ಹನೂರು ತಾಲೂಕಿನ ಇತರೆ ಗ್ರಾಮಗಳ ಮೂಲಕ ರಾತ್ರಿ ವೇಳೆ ಹೆಚ್ಚಾಗಿರುವ ಲಾರಿಗಳ ಸಂಚಾರಕ್ಕೆ ಕಡಿವಾಣ ಹಾಕಲು ಕೂಡಲೇ ಚೆಕ್‌ಪೋಸ್ಟ್ ತೆರೆಯಬೇಕು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ನಿಟ್ಟಿನಲ್ಲಿ ತಕ್ಷಣವೇ ಕ್ರಮ ವಹಿಸಬೇಕೆಂದು ಸಚಿವರು ಸೂಚಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ ಎನ್.ಮಹೇಶ್, ಸಿ.ಎಸ್.ನಿರಂಜನ್ ಕುಮಾರ್ ತಮ್ಮ ಕ್ಷೇತ್ರ ವ್ಯಾಪ್ತಿಯ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದರು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಎಎಸ್‌ಪಿ ಕೆ.ಎಸ್.ಸುಂದರ್‌ರಾಜ್, ಎಸಿ ಗೀತಾ ಹುಡೇದ ಇತರರು ಸಭೆಯಲ್ಲಿದ್ದರು

ಮ.ಬೆಟ್ಟ-ತಮಿಳುನಾಡು ಹೆದ್ದಾರಿಯಲ್ಲಿ ರಾತ್ರಿ ವೇಳೆ ಭಾರೀ ವಾಹನಗಳ ಸಂಚಾರ ನಿಷೇಧ

ಚಾಮರಾಜನಗರ, ಸೆ2-ಜಿಲ್ಲೆಯ ಹನೂರು ತಾಲೂಕಿನ ತಾಳಬೆಟ್ಟದಿಂದ ಮಹದೇಶ್ವರಬೆಟ್ಟ, ಪಾಲಾರ್ ಮೂಲಕ ತಮಿಳುನಾಡಿಗೆ ಹೋಗುವ ಅಂತಾರಾಜ್ಯ ಹೆದ್ದಾರಿಯಲ್ಲಿ ಭಾರೀ ವಾಹನಗಳ ಸಂಚಾರವನ್ನು ರಾತ್ರಿ 9ರಿಂದ ಬೆಳಗ್ಗೆ 6 ಗಂಟೆಯವರೆಗೆ ನಿಷೇಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ.



ರಾಷ್ಟ್ರೀಯ ಹೆದ್ದಾರಿ 209ರಲ್ಲಿ ರಾತ್ರಿ ಸಂಚಾರ ನಿಷೇಧಿಸಿ ಮದ್ರಾಸ್ ಹೈಕೋರ್ಟ್ ಆದೇಶಿಸಿರುವುದರಿಂದ ರಾತ್ರಿ ವೇಳೆಯಲ್ಲಿ ಎಲ್ಲಾ ಮಾದರಿಯ ವಾಹನಗಳು ಮಲೆ ಮಹದೇಶ್ವರಬೆಟ್ಟದ ಮಾರ್ಗವಾಗಿ ತಮಿಳುನಾಡಿಗೆ ಸಂಚರಿಸುತ್ತಿದ್ದವು. ತಾಳಬೆಟ್ಟದಿಂದ ಮಲೆಮಹದೇಶ್ವರ ಬೆಟ್ಟದವರೆಗೆ ಮತ್ತು ಮಹದೇಶ್ವರ ಬೆಟ್ಟದಿಂದ ಪಾಲಾರ್‌ವರೆಗಿನ ರಸ್ತೆಯು ಕಡಿದು ಹಾಗೂ ಚಿಕ್ಕದಾಗಿರುವುದರಿಂದ ಭಾರೀ ವಾಹನಗಳ ಸಂಚಾರದಿಂದ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಭಾರೀ ವಾಹನಗಳ ಸಂಚಾರದಿಂದ ರಸ್ತೆಗಳು ಸಂಪೂರ್ಣವಾಗಿ ಹದಗೆಟ್ಟಿತ್ತು. ಹಲವು ಅಪಘಾತಗಳೂ ಸಂಭವಿಸಿದ್ದವು. ಅಲ್ಲದೆ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು, ಸಾರ್ವಜನಿಕರು, ಸರ್ಕಾರ ಹಾಗೂ ತುರ್ತು ವಾಹನಗಳ ಸುಗಮ ಸಂಚಾರವು ಕಷ್ಟಸಾಧ್ಯವಾಗಿತ್ತು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ನೇತೃತ್ವದಲ್ಲಿ ಶುಕ್ರವಾರ ನಡೆದ ಶಾಸಕರು ಹಾಗೂ ಅಧಿಕಾರಿಗಳ ಸಭೆಯಲ್ಲಿ ಹನೂರು ಶಾಸಕ ಆರ್.ನರೇಂದ್ರ ಪ್ರಸ್ತಾಪಿಸಿದ್ದರು. ಭಾರೀ ವಾಹನಗಳ ಸಂಚಾರಕ್ಕೆ ಕಡಿವಾಣ ಹಾಕಬೇಕುವಂತೆ ಮನವಿಯನ್ನೂ ಮಾಡಿದ್ದರು. ಇದಕ್ಕೆ ಸ್ಪಂದಿಸಿದ್ದ ಸಚಿವ ಸೋಮಣ್ಣ ಅವರು, ಅಗತ್ಯ ಕ್ರಮಕ್ಕೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದ್ದರು.

ರಸ್ತೆ ಕಾಮಗಾರಿ: ವಾಹನಗಳಿಗೆ ಬದಲಿ ಮಾರ್ಗ

ಚಾಮರಾಜನಗರ: ಕೊಳ್ಳೇಗಾಲದಿಂದ ಮಲೆಮಹದೇಶ್ವರಬೆಟ್ಟದ ಕಡೆಗೆ ತೆರಳುವ ರಸ್ತೆಯಲ್ಲಿನ ದೊಡ್ಡರಂಗನಾಥ ಕೆರೆ ಮತ್ತು ಚಿಕ್ಕರಂಗನಾಥ ಕೆರೆಯ ಏರಿಯ ಮೇಲೆ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಕೂಲವಾಗುವಂತೆ ಕೊಳ್ಳೇಗಾಲದ ಕೋರ್ಟ್ ಮುಂಭಾಗದಿಂದ ಸಿದ್ದಯ್ಯನಪುರ-ಮಧುವನಹಳ್ಳಿವರೆಗೆ ಆಗಮನ ಮತ್ತು ನಿರ್ಗಮನ ಮಾರ್ಗ(4.30 ಕಿಮೀ) ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನ ಸಂಚಾರವನ್ನು 30 ದಿನಗಳವರೆಗೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ ಹೊರಡಿಸಿದ್ದಾರೆ. ಸದರಿ ಮಾರ್ಗದ ಬದಲಾಗಿ ಕೊಳ್ಳೇಗಾಲ ಪ್ರವಾಸಿಮಂದಿರದ(ಐಬಿ) ಸರ್ಕಲ್‌ನಿಂದ-ಕೆಎಸ್‌ಆರ್‌ಟಿಸಿ ಬಸ್ ಡಿಪೋ-ಆರ್.ಎಂ.ಫಂಕ್ಷನ್ ಹಾಲ್-ಲಕ್ಕರಸನ ಪಾಳ್ಯ ಕ್ರಾಸ್-ಹೊಂಡರಬಾಳು-ಮಧುವನಹಳ್ಳಿವರೆಗೆ ಆಗಮನ ಮತ್ತು ನಿರ್ಗಮನ ಮಾರ್ಗ (6 ಕಿಮೀ) ರಸ್ತೆಯಲ್ಲಿ ವಾಹನಗಳು ಸಂಚರಿಸುವಂತೆ ಜಿಲ್ಲಾಧಿಕಾರಿ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಅಪಚಿತ ಶವ ಪತ್ತೆ

ಕೊಳ್ಳೇಗಾಲ, ಸೆ.2-ನಗರದ ಉಮಾಶಂಕರ ಕಲ್ಯಾಣ ಮಂಟಪದ ಪಕ್ಕದ ಡೈರಿ ಮುಂಭಾಗದ ರಸ್ತೆಯಲ್ಲಿ ಸುಮಾರು 50 ರಿಂದ 55 ವರ್ಷದ ವಯಸ್ಸಿನ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದೆ.

ಟೌನ್ ಠಾಣೆ ಪೊಲೀಸರು, ಪರಿಶೀಲಿಸಿ, ಶವವನ್ನು ಚಾ.ನಗರ ಮೆಡಿಕಲ್ ಕಾಲೇಜಿನಲ್ಲಿ ಇರಿಸಿದ್ದಾರೆ. ಅನಾರೋಗ್ಯದಿಂದ ಅಪರಿಚಿತ ವ್ಯಕ್ತಿಯು ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ. ಈ ಸಂಬಂಧ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಭಾವಚಿತ್ರ ಪಲ್ಲಕ್ಕಿ ಉತ್ಸವ

ಚಾಮರಾಜನಗರ, ಸೆ.2- ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಗಳವರ 107ನೆಯ ಜಯಂತಿ ಅಂಗವಾಗಿ ನಗರದಲ್ಲಿ ಶ್ರೀಗಳ ಭಾವಚಿತ್ರ ಪಲ್ಲಕ್ಕಿ ಉತ್ಸವ ಶುಕ್ರವಾರ ಅದ್ಧೂರಿಯಾಗಿ ನಡೆಯಿತು.

ನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಹಾಗೂ ಜೆಎಸ್‌ಎಸ್ ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿದ್ದ ಪಲ್ಲಕ್ಕಿ ಉತ್ಸವ ಜೆಎಸ್‌ಎಸ್ ಕಾಲೇಜು ಆವರಣದಿಂದ ಆರಂಭಗೊಂಡಿತು. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಶಾಸಕ ಸಿ.ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಜಿಪಂ ಮಾಜಿ ಅಧ್ಯಕ್ಷ ಜಿ.ನಾಗಶ್ರೀ ಪ್ರತಾಪ್, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಮರೆಯಾಲ ಶ್ರೀ ಮುರುಘಾ ರಾಜೇಂದ್ರ ಶ್ರೀಗಳು, ಚಾಮರಾಜನಗರದ ಶ್ರೀ ಚನ್ನಬಸವ ಸ್ವಾಮೀಜಿ ಅವರು, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಬಳಿಕ ಪಲ್ಲಕ್ಕಿ ಉತ್ಸವವು ಚಾಮರಾಜನಗರದ ಜೋಡಿರಸ್ತೆ, ಭುವನೇಶ್ವರಿ ವೃತ್ತ, ಶ್ರೀ ಚಾಮರಾಜೇಂದ್ರ ದೇವಸ್ಥಾನದವರೆಗೆ ಸಾಗಿ ಮತ್ತೆ ಅದೇ ಮಾರ್ಗವಾಗಿ ಜೆಎಸ್‌ಎಸ್ ಕಾಲೇಜು ತಲುಪಿತು.

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು, ಮುಖಂಡರಾದ ಪಿ.ಮರಿಸ್ವಾಮಿ, ಆರ್.ಎಂ.ಸ್ವಾಮಿ, ಕೆ.ಪಿ.ಸದಾಶಿವಮೂರ್ತಿ, ಆರ್.ಕುಮಾರಸ್ವಾಮಿ, ತಮ್ಮಡಹಳ್ಳಿ ರವಿಶಂಕರ್, ದೊಡ್ಡರಾಯಪೇಟೆ ಗಿರೀಶ್, ಆಲೂರು ಪ್ರದೀಪ್, ಬಾಬು, ಆರ್.ವಿ.ಮಹದೇವಸ್ವಾಮಿ, ಆರ್.ಪುಟ್ಟಮಲ್ಲಪ್ಪ, ಆರ್.ಎಸ್.ಲಿಂಗರಾಜು, ಬಿ.ಕೆ.ರವಿಕುಮಾರ, ಮಹದೇವಸ್ವಾಮಿ ಇತರರಿದ್ದರು.





ಸೆ.27ರಿಂದ ಅ.3ರವರೆಗೆ ದಸರಾ ಚಲನಚಿತ್ರೋತ್ಸವ

ಮೈಸೂರಿನ ಡಿಆರ್‌ಸಿ, ಐನಾಕ್ಸ್‌ನಲ್ಲಿ ಒಟ್ಟು 112 ಚಿತ್ರ ಪ್ರದರ್ಶನ







ಮೈಸೂರು, ಸೆ. 2(ಆರ್‌ಕೆ)–ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 3ರವರೆಗೆ 2022ರ ದಸರಾ ಚಲನಚಿತ್ರೋತ್ಸವ ಆಯೋಜಿಸಿದ್ದು, ಮೈಸೂರಿನ ಎರಡು ಮಲ್ಟಿಪ್ಲೆಕ್ಸ್‌ಗಳಲ್ಲಿ ಒಟ್ಟು 112 ಚಿತ್ರಗಳು ಪ್ರದರ್ಶನಗೊಳ್ಳಲಿವೆ.



ದಸರಾ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಮೈಸೂರಿನ ಕಲಾ ಮಂದಿರದಲ್ಲಿ ಸೆ.26 ರಂದು ದಸರಾ ಚಲನಚಿತ್ರೋತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದು, ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಉಪಸಮಿತಿ ಸದಸ್ಯ ಕಾರ್ಯದರ್ಶಿಗಳಾದ ವಾರ್ತಾ ಮತ್ತು ಪ್ರಚಾರ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ತಿಳಿಸಿದ್ದಾರೆ. ಸೆ.27 ರಿಂದ ಅ.3 ರವರೆಗೆ 7 ದಿನಗಳ ಕಾಲ ಮೈಸೂರಿನ ಜಯ ಲಕ್ಷ್ಮೀಪುರಂನ ಬಿ.ಎಂ.ಹ್ಯಾಬಿಟಟ್ ಮಾಲ್‌ನಲ್ಲಿರುವ ಡಿಆರ್‌ಸಿ ಸಿನಿಮಾಸ್ ಮತ್ತು ಎಂ.ಜಿ. ರಸ್ತೆಯ ಮಾಲ್ ಆಫ್ ಮೈಸೂರ್‌ನಲ್ಲಿರುವ ಐನಾಕ್ಸ್ ಸ್ಕ್ರೀನ್‌ಗಳಲ್ಲಿ ಕನ್ನಡ ಸೇರಿದಂತೆ ಭಾರತೀಯ ವಿವಿಧ ಭಾಷೆಗಳು ಮತ್ತು ಹಾಲಿವುಡ್ ಸಿನಿಮಾಗಳನ್ನು ಪ್ರದರ್ಶಿಸಲಾಗುವುದು.

ಅಪ್ಪು ಚಿತ್ರಗಳ ಪ್ರದರ್ಶನ

ಮೊದಲ ದಿನ, ಸೆಪ್ಟೆಂಬರ್ 27 ರಂದು ಬೆಟ್ಟದ ಹೂ ನಿಂದ ಇತ್ತೀಚಿನ ಜೇಮ್ಸ್ ವರೆಗೆ ಪವರ್‌ಸ್ಟಾರ್ ಪುನೀತ್ ರಾಜಕುಮಾರ್ (ಅಪ್ಪು) ನಾಯಕ ನಟನಾಗಿ ಅಭಿನಯಿಸಿರುವ ಆಯ್ದ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ನಂತರದ ದಿನಗಳಲ್ಲಿ 56 ಅತ್ಯುತ್ತಮ ಕನ್ನಡ ಚಿತ್ರಗಳು, 28 ಪನೋರಮಾ ಹಾಗೂ 28 ಹಾಲಿವುಡ್ ಚಿತ್ರಗಳನ್ನು ಪ್ರದರ್ಶಿಸಲು ಸಿದ್ಧತೆ ಮಾಡಲಾಗುತ್ತಿದೆ ಎಂದು ಹರೀಶ್ ತಿಳಿಸಿದರು.

ಅತೀ ಹೆಚ್ಚು 112 ಚಿತ್ರ ಪ್ರದರ್ಶನ

ಐನಾಕ್ಸ್‌ನ 3 ಸ್ಕ್ರೀನ್‌ಗಳಲ್ಲಿ 84 ಹಾಗೂ ಡಿಆರ್‌ಸಿಯ 1 ಸ್ಕ್ರೀನ್‌ನಲ್ಲಿ 28 ಚಿತ್ರಗಳು ದಸರಾ ಚಿತ್ರೋತ್ಸವದಲ್ಲಿ ಪ್ರದರ್ಶನವಾಗಲಿದ್ದು, ಹಿರಿಯ ನಾಗರಿಕರು, ಮಹಿಳೆಯರು, ಅಂಗವಿಕಲರಿಗೆ ವಿಶೇಷ ರಿಯಾಯಿತಿ ನೀಡಿ ಉಳಿದಂತೆ ಸಾಮಾನ್ಯ ದರ ನಿಗದಿಪಡಿಸಿ ಚಿತ್ರ ವೀಕ್ಷಿಸಲು ಅವಕಾಶ ಕಲ್ಪಿಸಲಾಗುವುದು. ದಸರಾ ಚಲನಚಿತ್ರೋತ್ಸವ ಸಮಿತಿ ದರ ನಿಗದಿಪಡಿಸಲಿದೆ.

ಮೂರು ದಿನ ಕಾರ್ಯಾಗಾರ

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸೆ.22 ರಿಂದ ಮೂರು ದಿನ ಚಿತ್ರ ನಿರ್ಮಾಣ, ನಿರ್ದೇಶನ ಕುರಿತಂತೆ ರಾಜ್ಯ ಮಟ್ಟದ ಕಾರ್ಯಾಗಾರ ಏರ್ಪಡಿಸಲಾಗಿದ್ದು, 500 ರೂ. ನೋಂದಣಿ ಶುಲ್ಕ ಪಾವತಿಸಿ ಈ ಕಾರ್ಯಾಗಾರದಲ್ಲಿ ಭಾಗವಹಿಸುವವರಿಗೆ ಚಲನಚಿತ್ರೋತ್ಸವದ ಸಿನಿಮಾ ನೋಡಲು ಉಚಿತ ಪ್ರವೇಶಾವಕಾಶ ನೀಡಲಾಗುವುದು.

ಕಿರುಚಿತ್ರ ಸ್ಪರ್ಧೆ

ದಸರಾ ಚಲನಚಿತ್ರೋತ್ಸವದ ಅಂಗವಾಗಿ ಕಿರುಚಿತ್ರ ಸ್ಪರ್ಧೆ ಏರ್ಪಡಿಸಿದ್ದು, 5 ನಿಮಿಷಗಳ ಉತ್ತಮ ಕಿರು ಚಿತ್ರಗಳಿಗೆ ಮೊದಲನೇ ಬಹುಮಾನ 10,000 ರೂ., 2ನೇ ಬಹುಮಾನ 8000 ರೂ. ಹಾಗೂ 3ನೇ ಬಹುಮಾನವಾಗಿ 5000 ರೂ. ಜೊತೆಗೆ ಪ್ರಮಾಣ ಪತ್ರ ನೀಡಲಾಗುವುದು. ಅಲ್ಲದೇ ಈ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲರಿಗೂ ಸಮಾಧಾನಕರ ಬಹುಮಾನವಾಗಿ 2000 ರೂ. ನೀಡಲಾಗುವುದು. ಕೊರೊನಾ ದಿಂದಾಗಿ ಎರಡು ವರ್ಷ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಿಸಿದ ಕಾರಣ ಚಲನಚಿತ್ರೋತ್ಸವ ಇಲ್ಲದೇ ಸಿನಿಮಾ ಪ್ರಿಯರಿಗೆ ನಿರಾಸೆಯಾಗಿತ್ತು. ಈ ಬಾರಿ ಅದ್ಧೂರಿಯಾಗಿ ನಾಡಹಬ್ಬ ಆಚರಿಸುತ್ತಿರುವುದರಿಂದ ಅತೀ ಹೆಚ್ಚು 112 ಚಿತ್ರಗಳನ್ನು ಪ್ರದರ್ಶಿಸಲು ನಿರ್ಧರಿಸಲಾಗಿದೆ ಎಂದು ಹರೀಶ್ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆ ಸುಕ್ಷೇಮ; ಡಿಸಿಎಫ್ ಡಾ.ವಿ.ಕರಿಕಾಳನ್





ಮೈಸೂರು,ಸೆ.1(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲಿ ಬಂದು, ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಎಲ್ಲಾ 9 ಆನೆಗಳು ಆರೋಗ್ಯವಾಗಿವೆ. ಮೂರನೇ ಹಂತದ ತಾಲೀಮಿನಲ್ಲೂ ಅವುಗಳ ಸುಕ್ಷೇಮ ಹಾಗೂ ಸಾಮರ್ಥ್ಯ ಸಾಬೀತಾಗಿದೆ ಎಂದು ಡಿಸಿಎಫ್ ಡಾ.ವಿ.ಕರಿಕಾಳನ್ ತಿಳಿಸಿದ್ದಾರೆ.

ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ದಸರಾ ಗಜಪಡೆಗೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಮೊದಲ ತಂಡದಲ್ಲಿ ಬಂದ 9 ಆನೆಗಳಲ್ಲಿ ಅರ್ಜುನ ಹೊರತುಪಡಿಸಿ, ಉಳಿದ 5 ಗಂಡಾನೆಗೂ ಭಾರ ಹೊರಿಸುವ ತರಬೇತಿ ನೀಡಲಾಗಿದೆ. ಅದರಲ್ಲೂ ಹೊಸ ಆನೆಗಳಾದ ಮಹೇಂದ್ರ, ಭೀಮಾನಿಗೂ ತಾಲೀಮು ನಡೆಸಲಾಗಿದೆ. ಮೂರನೇ ಸುತ್ತಿನ ತಾಲೀಮಿನಲ್ಲಿ ಅಭಿಮನ್ಯು 750 ಕೆ.ಜಿಯ ಮರಳಿನ ಮೂಟೆ, ಗಾದಿ, ನಮ್ದಾ ಒಳಗೊಂಡಂತೆ ಒಟ್ಟು 1150 ಕೆಜಿಯ ಭಾರವನ್ನು ಹೊತ್ತು ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನಕ್ಕೆ 5 ಕಿ.ಮಿ ಅಂತರ 1.15 ಗಂಟೆಯಲ್ಲಿ ತಲುಪಿದ್ದಾನೆ. ಅಭಿಮನ್ಯು ಎಲ್ಲಿಯೂ ಎದೆಗುಂದಿಲ್ಲ. ಯಶಸ್ವಿಯಾಗಿ ತಾಲೀಮಿನಲ್ಲಿ ಪಾಲ್ಗೊಂಡಿದ್ದಾನೆ. ಈಗಾಗಲೇ ಪೌಷ್ಟಿಕ ಆಹಾರ ನೀಡುತ್ತಿರುವುದರಿಂದ ಅಭಿಮನ್ಯುವೂ ಸೇರಿದಂತೆ ಎಲ್ಲಾ ಆನೆಗಳ ದೇಹಸ್ಥಿತಿ ಚೇತರಿಕೆ ಕಂಡಿದೆ ಎಂದರು.

ಸೆ.5ರಿಂದ ಮರದ ಅಂಬಾರಿ ತಾಲೀಮು: ಮೂರನೇ ಹಂತದ ಭಾರ ಹೊರುವ ತಾಲೀಮು ಸೆ.4ರಂದು ಪೂರ್ಣಗೊಳ್ಳಲಿದ್ದು, ಸೆ.5ರಿಂದ 5ನೇ ಹಂತದ ತಾಲೀಮಿನಲ್ಲಿ ಮರದ ಅಂಬಾರಿ ಹೊರಿಸಲಾಗುವುದು. ಮೊದಲ ತಂಡದ ಅಭಿಮನ್ಯು, ಗೋಪಾಲಸ್ವಾಮಿ, ಧನಂಜಯ, ಭೀಮಾ ಹಾಗೂ ಮಹೇಂದ್ರನಿಗೆ ಮರದ ಅಂಬಾರಿ ತಾಲೀಮು ನಡೆಯಲಿದೆ.

ಸೆ.7ರಂದು ಗಜಪಡೆ ಎರಡನೇ ತಂಡ ಆಗಮನ: ಸೆ.7ರಂದು ಗಜಪಡೆ 2ನೇ ತಂಡ 5 ಆನೆಗಳನ್ನು ಕರೆತರಲಾಗುತ್ತಿದೆ. ದುಬಾರೆ ಕ್ಯಾಂಪ್‌ನಿಂದ ಗೋಪಿ(41), ಶ್ರೀರಾಮ(40) ವಿಜಯ(63) ಮತ್ತು ರಾಂಪುರ ಕ್ಯಾಂಪ್‌ನಿಂದ ಪಾರ್ಥಸಾರಥಿ(18), ಕುಂತಿ(36) ಬರಲಿವೆ ಎಂದು ತಿಳಿಸಿದರು.

ಸೆ.8ರಂದು ತೂಕ: ಸೆ.8ರಂದು ಮೊದಲ ತಂಡದ ಸೇರಿದಂತೆ ಎಲ್ಲಾ 14 ಆನೆಗಳಿಗೂ ತೂಕ ಹಾಕಿಸಲಾಗುತ್ತದೆ. ಮೊದಲ ತಂಡ ಅರಮನೆಗೆ ಬಂದು 25 ದಿನ ಕಳೆದಿದೆ. ಈ ವೇಳೆ ಪೌಷ್ಟಿಕ ಆಹಾರ ನೀಡಿರುವುದರಿಂದ ಒಂದೊಂದು ಆನೆಯೂ ಈಗ 200 ಕೆಜಿಯಷ್ಟು ತೂಕ ಹೆಚ್ಚಿಸಿಕೊಂಡಿವೆ. ಸೆ.8ರಿಂದ ಎಲ್ಲಾ 14 ಆನೆಗಳು ತಾಲೀಮಿನಲ್ಲಿ ಪಾಲ್ಗೊಳ್ಳಲಿವೆ. ಜಂಬೂ ಸವಾರಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತಾಲೀಮಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದರು.

ಕಾವೇರಿ ಸಂಸ್ಥೆಗಳು–ಅಯೋಧ್ಯೆ ಅವಧ್ ವಿವಿ ನಡುವೆ ಶೈಕ್ಷಣಿಕ ಒಡಂಬಡಿಕೆ



ಮೈಸೂರು, ಸೆ.2(ಎಸ್‌ಬಿಡಿ)– ಮೈಸೂರಿನ ಕಾವೇರಿ ಸಮೂಹ ಸಂಸ್ಥೆಗಳು ಹಾಗೂ ಉತ್ತರ ಪ್ರದೇಶದ ಅಯೋಧ್ಯೆಯ ಡಾ.ರಾಮ್‌ಮನೋಹರ್ ಲೋಹಿಯಾ ಅವಧ್ ವಿಶ್ವವಿದ್ಯಾನಿಲಯದ ನಡುವೆ ಶೈಕ್ಷಣಿಕ ಹಾಗೂ ವಾಣಿಜ್ಯೋದ್ಯಮ ಅಭಿವೃದ್ಧಿ ಒಪ್ಪಂದ(ಎಂಓಯು) ಮಾಡಿಕೊಳ್ಳಲಾಗಿದೆ.

ಡಾ.ರಾಮ್‌ಮನೋಹರ್ ಲೋಹಿಯಾ ಅವಧ್ ವಿವಿಯ ರಿಜಿಸ್ಟ್ರಾರ್ ಪ್ರೊ.ಉಮಾನಾಥ್ ಮತ್ತು ಕಾವೇರಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಅವರ ಪರವಾಗಿ ಫಾರ್ಮಾಸ್ಯೂಟಿಕಲ್ ಕೆಮಿಸ್ಟ್ರಿ ವಿಭಾಗದ ಪ್ರಾಧ್ಯಾಪಕ ಪ್ರೊ.ಆರ್.ರವೀಂದ್ರ ಒಪ್ಪಂದಕ್ಕೆ ಸಹಿ ಹಾಕಿದರು.

ಉದ್ಯಮ, ಸಂವಹನ, ವಾಣಿಜ್ಯೋದ್ಯಮ, ಕೌಶಲ್ಯ ಅಭಿವೃದ್ಧಿ, ಫಲಿತಾಂಶ ಆಧಾರಿತ ತರಬೇತಿ, ಉದ್ಯೋಗ ಇನ್ನಿತರ ಅಂಶಗಳಿಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಜೀವ ವಿಜ್ಞಾನ ಮತ್ತು ಫಾರ್ಮಸಿ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬಗ್ಗೆ ಆಸಕ್ತಿ ಹೆಚ್ಚಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತದೆ. ಸ್ವಯಂ ಉದ್ಯೋಗಾವಕಾಶ ಸೃಷ್ಟಿಸಿಕೊಳ್ಳುವ ಸಂಬಂಧ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಜೊತೆಗೆ ನವೋದ್ಯಮ (ಸ್ಟಾರ್ಟ್‌ಅಪ್)ಕ್ಕೆ ಮುಂದಾಗುವ ವಿದ್ಯಾರ್ಥಿಗಳಿಗೆ ಸಹಾಯದ ಮೂಲಕ ಉತ್ತೇಜನ ನೀಡಲಾಗುತ್ತದೆ.

ಉದ್ಯಮ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳ ನಡುವೆ ಉತ್ತಮ ಸಂವಹನ ಸೃಷ್ಟಿಸುವುದು, ಅಗತ್ಯ ತರಬೇತಿ ಕಲ್ಪಿಸುವುದು, ಸೂಕ್ತ ರೀತಿಯಲ್ಲಿ ವಿದ್ಯಾರ್ಥಿಗಳನ್ನು ನಿಯೋಜಿಸುವುದು, ಸುಧಾರಿತ ಹಾಗೂ ಅತ್ಯಾಧುನಿಕ ಉಪಕರಣಗಳ ಬಳಕೆ, ವಿವಿಧ ಔಷಧಗಳ ಪರೀಕ್ಷೆ ಸೇರಿದಂತೆ ಹಲವು ಮಹತ್ವದ ವಿಚಾರಗಳು ಒಪ್ಪಂದದಲ್ಲಿ ದಾಖಲಾಗಿವೆ. ಕಾವೇರಿ ಸಮೂಹ ಸಂಸ್ಥೆಗಳು ಹಾಗೂ ಡಾ.ರಾಮ್‌ಮನೋಹರ್ ಲೋಹಿಯಾ ವಿವಿ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗೆ ಸನ್ನದ್ಧವಾಗಿವೆ.



ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹುಟ್ಟುಹಬ್ಬದ ಪ್ರಯುಕ್ತ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಶ್ರೀಮತಿ ಪುಟ್ಟೀರಮ್ಮ ಕಿವುಡ ಹೆಣ್ಣು ಮಕ್ಕಳ ವಸತಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಮಕ್ಕಳಿಗೆ ಸಮವಸ್ತ್ರ ಬಯನಾರದ ಸರ್ಕಾರಿ ಶಾಲೆ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು ಇನ್ನಿತರ ಪರಿಕರಗಳನ್ನು ವಿತರಿಸಲಾಯಿತು. ಬಳಗದ ಸದಸ್ಯರಾದ ಎಂ.ಮೋಹನ್ ಗೌಡ, ಎಸ್.ವಿ. ಮಲ್ಲಿಕಾರ್ಜುನ, ಆರ್.ರಮೇಶ್, ರಾಕೇಶ್ ಗೌಡ, ಚಂದ್ರಶೇಖರ್, ಹರೀಶ್, ಕುಮಾರ್, ಗುರು, ಕೌಶಿಕ್, ರವಿ, ಭರತ್ ಮತ್ತಿತರರಿದ್ದರು.

ಭೂಗಳ್ಳರಿಗೆ ನಾನು ನೆರವಾಗಿರುವ ದಾಖಲೆ ಬಿಡುಗಡೆ ಮಾಡಿದರೆ ರಾಜಕೀಯ ನಿವೃತ್ತಿ

● ಸಿಎಂ ಬೊಮ್ಮಾಯಿಗೆ ಮಾಜಿ ಸಿಎಂ ಕುಮಾರಸ್ವಾಮಿ ಸವಾಲು ● ನನ್ನ ಬಗ್ಗೆ ಮಾತನಾಡುವಾಗ ಎಚ್ಚರ ಇರಲಿ...

ಬೆಂಗಳೂರು, ಸೆ.2(ಕೆಎಂಶಿ)– ಭೂಗಳ್ಳರಿಗೆ ನನ್ನಿಂದ ಸಹಾಯವಾಗಿದೆ ಎಂದು ತೋರಿಸಿದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸವಾಲು ಹಾಕಿದ್ದಾರೆ.

ಮುಂಬರುವ ಚುನಾವಣೆ ಹಾಗೂ ಜೆಡಿಎಸ್‌ನ ಪಂಚರತ್ನ ರಥಯಾತ್ರೆ ಕಾರ್ಯಕ್ರಮದ ಕುರಿತು ಚರ್ಚಿಸಲು ಇಂದು ಪಕ್ಷದ ಕಚೇರಿ ಜೆಪಿ ಭವನದಲ್ಲಿ ಕರೆದಿದ್ದ ಸಭೆ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಬಗ್ಗೆ ಮುಖ್ಯಮಂತ್ರಿ ಏನು ಬೇಕಾದರೂ ಮಾತನಾಡಲಿ, ನನ್ನ ಬಗ್ಗೆ ಮಾತನಾಡುವಾಗ ನೋಡಿಕೊಂಡು ಮಾತನಾಡಲಿ ಎಂದು ಗರಂ ಆದರು. ಫೆರಿಫೆರಲ್ ರಿಂಗ್ ರೋಡ್‌ಗೆ 6 ಸಾವಿರ ಕೋಟಿ ರೂ. ಯೋಜನೆ ರೂಪಿಸಿದ್ದೆ. ಇಂದು 22 ಸಾವಿರ ಕೋಟಿ ರೂ. ಆಗಿದೆ ಇದು ಕಾಂಗ್ರೆಸ್, ಬಿಜೆಪಿಯ ಸಾಧನೆ ಎಂದು ವಾಗ್ದಾಳಿ ನಡೆಸಿದರು. ರಾಜಕಾಲುವೆ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಬಿಡುಗಡೆ ಮಾಡಿದ್ದೇನೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ.



ಹಾಗಾದರೆ ಆ ಹಣ ಯಾರ ಮನೆಗೆ ಹೋಯಿತು ಎಂದು ಪ್ರಶ್ನಿಸಿದರು. ಬಿಬಿಎಂಪಿಯು ಬಿಜೆಪಿ ಕೈಯ್ಯಲ್ಲಿ ಇತ್ತು. ಏನು ಮಾಡಿದರು? ಬೆಂಕಿ ಇಟ್ಟಿದ್ದೆ ಅವರ ಸಾಧನೆ. ನನ್ನ ಎರಡು ಅವಧಿಯಲ್ಲಿ ಅಕ್ರಮಕ್ಕೆ ಪೋಷಣೆ ಮಾಡಿರುವ ದಾಖಲಾತಿ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

ಸರ್ಕಾರಿ ಜಮೀನು ಲೂಟಿ ಹೊಡೆಯುವ ಬಗ್ಗೆ ಸದನ ಸಮಿತಿ ಮಾಡಿದ್ದೆ. ಯಾರ ಕಾಲದಲ್ಲಿ ಏನಾಗಿದೆಯೆಂದು ಮುಖ್ಯಮಂತ್ರಿಗಳು ಶ್ವೇತ ಪತ್ರ ಹೊರಡಿಸಲಿ ಎಂದು ಒತ್ತಾಯಿಸಿದರು. ಈಗೇನೋ ಕೆಂಪೇಗೌಡ ಏರ್‌ಪೋರ್ಟ್‌ನಲ್ಲಿ ಮಣ್ಣು ಸಂಗ್ರಹ ಮಾಡಿ ಥೀಮ್ ಪಾರ್ಕ್ ಮಾಡುತ್ತೇನೆ ಅಂತಿದ್ದಾರೆ. ಅಮರಾವತಿ ಕಟ್ಟಲು ಮಣ್ಣು ತಂದರು ಮೋದಿ. ಏನು ಆಯ್ತು? ಈಗ ರಾಜ್ಯದಲ್ಲಿ ಮಣ್ಣಿನ ಸಂಗ್ರಹ ಅಂತೆ. ಮೊದಲು ಮಳೆಯಿಂದ ಆಗಿರುವ ಸಮಸ್ಯೆ ಗೀಡಾಗಿರುವ ಜನರಿಗೆ, ರೈತರಿಗೆ ಅನುಕೂಲ ಮಾಡಿಕೊಡ್ರಪ್ಪ ಎಂದು ವ್ಯಂಗ್ಯವಾಡಿದ ಹೆಚ್‌ಡಿಕೆ, ಇವರದ್ದೆಲ್ಲ ಕೇವಲ ಪ್ರಚಾರ ಅಷ್ಟೆ, ಕಳೆದ ಬಾರಿ ಮುಖ್ಯಮಂತ್ರಿ ಪ್ರದಕ್ಷಿಣೆ ಹಾಕಿದ್ದರು. ಸಮಸ್ಯೆ ಪರಿಹಾರ ಆಗಿಲ್ಲ. ಇದಕ್ಕಿಂತ ಉದಾಹರಣೆ ಬೇಕಾ ಎಂದು ಮುಖ್ಯಮಂತ್ರಿ ವಿರುದ್ದ ಕುಮಾರಸ್ವಾಮಿ ಕಿಡಿಕಾರಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಒಂದನೇ ಪುಟದಿಂದ

ಮೋದಿ ಅತೃಪ್ತಿ

ಇದರಿಂದ ಸರ್ಕಾರಕ್ಕೆ ಒಳ್ಳೆ ಹೆಸರು ಬರಲಿದೆ. ಚುನಾವಣೆಗೆ ಮುನ್ನ ನೀವು ಹಾಗೂ ಕೇಂದ್ರ ಗೃಹ ಸಚಿವರು ರಾಜ್ಯಕ್ಕೆ ಹೆಚ್ಚು ಸಮಯ ಕೊಡಬೇಕು ಎಂದು ಕೋರಿದ್ದಾರೆ.

ಪ್ರಾತ್ಯಕ್ಷತೆ ವೀಕ್ಷಿಸಿದ ನಂತರ ಮಾತನಾಡಿದ ಪ್ರಧಾನಿ, ಪಕ್ಷ ಹಾಗೂ ಸರ್ಕಾರ ಮಾಡಿಕೊಂಡಿರುವ ಪೂರ್ವ ತಯಾರಿ ವಾಸ್ತವಿಕ ನೆಲೆಗಟ್ಟಿನಲ್ಲಿ ಇಲ್ಲ. ಚುನಾವಣೆಯ ಬಗ್ಗೆ ಪಕ್ಷ ಮತ್ತು ಸರ್ಕಾರದಲ್ಲಿ ಅತಿಯಾದ ಆತ್ಮ ವಿಶ್ವಾಸವಿದೆ. ಆದರೆ, ನಮ್ಮ ಬಳಿ ಇರುವ ಮಾಹಿತಿ ಪ್ರಕಾರ ವಾಸ್ತವ ಸಂಗತಿ ಬೇರೆ ಇದೆ. ಕೇಂದ್ರ ನಾಯಕರು ಕಾಲಕಾಲಕ್ಕೆ ನೀಡಿರುವ ಸಲಹೆ ಹಾಗೂ ನಿರ್ದೇಶನಗಳನ್ನು ಸರಿಯಾಗಿ ಪಾಲಿಸುತ್ತಿಲ್ಲ. ಇನ್ನಾದರೂ ಎಚ್ಚೆತ್ತುಕೊಂಡು ವಾಸ್ತವ ಸ್ಥಿತಿಯ ಆಧಾರದ ಮೇಲೆ ತಯಾರಿ ನಡೆಸಿ. ನಾವು ನಿಮಗೆ ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧ ಎಂದು ಹೇಳಿದ್ದಾರೆ.

ರಾಜ್ಯದ ಪ್ರತಿ ಬೂತಿಗೆ ಕನಿಷ್ಠ 20 ಬಿಜೆಪಿ ಕಾರ್ಯಕರ್ತರನ್ನು ಗುರುತಿಸುವ ಕಾರ್ಯ ಪೂರ್ಣಗೊಂಡಿದೆಯೇ? ಮುಂಬರುವ ವಿಧಾನಸಭಾ ಚುನಾವಣೆಗೆ ಏನೇನು ಸಿದ್ದತೆ ಮಾಡಿಕೊಂಡಿದ್ದೀರಿ ಎಂದು ಪ್ರಶ್ನಿಸಿದ್ದಾರೆ. ಚುನಾವಣೆಯ ಜೊತೆಗೆ ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆಯೇ? ಸ್ಪಂದಿಸಿದ್ದರೆ, ಅಪಸ್ವರಗಳು ಏಕೆ ಕೇಳಿ ಬಂದಿವೆ ಎಂದಿದ್ದಾರೆ. ರಾಜಕೀಯ ವ್ಯಕ್ತಿಗಳು ಮಾಡುವ ಆರೋಪಗಳನ್ನು ರಾಜಕೀಯವಾಗಿ ಎದುರಿಸಿ, ಆದರೆ ಸಾರ್ವಜನಿಕರು, ಉದ್ಯಮಿದಾರರು ಎತ್ತುವ ಪ್ರಶ್ನೆಗಳಿಗೆ ಉತ್ತರ ಒದಗಿಸಿ, ಪರಿಹಾರ ಕಂಡು ಹಿಡಿಯುವುದು ನಮ್ಮ ಕರ್ತವ್ಯ ಎಂದು ಕಿವಿಮಾತು ಹೇಳಿದ್ದಾರೆ. ರಾಜ್ಯ ವಿಧಾನಸಭೆ ಚುನಾವಣೆ ಸಮೀಪವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅಪಸ್ವರಗಳಿಗೆ ಎಡೆಮಾಡಿಕೊಡಬೇಡಿ, ಒಂದು ಭಾಗದಲ್ಲಿ ಅಭಿವೃದ್ಧಿ ಕೆಲಸವಾದರೆ, ಮತ್ತೊಂದು ಭಾಗದಲ್ಲಿ ಸಂಘಟನೆ ಬಲಿಷ್ಠಗೊಳ್ಳಬೇಕು. ಮುಖಂಡರುಗಳು ಪ್ರತಿಪಕ್ಷಗಳನ್ನು ಎದುರಿಸಿ, ಸಾರ್ವಜನಿಕರಲ್ಲಿ ಪಕ್ಷದ ಬಗ್ಗೆ ಒಲವು ಮೂಡಿಸುವ ಕೆಲಸ ನಡೆಯಲಿ. ಚುನಾವಣೆ ಸಮಯದಲ್ಲಿ ಕೈಕಟ್ಟಿ ಕುಳಿತುಕೊಳ್ಳುವುದಲ್ಲ. ಮುಖಂಡರು ಮತ್ತು ಕಾರ್ಯಕರ್ತರು, ಮನೆ ಬಾಗಿಲಿಗೆ ತೆರಳಿ, ಜನರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ತಿಳಿಸುವ ಕೆಲಸ ನಡೆಯಬೇಕು. ಕಾರ್ಯಕರ್ತರ ಹುರಿದುಂಬಿಸುವ ಬೃಹತ್ ಸಮಾವೇಶ, ರ‍್ಯಾಲಿಗಳು ಮತ್ತು ರೋಡ್‌ಶೋಗಳನ್ನು ನಡೆಸಿ. ಎಲ್ಲ ಸಮಾಜದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಅಷ್ಟೇ ಅಲ್ಲ ಎಲ್ಲ ವರ್ಗದ ಜನರು ಮತ್ತು ರೈತರನ್ನು ಪಕ್ಷದತ್ತ ಸೆಳೆಯಲು ಕಾರ್ಯಕ್ರಮ ರೂಪಿಸಿ. ನಮ್ಮಿಂದ ನಿಮಗೆ ಏನು ಆಗಬೇಕು, ಅದರ ಪಟ್ಟಿ ಮಾಡಿ ನಮಗೆ ಕಳುಹಿಸಿ, ಕಾನೂನಾತ್ಮಕವಾಗಿದ್ದರೆ, ಅವುಗಳಿಗೆ ತಕ್ಷಣವೇ ಹಸಿರು ನಿಶಾನೆ ನೀಡಲಾಗುವುದು. ವಿಳಂಬ ಮಾಡಬೇಡಿ, ಪ್ರತಿಪಕ್ಷದವರು ಒಂದು ಕೈ ಮೇಲಿದ್ದಾರೆ ಎಂದು ನಾವು ಕುಸಿಯುವುದು ಬೇಡ, ನಮ್ಮ ಬಲಿಷ್ಠತೆಯನ್ನು ತೋರಿಸಲು ಸಿದ್ಧರಾಗಿ ಎಂದು ರಾಜ್ಯ ನಾಯಕರನ್ನು ಹುರಿದುಂಬಿಸಿದ್ದಾರೆ. ಸಭೆಯಲ್ಲಿ ಯಡಿಯೂರಪ್ಪನವರಿಗೆ ಹೆಚ್ಚು ಒತ್ತು ನೀಡಿದ ಪ್ರಧಾನಿಯವರು ಇತರೆ ನಾಯಕರಿಗೆ ಪರೋಕ್ಷವಾಗಿ ಚಾಟಿ ಬೀಸಿದ್ದಾರೆ. ಚುನಾವಣೆಗಾಗಿ ಪಕ್ಷ ಮತ್ತು ಸರ್ಕಾರದಲ್ಲಿ ಬದಲಾವಣೆ ತರಬೇಕೇ ಎಂಬ ಬಗ್ಗೆಯು ರಾಜ್ಯ ನಾಯಕರಿಂದ ಪ್ರಧಾನಿಯವರು ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ. ಪ್ರಧಾನಿಯವರು ಕರೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ್ ಶೆಟ್ಟರ್, ಸಚಿವರಾದ ಆರ್. ಅಶೋಕ್, ಅಶ್ವತ್ಥ್‌ನಾರಾಯಣ್, ಗೋವಿಂದ ಕಾರಜೋಳ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭಾಗವಹಿಸಿದ್ದರು

ರಾಜ್ಯಕ್ಕೆ ಡಬಲ್ ಇಂಜಿನ್ ಧಮಾಕ

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರಾಣಿ ಅಬ್ಬಕ್ಕ ಮತ್ತು ರಾಣಿ ಚೆನ್ನಭೈರಾದೇವಿ ಅವರು ನಮಗೆ ಸ್ಫೂರ್ತಿಯಾಗಿದ್ದಾರೆ ಎಂದು ಪ್ರಧಾನಿ ಹೇಳಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾತನಾಡಿ, ಡಬಲ್ ಇಂಜಿನ್ ಸರ್ಕಾರದಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿಯ ಹೊಸ ಶಕೆ ಆರಂಭವಾಗಿದೆ.

ನವ ಮಂಗಳೂರು ಬಂದರು ಪ್ರಾಧಿಕಾರದಲ್ಲಿ 3800 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾರ್ಯಗಳಿಗೆ ಪ್ರಧಾನಿ ಅವರು ಚಾಲನೆ ನೀಡಿದ್ದು, ಈ ಮೂಲಕ ಕರಾವಳಿಯ ಅಭಿವೃದ್ಧಿಗೆ ವೇಗ ದೊರಕಲಿದೆ. ಬಂದರಿನ ವಹಿವಾಟು ಸಾಮರ್ಥ್ಯ ನಾಲ್ಕು ಪಟ್ಟು ಹೆಚ್ಚಾಗಲಿದ್ದು, ದೇಶದ ಆರ್ಥಿಕತೆಗೆ ಬಲ ತುಂಬಲಿದೆ. ಇದರಿಂದ ಮುಂದಿನ ದಿನಗಳಲ್ಲಿ ಕರಾವಳಿ ಮಾತ್ರವಲ್ಲದೆ, ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ. ನವಭಾರತದ ನಿರ್ಮಾಣದಲ್ಲಿ ನಮ್ಮ ಕರ್ನಾಟಕ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದ್ದಾರೆ. ರಾಜ್ಯದ ಸಿಆರ್‌ಜೆಡ್ ಮಾಸ್ಟರ್ ಪ್ಲಾನ್‌ಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ಕಳೆದ 30ವರ್ಷಗಳ ಹೋರಾಟಕ್ಕೆ ಇದೀಗ ಫಲ ದೊರಕಿದೆ. ಇದರಿಂದ ಕರಾವಳಿಯ ಆರ್ಥಿಕ ಚಟುವಟಿಕೆಗಳು ಗರಿಗೆದರಲಿವೆ. ಸಾಗರ ಮಾಲಾ ಯೋಜನೆ ಯಡಿ ಕಾರವಾರ ಬಂದರಿನಲ್ಲಿ 276 ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ.

ಪೊಲೀಸರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ: ಸಿಎಂ

ಬಾಲಕಿಯರ ಮೇಲಿನ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಮಾತನಾಡುವುದು ಸರಿಯಲ್ಲ ಎಂದರು. ಮುರುಘಾ ಮಠದ ಸ್ವಾಮೀಜಿಗಳ ಬಂಧನ ವಿಳಂಬಕ್ಕೆ ಜನರಿಂದ ಅಸಮಾಧಾನ ವ್ಯಕ್ತವಾಗಿರುವ ವಿಚಾರದಲ್ಲಿ ಪ್ರತಿಕ್ರಿಯಿಸಿ, ಎಲ್ಲಾ ಮಾತುಗಳಿಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಕಾನೂನು ಪ್ರಕಾರ ಎಲ್ಲಾ ನಡೆಯುತ್ತದೆ. ಈ ವಿಷಯದಲ್ಲಿ ಪೊಲೀಸರಿಗೆ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಅವರ ಕೆಲಸ ಮಾಡುತ್ತಿದ್ದಾರೆ. ಯಾವುದೇ ವ್ಯಾಖ್ಯಾನ ಮಾಡುವ ಅವಶ್ಯಕತೆ ಇಲ್ಲ ಎಂದರು.

ಎರಡನೇ ಆರೋಪಿ ರಶ್ಮಿ ಬಂಧನ

ಪಡೆಯಲಾಗಿದೆ. 2ನೇ ಆರೋಪಿ ವಾರ್ಡನ್ ರಶ್ಮಿ ಅವರನ್ನು ಇಂದು ಬಂಧಿಸಲಾಗಿದೆ. ಉಳಿದ ಆರೋಪಿಗಳ ಬಂಧನಕ್ಕೂ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಎಸ್ಪಿ ಪರಶುರಾಂ ಸುದ್ದಿಗಾರರಿಗೆ ತಿಳಿಸಿದರು. ವಾರ್ಡನ್ ರಶ್ಮಿ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ನ್ಯಾಯಾಧೀಶರು ಆದೇಶ ನೀಡಿದ್ದಾರೆ. ಚಿತ್ರದುರ್ಗ ಕೇಂದ್ರ ಕಾರಾಗೃಹದಲ್ಲಿ ಮಹಿಳಾ ಸೆಲ್ ಇಲ್ಲದ ಕಾರಣ ಅವರನ್ನು ಶಿವಮೊಗ್ಗ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.

ಮೂರು ದಿನ ಪೊಲೀಸ್ ಕಸ್ಟಡಿಗೆ

ಪ್ರಕ್ರಿಯೆಗಳೆಲ್ಲಾ ಮುಗಿದ ನಂತರ ಇಂದು ನಸುಕಿನ ಜಾವ 2.25ರ ಸುಮಾರಿನಲ್ಲಿ ನ್ಯಾಯಾಧೀಶರಾದ ಕೋಮಲ ಅವರ ನಿವಾಸದಲ್ಲಿ ಹಾಜರುಪಡಿಸಲಾಗಿತ್ತು. ಈ ವೇಳೆ ಶ್ರೀಗಳ ಪರ ವಕೀಲರು ಜಾಮೀನು ಅರ್ಜಿ ಸಲ್ಲಿಸಲು ಮುಂದಾದರಾದರೂ, ಅದನ್ನು ಸ್ವೀಕರಿಸಲು ನಿರಾಕರಿಸಿದ ನ್ಯಾಯಾಧೀಶರು, ಬೆಳಗ್ಗೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವಂತೆ ಸೂಚಿಸುವುದರ ಜೊತೆಗೆ ಶ್ರೀಗಳನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ, ಆದೇಶ ನೀಡುವುದರ ಜೊತೆಗೆ ಬೆಳಗ್ಗೆ ನ್ಯಾಯಾಲಯದಲ್ಲಿ ಆರೋಪಿಯನ್ನು ಹಾಜರುಪಡಿಸಬೇಕು ಎಂದು ಆದೇಶಿಸಿದ್ದರು. ಇಂದು ಮುಂಜಾನೆಯೇ ಚಿತ್ರದುರ್ಗ ಕೇಂದ್ರ ಕಾರಾಗೃಹಕ್ಕೆ ಮುರುಘಾ ಶ್ರೀಗಳನ್ನು ಕರೆದೊಯ್ಯಲಾಯಿತು. ಕಾರಾಗೃಹದ ಅಧಿಕಾರಿಗಳು ಅವರಿಗೆ ವಿಚಾರಣಾಧೀನ ಬಂಧಿ ಸಂಖ್ಯೆ 2261 ಅನ್ನು ನೀಡಿದ್ದರು. ಅಲ್ಲದೇ ಅವರಿಗೆ ಪ್ರತ್ಯೇಕ ಕೋಣೆಯನ್ನು ಕಲ್ಪಿಸಿದ್ದರು. ರಾತ್ರಿಯಿಡೀ ನಿದ್ದೆಯಿಲ್ಲದೇ ನರಳಾಡಿದರು. ಶ್ರೀಗಳು ಬೆಳಗ್ಗೆ ಜೈಲಿನಲ್ಲಿ ಉಪಹಾರ ಸೇವಿಸಲು ನಿರಾಕರಿಸಿ ಹಾಲು ಮಾತ್ರ ಕುಡಿದರು ಎಂದು ಮೂಲಗಳು ತಿಳಿಸಿವೆ.

ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಮುರುಘಾ ಶ್ರೀಗಳಿಗೆ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆಸ್ಪತ್ರೆಯ ಡಿಹೆಚ್‌ಓ ಡಾ. ರಂಗನಾಥ್, ಸರ್ಜನ್ ಡಾ. ಬಸವರಾಜ್ ಅಲ್ಲದೇ ದಾವಣಗೆರೆಯ ಕಾರ್ಡಿಯಾಲಜಿಸ್ಟ್ ಡಾ. ಮಲ್ಲೇಶ್, ಡಾ. ಶ್ರೀನಿವಾಸ್ ತಂಡ ಮುರುಘಾ ಶ್ರೀಗಳ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ನೀಡಿದರು. ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಜಿಲ್ಲಾ ಸರ್ಜನ್ ಡಾ.ಬಸವರಾಜ್ ಅವರು ಮುರುಘಾ ಶ್ರೀಗಳಿಗೆ ಹೃದಯಾಘಾತವಾಗಿರುವುದರಿಂದ ಅವರನ್ನು ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಕರೆದೊಯ್ಯಲಾಗುವುದು ಎಂದು ಹೇಳಿದರೆ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ರಂಗನಾಥ್ ಅವರು, ಶರಣರಿಗೆ 60 ವರ್ಷ ವಯಸ್ಸಾಗಿದ್ದು, ಹೃದಯ ತುಂಬಾ ಸೂಕ್ಷ್ಮವಾಗಿದೆ. ವಯಸ್ಸಾದ ನಂತರ ಇಂತಹ ಸಮಸ್ಯೆ ಬರುವುದು ಸಹಜ. ತಜ್ಞ ವೈದ್ಯರು ಸೆಕೆಂಡ್ ಒಪೀನಿಯನ್ ನೀಡಿದ ಬಳಿಕ ಅವರನ್ನು ಬೆಂಗಳೂರಿಗೆ ವರ್ಗಾಯಿಸಲು ತೀರ್ಮಾನಿಸಲಾಗಿದೆ ಎಂದಿದ್ದರು.

ಇತ್ತ ಆರೋಪಿ ಇಲ್ಲದೇ ನ್ಯಾಯಾಲಯಕ್ಕೆ ಹಾಜರಾದ ಪೊಲೀಸರನ್ನು ನ್ಯಾಯಾಧೀಶೆ ಕೋಮಲ ಪ್ರಶ್ನಿಸಿದಾಗ, ಆರೋಪಿಗೆ ಆರೋಗ್ಯ ಸಮಸ್ಯೆ ಇದ್ದುದರಿಂದ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ ಎಂದು ಪೊಲೀಸರು ಉತ್ತರಿಸಿದಾಗ ಕೆರಳಿದ ನ್ಯಾಯಾಧೀಶರು, ನನ್ನ ಕಸ್ಟಡಿಯಲ್ಲಿರುವ (ನ್ಯಾಯಾಂಗ ಬಂಧನ) ಆರೋಪಿಯನ್ನು ನನಗೇ ತಿಳಿಸದೆ ಹೇಗೆ ಆಸ್ಪತ್ರೆಗೆ ದಾಖಲಿದ್ದೀರಿ? ಎಂದು ಪ್ರಶ್ನಿಸಿದರಲ್ಲದೇ, ತಕ್ಷಣವೇ ಆರೋಪಿಯನ್ನು ಹಾಜರುಪಡಿಸುವಂತೆ ತಾಕೀತು ಮಾಡಿದರು. ಮುರುಘಾ ಶರಣರನ್ನು ಆಸ್ಪತ್ರೆಯಿಂದ ಆಂಬುಲೆನ್ಸ್‌ನಲ್ಲಿ ಕರೆತಂದ ಪೊಲೀಸರು, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಈ ವೇಳೆ ಕಟಕಟೆಯಲ್ಲಿ ನಿಲ್ಲುವಂತೆ ನ್ಯಾಯಾಧೀಶರು ತಿಳಿಸಿದಾಗ ಮುರುಘಾ ಶರಣರು ಹಿಂಜರಿದರಾದರೂ, ನಂತರ ಕಟಕಟೆಯಲ್ಲಿ ಹೋಗಿ ನಿಂತರು. ಈ ವೇಳೆ ಹೆಚ್ಚಿನ ವಿಚಾರಣೆಗಾಗಿ 5 ದಿನಗಳ ಕಾಲ ತಮ್ಮ ವಶಕ್ಕೆ ನೀಡುವಂತೆ ಪೊಲೀಸರು ಅರ್ಜಿ ಸಲ್ಲಿಸಿದರು. ಆದರೆ ಮೂರು ದಿನ ಮಾತ್ರ ಪೊಲೀಸ್ ಕಸ್ಟಡಿಗೆ ಮುರುಘಾ ಶರಣರನ್ನು ನೀಡಿದ ನ್ಯಾಯಾಧೀಶರು, ಸೆ.5ರಂದು ಬೆಳಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ಆದೇಶಿಸಿದರು. ಆರೋಪಿಗೆ ಅನಾರೋಗ್ಯವಿದ್ದರೆ ಪೊಲೀಸ್ ಕಸ್ಟಡಿಯಲ್ಲೇ ಚಿಕಿತ್ಸೆ ನೀಡಬೇಕು. ಆಸ್ಪತ್ರೆಗೆ ದಾಖಲಿಸಬೇಕಾದರೆ ತಮ್ಮ ಗಮನಕ್ಕೆ ತರಬೇಕು ಎಂದು ಪೊಲೀಸರಿಗೆ ನ್ಯಾಯಾಧೀಶರು ತಾಕೀತು ಮಾಡಿದರು. ಈ ವೇಳೆ ತೀವ್ರ ದುಃಖದಿಂದ ಮುರುಘಾ ಶರಣರು ಕುಸಿದು ಬಿದ್ದರು. ನಂತರ ವ್ಹೀಲ್ ಚೇರ್‌ನಲ್ಲಿ ನ್ಯಾಯಾಲಯದಿಂದ ಮುರುಘಾ ಶರಣರನ್ನು ಕರೆತಂದ ಪೊಲೀಸರು ಆಂಬುಲೆನ್ಸ್‌ನಲ್ಲಿ ಮತ್ತೆ ಆಸ್ಪತ್ರೆಗೆ ಕರೆದೊಯ್ದು, ಆರೋಗ್ಯ ತಪಾಸಣೆ ನಡೆಸಿದ ನಂತರ ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ.

ಮುರುಘಾ ಶ್ರೀಗಳ ಬಂಧನಕ್ಕೆ ಭಕ್ತರ ಆಕ್ರೋಶ: ಪೋಕ್ಸೋ ಕಾಯ್ದೆಯಡಿ ಮುರುಘಾ ಶರಣರನ್ನು ಬಂಧಿಸಿರುವುದರ ವಿರುದ್ಧ ಅವರ ಭಕ್ತರು ಆಕ್ರೋಶ ವ್ಯಕ್ತಪಡಿಸಿ, ಮಠದ ಆಡಳಿತಾಧಿಕಾರಿ ಕೆ.ಎಸ್.ಬಸವರಾಜನ್ ವಿರುದ್ಧ ಧಿಕ್ಕಾರ ಕೂಗಿದ ಘಟನೆ ಜಿಲ್ಲಾಸ್ಪತ್ರೆಯ ಮುಂದೆ ಇಂದು ನಡೆಯಿತು. ನ್ಯಾಯಾಲಯದಿಂದ ಮುರುಘಾ ಶ್ರೀಗಳನ್ನು ಜಿಲ್ಲಾಸ್ಪತ್ರೆಗೆ ಕರೆತಂದಾಗ ಜಮಾಯಿಸಿದ್ದ ನೂರಾರು ಭಕ್ತರು ಮುರುಘಾ ಶರಣರಿಗೆ ಜಯಕಾರ ಕೂಗಿದರು. ಮುರುಘಾ ಶರಣರು ನಿರಪರಾಧಿಯಾಗಿದ್ದು, ಅವರ ವಿರುದ್ಧ ಷಡ್ಯಂತ್ರ ನಡೆಸಲಾಗಿದೆ. ಎಂದು ಕೆ.ಎಸ್.ಬಸವರಾಜನ್ ವಿರುದ್ಧ ಘೋಷಣೆ ಕೂಗಿದರು.

ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ

ನ್ಯಾಯಾಂಗ, ಸಿಬಿಐ ತನಿಖೆಗೆ ಆಗ್ರಹಿಸಿ ಮೈಸೂರಲ್ಲಿ ಪ್ರತ್ಯೇಕ ಪ್ರತಿಭಟನೆ



ಚಿತ್ರದುರ್ಗದ ಮುರುಘಾ ಮಠದ ಶ್ರೀಗಳ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವಂತೆ ರೈತ, ಕಾರ್ಮಿಕ, ಪ್ರಗತಿಪರ, ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮುರುಘಾ ಶ್ರೀಗಳ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಸೆ.2(ಎಂಟಿವೈ)– ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯದ ಹಿನ್ನೆಲೆಯಲ್ಲಿ ಬಂಧನಕ್ಕೊಳಗಾಗಿರುವ ಮುರುಘಾ ಮಠದ ಡಾ.ಶ್ರೀ ಶಿವಮೂರ್ತಿ ಸ್ವಾಮೀಜಿ ಅವರ ಪ್ರಕರಣವನ್ನು ಸಿಬಿಐ ಹಾಗೂ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿ ಮೈಸೂರಲ್ಲಿ ಎರಡು ಪ್ರತ್ಯೇಕ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಬಸವೇಶ್ವರ ಪುತ್ಥಳಿ ಮುಂಭಾಗ: ಮೈಸೂರಿನ ಗನ್‌ಹೌಸ್ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆ ಮುಂಭಾಗ ಶುಕ್ರವಾರ ರೈತ, ಕಾರ್ಮಿಕ, ಪ್ರಗತಿಪರ, ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಚಿತ್ರದುರ್ಗದ ಮುರುಘಾ ಮಠದ ಡಾ.ಶಿವಮೂರ್ತಿ ಸ್ವಾಮೀಜಿ, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ ನಾಗರಿಕ ಸಮಾಜ ತಲೆತಗ್ಗಿಸುವ ಸಂಗತಿಯಾಗಿದೆ. ಪ್ರಕರಣದ ತನಿಖೆ ವಿಷಯದಲ್ಲಿ ಪೊಲೀಸರು ಒತ್ತಡಕ್ಕೆ ಮಣಿದಿರುವಂತೆ ಕಾಣುತ್ತಿದೆ. ಪ್ರಕರಣ ದಾಖಲಾಗಿ ನಾಲ್ಕು ದಿನಗಳವರೆಗೂ ಬಂಧಿಸದೇ ಇರುವುದು ಪ್ರಭಾವಕ್ಕೆ ಮಣಿದಿರುವಂತಿದೆ. ವ್ಯಾಪಕ ಟೀಕೆ ವ್ಯಕ್ತವಾದ ಬಳಿಕ ಕಳೆದ ರಾತ್ರಿ ಶ್ರೀಗಳನ್ನು ಬಂಧಿಸಿದ್ದಾರೆ. ಆದರೆ, ಪ್ರಕರಣದ ಸತ್ಯಾಸತ್ಯತೆ ಬಹಿರಂಗಗೊಳಿಸಲು ನ್ಯಾಯಾಂಗ ತನಿಖೆಗೆ ಒಳಪಡಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಪ್ರಕರಣದ ಆರೋಪಿಗಳ ರಕ್ಷಣೆಗೆ ಸರ್ಕಾರವೇ ಪರೋಕ್ಷವಾಗಿ ಪ್ರಯತ್ನಿಸುತ್ತಿದೆ ಬಂಧನ ನಾಮಕಾವಸ್ಥೆ ಆಗಬಾರದು. ಸೂಕ್ತ ವಿಚಾರಣೆ ನಡೆಸಿ, ಸತ್ಯ ಬಯಲಿಗೆಳೆಯಬೇಕು. ಆದ್ದರಿಂದ ಸ್ಥಳೀಯ ಪೊಲೀಸರಿಂದ ತನಿಖೆ ಮಾಡಿಸದೇ, ನ್ಯಾಯಾಂಗ ತನಿಖೆಗೆ ಒಪ್ಪಿಸಿ, ಈ ಪ್ರಕರಣದಲ್ಲಿ ಯಾರೇ ಭಾಗಿಯಾಗಿದ್ದರೂ, ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಪ್ರಗತಿಪರ ಚಿಂತಕಿ ರತಿರಾವ್ ಮಾತನಾಡಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವ ವೇಳೆ ಮಕ್ಕಳಿಗೆ ತೊಂದರೆಯಾಗದಂತೆ ಕಟ್ಟೆಚ್ಚರ ವಹಿಸಬೇಕು. ಆರೋಪಿಗಳು ಯಾರೇ ಇರಲಿ, ಎಷ್ಟೇ ಪ್ರಭಾವವುಳ್ಳವರೇ ಆಗಲೀ ಅವರಿಗೆ ತಕ್ಕ ಶಿಕ್ಷೆ ಆಗಬೇಕು. ವಿದ್ಯಾರ್ಥಿನಿಯರ ನಿಲಯಗಳಿಗೆ ರಕ್ಷಣೆ ನೀಡಬೇಕು. ಆಗಾಗ ಮಕ್ಕಳಿಗೆ ಸಮಾಲೋಚನೆ ಮಾಡಬೇಕು ಎಂದು ಸಲಹೆ ನೀಡಿದರು.

> ಅನ್ನ ದಾಸೋಹ, ಅಕ್ಷರ ದಾಸೋಹಕ್ಕೆ ಪ್ರಸಿದ್ಧಿ ಪಡೆದಿರುವ ಮಠಗಳ ಪರಂಪರೆಯಲ್ಲಿ ಇದೀಗ ಲೈಂಗಿಕ ದೌರ್ಜನ್ಯದ ಪ್ರಕರಣ ವರದಿಯಾಗಿರುವುದು ತಲೆ ತಗ್ಗಿಸುವ ಸಂಗತಿ. ಸರ್ಕಾರದ ನಡೆ ಗಮನಿಸಿದರೆ, ಈ ಪ್ರಕರಣದಲ್ಲಿ ಸಂತ್ರಸ್ಥರಿಗೆ ನ್ಯಾಯ ದೊರಕುವುದು ಅನುಮಾನ ಎಂಬುದು ಭಾಸವಾಗುತ್ತಿದೆ. ಮಕ್ಕಳ ಮೇಲೆ ಪೈಶಾಚಿಕ ಕೃತ್ಯ ನಡೆದಿರುವುದು ಖಂಡನೀಯ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕ ಪ.ಮಲ್ಲೇಶ್, ಹಿರಿಯ ರಂಗಕರ್ಮಿ ಜನಾರ್ಧನ್, ಸ್ವರಾಜ್ ಇಂಡಿಯಾ ಪಕ್ಷದ ಉಗ್ರನರಸಿಂಹೇಗೌಡ, ರೈತ ಮುಖಂಡ ಮರಂಕಯ್ಯ, ಮರಿದೇವಯ್ಯ, ವಿಜಯ ಕುಮಾರ್, ಹೊಸಕೋಟೆ ಬಸವರಾಜ್, ಎಂ.ಉಮಾದೇವಿ, ಸಂಧ್ಯಾ.ಪಿ.ಎಸ್, ಚಂದ್ರಶೇಖರ್ ಮೇಟಿ, ಸೀಮಾ, ಕಾರ್ಮಿಕ ಮುಖಂಡರಾದ ಚಂದ್ರಶೇಖರ್ ಮೇಟಿ, ಜಗದೀಶ್ ಸೂರ್ಯ, ಕಲ್ಲಳ್ಳಿ ಕುಮಾರ್, ಪಂಡಿತಾರಾಧ್ಯ, ಮಹಾದೇವಮ್ಮ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಸಿಬಿಐ ತನಿಖೆಗಾಗಿ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ: ಅಪ್ರಾಪ್ತ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ, ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಚಿತ್ರದುರ್ಗ ಮುರುಘಾ ಮಠದ ಶ್ರೀಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ನಿರ್ಲಕ್ಷತನ ಎದ್ದು ಕಾಣುತ್ತಿದೆ. ಉದ್ದೇಶ ಪೂರ್ವಕವಾಗಿಯೇ ತನಿಖೆಯ ಹಾದಿ ತಪ್ಪಿಸುವ ಪ್ರಯತ್ನವೂ ನಡೆಯುತ್ತಿದೆ. ಬಿಜೆಪಿ ಸರ್ಕಾರದಿಂದ ನಿಷ್ಪಕ್ಷಪಾತ ತನಿಖೆ ನಡೆಸಲು ಸಾಧ್ಯವೇ? ಎಂಬ ಆತಂಕ ಜನರಲ್ಲಿ ಕಾಡುತ್ತಿದೆ. ಸ್ವಾಮೀಜಿ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಜರುಗಿಸಿದರೆ ಮುಂಬರುವ ಚುನಾವಣೆಗಳಲ್ಲಿ ಅಡ್ಡ ಪರಿಣಾಮ ಬೀರಬಹುದು ಎಂದು ಸರ್ಕಾರವೇ ಪ್ರಕರಣ ಮುಚ್ಚಿ ಹಾಕುವ ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿದರು.

ಅನ್ನ ದಾಸೋಹ, ಅಕ್ಷರ ದಾಸೋಹಕ್ಕೆ ಪ್ರಸಿದ್ಧಿ ಪಡೆದಿರುವ ಮಠಗಳ ಪರಂಪರೆಯಲ್ಲಿ ಇದೀಗ ಲೈಂಗಿಕ ದೌರ್ಜನ್ಯದ ಪ್ರಕರಣ ವರದಿಯಾಗಿರುವುದು ತಲೆ ತಗ್ಗಿಸುವ ಸಂಗತಿ. ಸರ್ಕಾರದ ನಡೆ ಗಮನಿಸಿದರೆ, ಈ ಪ್ರಕರಣದಲ್ಲಿ ಸಂತ್ರಸ್ಥರಿಗೆ ನ್ಯಾಯ ದೊರಕುವುದು ಅನುಮಾನ ಎಂಬುದು ಭಾಸವಾಗುತ್ತಿದೆ. ಮಕ್ಕಳ ಮೇಲೆ ಪೈಶಾಚಿಕ ಕೃತ್ಯ ನಡೆದಿರುವುದು ಖಂಡನೀಯ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಮಾಲಿನಿ, ಎಲ್‌ಐಸಿ ಸಿದ್ದಪ್ಪ ಗೋವಿಂದರಾಜು, ಪುಷ್ಪಲತಾ, ನಟರಾಜು, ಮಾದಪ್ಪ ಬಸವರಾಜು, ಜಗದೀಶ್ ಮತ್ತಿತರರು ಪಾಲ್ಗೊಂಡಿದ್ದರು.

ಹುಟ್ಟುಹಬ್ಬದ ಸಂಭ್ರಮ



ಮೈಸೂರಿನ ಖ್ಯಾತ ಉದ್ಯಮಿ ಅಶೋಕ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ತಾಯಿ ಶ್ರೀಮತಿ ಜಯಮ್ಮ ಮತ್ತು ತಂದೆ ಗೋವಿಂದೇಗೌಡ ಅವರೊಂದಿಗೆ ಓಂ ಶಕ್ತಿ ಗ್ರೂಪ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ಉದ್ಯಮಿ ಸಿ.ಪ್ರವೀಣ್ ಕುಮಾರ್, ಕಿರಣ್, ಭೈರವ, ಜಗದೀಶ್, ವಿಕಾಸ್ ಇತರರು ಉಪಸ್ಥಿತರಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಸಲು ಆಗ್ರಹಿಸಿ ಎಲ್‌ಐಸಿ ಏಜೆಂಟರ ಪ್ರತಿಭಟನೆ

ಮೈಸೂರು,ಸೆ.2(ಎಂಟಿವೈ)– ವಿಮಾ ಪಾಲಿಸಿಗಳ ಮೇಲಿನ ಲಾಭಾಂಶ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕಾಗಿ ಒತ್ತಾಯಿಸಿ ಎಲ್‌ಐಸಿ ಏಜೆಂಟರು ಒಂದು ವಾರ ಕಾಲ ಪ್ರತಿಭಟನೆಯನ್ನು ಆರಂಭಿಸಿದ್ದಾರೆ.



ಮೈಸೂರಿನ ಬನ್ನಿಮಂಟಪದಲ್ಲಿರುವ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಕಚೇರಿ ಮುಂದೆ ಸೆ.7ರವರೆಗೆ 'ರೆಸ್ಟ್ ಡೇ' ಶೀರ್ಷಿಕೆಯಡಿ ಮಧ್ಯಾಹ್ನದ ವೇಳೆ ಇಂದಿನಿಂದ ಪ್ರತಿಭಟನೆ ಆರಂಭಿಸಿದ್ದಾರೆ. ಪಾಲಿಸಿಗಳ ಮೇಲಿನ ಲಾಭಾಂಶ ಹೆಚ್ಚಿಸಬೇಕು. ಪಾಲಿಸಿ ಮೇಲಿನ ಸಾಲದ ಬಡ್ಡಿ ಪ್ರಮಾಣವನ್ನು ಕಡಿಮೆ ಮಾಡಬೇಕು. ಗ್ರಾಹಕರಿಗೆ ಸಮರ್ಥ ಹಾಗೂ ದಕ್ಷ ಸೇವೆ ನೀಡಲು ಯೋಜನೆ ರೂಪಿಸಬೇಕು. ಗ್ರಾಹಕರು ಹಿಂದಿರುಗಿ ಪಡೆಯದೇ ಇರುವ ಮೊತ್ತವನ್ನು ಗ್ರಾಹಕರ ಕಲ್ಯಾಣಕ್ಕಾಗಿ ಬಳಸಬೇಕು. ಜೀವ ವಿಮಾ ನಿಗಮದಲ್ಲಿ ಒಂದೇ ಬಾರಿ ಮಾತ್ರ ಕೆವೈಸಿ ಪಡೆದುಕೊಳ್ಳಬೇಕು. ಪ್ರತಿನಿಧಿಗಳ ಮಕ್ಕಳಿಗೆ ಶಿಕ್ಷಣ ಸಾಲ ಸೌಲಭ್ಯ ನೀಡಬೇಕು. ಗ್ರ್ಯಾಚುಟಿ ಮೊತ್ತವನ್ನು 10 ಲಕ್ಷ ರೂ.ಗೆ ಹೆಚ್ಚಳ ಮಾಡಬೇಕು. ಪ್ರತಿನಿಧಿಗಳ ಕೊಡುಗೆಯಿಂದ ಸಿಗುವ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅಖಿಲ ಭಾರತೀಯ ಜೀವ ವಿಮೆ ನಿಗಮದ ಒಕ್ಕೂಟದ ಪ್ರದಾನ ಕಾರ್ಯದರ್ಶಿ ಡಿ.ಪುಟ್ಟಸ್ವಾಮಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವು ಮಂದಿ ಏಜೆಂಟರು ಪಾಲ್ಗೊಂಡಿದ್ದರು.

ಗಣೇಶನೊಂದಿಗೆ ಸೆಲ್ಫಿ: ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು, ಸೆ2(ಆರ್‌ಕೆಬಿ)– ಗಣೇಶ ಹಬ್ಬದ ಅಂಗವಾಗಿ ಕರ್ನಾಟಕ ವಿಪ್ರ ವೇದಿಕೆ ಆನ್‌ಲೈನ್ ಮೂಲಕ ಆಯೋಜಿಸಿದ್ದ 'ಗಣೇಶನೊಂದಿಗೆ ಸೆಲ್ಫಿ' ಸ್ಪರ್ಧೆಯ ವಿಜೇತರಿಗೆ ಶುಕ್ರವಾರ ಬಹುಮಾನ ವಿತರಿಸಲಾಯಿತು. ಕುವೆಂಪುನಗರದ ನೃಪತುಂಗ ರಸ್ತೆಯ ವಿಪ್ರ ವೇದಿಕೆ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಜೇತ ಮೊದಲ ಐದು ಮಂದಿ ಸ್ಪರ್ಧಿಗಳಿಗೆ ಬಹುಮಾನ ವಿತರಿಸಲಾಯಿತು.

ಒಟ್ಟು 200 ಮಂದಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ಅದರಲ್ಲಿ ಟಿ.ಕೆ.ಲೇಔಟ್‌ನ ರಮ್ಯಾ (ಪ್ರಥಮ), ಬಂಬೂ ಬಜಾರ್‌ನ ತೃಪ್ತಿ (ದ್ವಿತೀಯ), ರಾಮಕೃಷ್ಣನಗರದ ಸುಮುಖ (ತೃತೀಯ), ಟಿ.ಕೆ.ಲೇಔಟ್‌ನ ಚೈತ್ರಾ ಚಂದ್ರಶೇಖರ್ (ಚತುರ್ಥ) ಹಾಗೂ ಕುವೆಂಪುನಗರದ ಪ್ರತಿಭಾ ಗುರುರಾಜ್ (ಐದನೇ) ಬಹುಮಾನಗಳನ್ನು ಪಡೆದರು.

ವಿಜೇತರನ್ನು ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್ ಸನ್ಮಾನಿಸಿದರು. ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ ಮಾತನಾಡಿ, ಗಣೇಶನ ಹಬ್ಬ ಆಚರಣೆಯಿಂದ ಭಾವೈಕ್ಯತೆ ಬಿತ್ತುವ ಜೊತೆಗೆ ಒಗ್ಗಟ್ಟು ಮೂಡುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಕರ್ನಾಟಕ ವಿಪ್ರ ವೇದಿಕೆ ಸಂಚಾಲಕಿ ಸ್ವಾತಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್‌ಶಾಸ್ತ್ರಿ, ಮುಖಂಡರಾದ ವಿನಯ್ ಕಣಗಾಲ್, ಸುಚೇಂದ್ರ, ಚಕ್ರಪಾಣಿ, ಪ್ರವೀಣ್ ಇನ್ನಿತರರು ಉಪಸ್ಥಿತರಿದ್ದರು.

ಎಐಎಡಿಎಂಕೆಯ ಪರಮೋಚ್ಛ ನಾಯಕ ಇ.ಪಳನಿಸ್ವಾಮಿ ಆಯ್ಕೆ ಸಿಂಧುಗೊಳಿಸಿದ ಹೈಕೋರ್ಟ್




ಚೆನ್ನೈ: ಎಐಎಡಿಎಂಕೆಯ ಪರಮೋಚ್ಛ ಮತ್ತು ಶಾಸಕಾಂಗ ಪಕ್ಷದ ನಾಯಕರಾಗಿ ಕೆ.ಪಳನಿಸ್ವಾಮಿ ಅವರ ಆಯ್ಕೆಯನ್ನು ಮದ್ರಾಸ್ ಹೈಕೋರ್ಟ್ ಶುಕ್ರವಾರ ಸಿಂಧುಗೊಳಿಸಿದೆ. ಪಕ್ಷದ ನಾಯಕತ್ವದ ವಿಚಾರದಲ್ಲಿ ಉದ್ಭವಿಸಿದ್ದ ವಿವಾದದಲ್ಲಿ ಪಕ್ಷದ ನಾಯಕ ಕೆ. ಪಳನಿಸ್ವಾಮಿ ಅವರ ಏಕ ನಾಯಕತ್ವ ಬೇಡಿಕೆಯ ಮನವಿಯನ್ನು ನ್ಯಾಯಮೂರ್ತಿ ಎಂ. ದುರೈಸ್ವಾಮಿ ಮತ್ತು ಸುಂದರ್ ಮೋಹನ್ ಅವರಿದ್ದ ವಿಭಾಗೀಯ ಪೀಠವು ಪುರಸ್ಕರಿಸಿದೆ. ಜುಲೈ 11ರಂದು ನಡೆದ ಪಕ್ಷದ ಸಾಮಾನ್ಯ ಮಂಡಳಿ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಕೆ. ಪಳನಿಸ್ವಾಮಿ ಅವರನ್ನು ಪಕ್ಷದ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ಉನ್ನತ ಹುದ್ದೆಗೆ ಆಯ್ಕೆ ಮಾಡಲಾಗಿತ್ತು.

1985ರಲ್ಲೇ ರಾಜೀವ್ ಗಾಂಧಿ ವಿಶ್ವ ನಾಯಕರಾಗಿದ್ದರು

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ವಿಜಯ್ ಕುಮಾರ್ ಸಮರ್ಥನೆ

ಮೈಸೂರು, ಸೆ.2(ಎಂಟಿವೈ)– ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿ ದೇಶದ ಜನರ ಹಿತ ಕಾಯುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರು 1995ರಲ್ಲೇ ವಿಶ್ವ ನಾಯಕರೆಂಬ ಹೆಗ್ಗಳಿಕೆ ಗಳಿಸಿಕೊಂಡಿದ್ದರು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ರಾಜೀವ್ ಗಾಂಧಿ ಪಂಚಾಯತ್ ಜಿಲ್ಲಾ ಸಂಘಟನೆಯ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಬಿಜೆಪಿ ಕಾರ್ಯಕರ್ತರು ಈಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಶ್ವನಾಯಕರೆಂದು ಕರೆಯುತ್ತಿದ್ದಾರೆ. ಆದರೆ, ದಿ.ರಾಜೀವ್ ಗಾಂಧಿ ಅವರು 1995ರಲ್ಲೇ ವಿಶ್ವನಾಯಕನೆಂದು ಕೀರ್ತಿ ಗಳಿಸಿದ್ದರು. ಮೋದಿ ಅವರ ಮಂಗಳೂರು ಭೇಟಿಯನ್ನು ವಿಶ್ವ ನಾಯಕನ ಬೇಟಿ ಎಂದು ಬಿಂಬಿಸುತ್ತಿರುವುದು ಹಾಸ್ಯಾಸ್ಪದ ಎಂದರು.

ವಿಶ್ವಸಂಸ್ಥೆಯಲ್ಲಿ ಶಾಂತಿ ಪಡೆ ಸ್ಥಾಪನೆಗೆ ಪ್ರಮುಖ ಕಾರಣ ರಾಜೀವ್ ಗಾಂಧಿ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ನಡುವೆ ರಾಜಕೀಯ, ಆರ್ಥಿಕ ಸಂಘರ್ಷಗಳು ಉಂಟಾದಾಗ ನಿಯಂತ್ರಿಸಲು ಶಾಂತಿ ಪಡೆ ಅಗತ್ಯತೆಯನ್ನು ಪ್ರತಿಪಾದಿಸಿದ್ದರು. ಇದರಿಂದ ಸಂಘರ್ಷದ ಕಾಲದಲ್ಲಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಸೇನಾ ಪಡೆ ಕಳುಹಿಸಲು ಸಾಧ್ಯವಾಯಿತು. ಶ್ರೀಲಂಕಾದ ಆಂತರಿಕ ವಿಚಾರದಲ್ಲಿ ಮಧ್ಯಪ್ರವೇಶ ಮಾಡದಿದ್ದರೆ ರಾಜೀವ್ ಗಾಂಧಿ ದುರಂತ ಅಂತ್ಯ ಕಾಣುತ್ತಿರಲಿಲ್ಲ. ಸಿಂಹಳಿಯರು–ತಮಿಳರ ನಡುವೆ ಸಂಘರ್ಷ ಏರ್ಪಟ್ಟಾಗ, ಶ್ರೀಲಂಕಾದ ವಿರುದ್ಧ ಎಲ್‌ಟಿಟಿಇ ಪ್ರಭಾಕರನ್ ತೊಡೆ ತಟ್ಟಿ ಯುದ್ಧಕ್ಕೆ ನಿಂತರು. ಶಾಂತಿ ಪಡೆ ಸ್ಥಾಪನೆಗೆ ಕಾರಣರಾದ ರಾಜೀವ್‌ಗಾಂಧಿ, ಶ್ರೀಲಂಕಾಕ್ಕೆ ಸೇನೆ ಕಳುಹಿಸಿದ ಪರಿಣಾಮವಾಗಿ ಎಲ್‌ಟಿಟಿಇ ರಾಜೀವ್ ಗಾಂಧಿ ಮುಗಿಸಲು ಸಂಚು ಹೂಡಿತು ಎಂದರು.

ದೇಶ ಸ್ವಾತಂತ್ರ್ಯಗೊಂಡ ದಿನದಿಂದಲೂ ಪಾಕಿಸ್ತಾನದೊಂದಿಗೆ ಭಿನ್ನಾಭಿಪ್ರಾಯ ಇದೆ. ಗಡಿ, ಕಾಶ್ಮೀರ ಹಾಗೂ ರಾಜಕಾರಣದಿಂದ ವಿರೋಧಿಸುತ್ತೇವೆ. ಆದರೆ, ಇವತ್ತು ಪಾಕಿಸ್ತಾನದ ಶೇ.60 ಭಾಗ ಅತಿಯಾದ ಮಳೆಯಿಂದ ಸಂಕಷ್ಟಕ್ಕೆ ಸಿಲುಕಿದೆ. ಚೀನಾದ ಬಂಡವಾಳಶಾಹಿ ಧೋರಣೆಯಿಂದ ಪಾಕಿಸ್ತಾನ ಜನತೆ ಕಷ್ಟದಲ್ಲಿದ್ದಾರೆ ಎಂದರು.

ಶಾಂತಿ ಸೌಹಾರ್ದತೆಗಾಗಿ ಶಾಂತಿ ಪಡೆ ಸ್ಥಾಪಿಸಿದ ರಾಜೀವ್ ಗಾಂಧಿ ಅಥವಾ ಸಂಕಷ್ಟದ ಕಾಲದಲ್ಲೂ ದ್ವೇಷ, ಅಸೂಯೆ ಮುಂದುವರಿಸುವ ಪ್ರಧಾನಿ ನರೇಂದ್ರ ಮೋದಿ ಇಬ್ಬರಲ್ಲಿ ಯಾರು ಗ್ರೇಟ್? ಯಾರು ವಿಶ್ವನಾಯಕ ಎಂಬುದನ್ನು ಜನರು ಅರಿಯಬೇಕು. ಕಾಂಗ್ರೆಸ್ ಯಾವತ್ತೂ ಮಾನವೀಯತೆ ಪರವಾಗಿ ಇದೆ ಎಂದು ಹೇಳಿದರು.

ರಾಜೀವ್ ಗಾಂಧಿ ಪಂಚಾಯತ್ ರಾಜ್ ಘಟಕದ ಜಿಲ್ಲಾಧ್ಯಕ್ಷ ಬಿ.ಮಲ್ಲೇಶ್ ಕೋಟೆ ಮಾತನಾಡಿ, ಪಕ್ಷದ 17 ಘಟಕಗಳಿಗಿಂತಲೂ ಪಂಚಾಯತ್ ರಾಜ್ ಘಟಕ ಶಕ್ತಿಯುತವಾಗಿದೆ. ಮುಂಬರುವ ಚುನಾವಣೆಯಲ್ಲಿ ಪಂಚಾಯತ್ ರಾಜ್ ಘಟಕ ಮುಂಚೂಣಿಯಲ್ಲಿರಬೇಕು. ಆ ರೀತಿ ಕೆಲಸ ಮಾಡಬೇಕು. ರಾಜೀವ್ ಗಾಂಧಿ ಗ್ರಾಮಾಭಿವೃದ್ಧಿ ಕನಸು ನನಸು ಮಾಡಲು ಶ್ರಮಿಸಬೇಕು. ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

> ದೇಶ ಸ್ವಾತಂತ್ರ್ಯಗೊಂಡ ದಿನದಿಂದಲೂ ಪಾಕಿಸ್ತಾನದೊಂದಿಗೆ ಭಿನ್ನಾಭಿಪ್ರಾಯ ಇದೆ. ಗಡಿ, ಕಾಶ್ಮೀರ ಹಾಗೂ ರಾಜಕಾರಣದಿಂದ ವಿರೋಧಿಸುತ್ತೇವೆ. ಆದರೆ, ಇವತ್ತು ಪಾಕಿಸ್ತಾನದ ಶೇ.60 ಭಾಗ ಅತಿಯಾದ ಮಳೆಯಿಂದ ಸಂಕಷ್ಟಕ್ಕೆ ಸಿಲುಕಿದೆ. ಚೀನಾದ ಬಂಡವಾಳಶಾಹಿ ಧೋರಣೆಯಿಂದ ಪಾಕಿಸ್ತಾನ ಜನತೆ ಕಷ್ಟದಲ್ಲಿದ್ದಾರೆ ಎಂದರು.
> -ಡಾ.ಬಿ.ಜೆ.ವಿಜಯ್‌ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ಇದೇ ವೇಳೆ ವಿವಿಧ ಹುದ್ದೆಗಳಿಗೆ ಆಯ್ಕೆಯಾದ 30 ಮಂದಿಗೆ ಆಯ್ಕೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಹೆಡತಲೆ ಮಂಜುನಾಥ್, ಗೋವಿಂದಸ್ವಾಮಿ, ಶ್ರೀನಿವಾಸಮೂರ್ತಿ, ಮಂಜುನಾಥ್, ಗುರುಪ್ರಸಾದ್, ನವೀನ್, ಲಕ್ಷ್ಮಣ್, ಡಿ.ಎಂ.ರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮುರುಘಾಶ್ರೀ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣ

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಕೋಟೆ, ಹುಣಸೂರಲ್ಲಿ ಪ್ರತಿಭಟನೆ





ಹೆಚ್.ಡಿ.ಕೋಟೆ/ಹುಣಸೂರು, ಸೆ.2– ಅಪ್ರಾಪ್ತ ಬಾಲಕಿಯರ ಮೇಲೆ ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿ ಹೆಚ್.ಡಿ. ಕೋಟೆಯಲ್ಲಿ ದಲಿತ ಸಂಘರ್ಷ ಸಮಿತಿ ಹಾಗೂ ಹುಣಸೂರಿನಲ್ಲಿ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟಿಸಲಾಯಿತು.

ಹೆಚ್.ಡಿ.ಕೋಟೆ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಮುರುಘಾಶ್ರೀಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ದೇಶದಲ್ಲಿ ಅತ್ಯಾಚಾರ ಪ್ರಕರಣ ಹೆಚ್ಚಾಗುತ್ತಿದ್ದು, ಹೆಣ್ಣು ಮಕ್ಕಳು ಆತಂಕದಲ್ಲಿ ದಿನ ದೂಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುರುಘಾಶ್ರೀಗಳ ವಿರುದ್ಧ ಪ್ರಕರಣ ದಾಖಲಾಗಿ ಅವರನ್ನು ಬಂಧಿಸಿದ್ದರೂ, ಸ್ವಾಮೀಜಿ ರಕ್ಷಿಸಿ, ಪ್ರಕರಣ ಮುಚ್ಚಿ ಹಾಕುವ ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಇದೇ ವೇಳೆ ಪ್ರತಿಭಟನಾಕಾರರು ತಹಸೀಲ್ದಾರ್ ರತ್ನಾಂಬಿಕಾ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಿಪಿಎಂನ ಅಕ್ಬರ್ ಪಾಷ, ತಾಲೂಕು ದಸಂಸ ಸಂಚಾಲಕ ಮುತ್ತು, ಜಿಲ್ಲಾ ಸಂಘಟನಾ ಸಂಚಾಲಕ ನಿಂಗರಾಜು, ದೇವರಾಜು, ರಾಜಶೇಖರ, ರಾಜಣ್ಣ, ಪುಟ್ಟಮಾದು, ಮಹದೇವು, ಮಂಜು, ಜಕ್ಕಹಳ್ಳಿ, ಸಿದ್ದಯ್ಯ, ಬಸವರಾಜು, ಮಲ್ಲೇಶ, ಬೆಟ್ಟಸ್ವಾಮಿ ಇದ್ದರು.

ಹುಣಸೂರು: ನಗರದ ಸಂವಿಧಾನ ವೃತ್ತದಲ್ಲಿ ಜಮಾಯಿಸಿದ ಸಿಪಿಎಂ, ಆದಿ ಜಾಂಬವ ಸಂಘ, ದಸಂಸ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು, ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು. ಅಲ್ಲದೇ ಬಲ್ಕಿಸ್ ಬಾನು ಪ್ರಕರಣದಲ್ಲಿ ಸಾಮೂಹಿಕ ಅತ್ಯಾಚಾರಿಗಳ ಬೆಂಬಲಕ್ಕೆ ನಿಂತ ಗುಜರಾತ್ ಸರ್ಕಾರದ ನಡೆ ಖಂಡಿಸಿ, ಬಲ್ಕಿಸ್ ಬಾನುಗೆ ನ್ಯಾಯ ಸಿಗಬೇಕು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಡಿ.ಜಿ.ಸಾಗರ್ ಬಣದ ದಸಂಸದ ಜಿಲ್ಲಾ ಸಂಚಾಲಕ ಕೃಷ್ಣ ಮಾತನಾಡಿ, ಅಪ್ರಾಪ್ತ ಬಾಲಕಿಯರ ಮೇಲೆ ಸ್ವಾಮೀಜಿ ಲೈಂಗಿಕ ದೌರ್ಜನ್ಯ ಎಸಗಿರುವುದು ಖಂಡನೀಯ. ಹೀಗಾಗಿ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ ಸ್ವಾಮೀಜಿಗೆ ಉಗ್ರ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿದರು.

ಇದೇ ವೇಳೆ ಸಿಪಿಎಂ ಮುಖಂಡ ವಿ.ಬಸವರಾಜು ಕಲ್ಕುಣಿಕೆ, ಪೀಸ್ ಕಮಿಟಿಯ ಮುದಾಸೀರ್, ಆದಿಜಾಂಬವ ಸಂಘದ ತಾಲೂಕು ಅಧ್ಯಕ್ಷ ಜೆ.ಮಹದೇವು, ಹಿರಿಯ ದಲಿತ ಮುಖಂಡ ವರದರಾಜು, ದಸಂಸ ತಾಲೂಕು ಸಂಚಾಲಕ ಕಿರಂಗೂರು ಸ್ವಾಮಿ, ದಲಿತ ಹಕ್ಕುಗಳ ಸಮಿತಿ ರಾಜೇಶ್, ರೈತ ಸಂಘದ ತಾಲೂಕು ಅಧ್ಯಕ್ಷ ಚಿಕ್ಕಣ್ಣ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಪಿಎಂ ಕಾರ್ಯದರ್ಶಿ ವೆಂಕಟೇಶ್, ದಸಂಸ ಮುಖಂಡರಾದ ರಾಮಕೃಷ್ಣ, ರಾಜು, ಸಿದ್ದೇಶ್, ಶಿವ ರಾಮು, ಮಹದೇವು, ದಸಂಸ ವಿಭಾಗೀಯ ಸಂಚಾಲಕ ದೇವರಾಜ್ ಮಲ್ಲಾಡಿ, ಕ್ರೈಸ್ತ ಸಂಘದ ಪಾ.ವೈ.ಕೆ ಸುರೇಶ್, ಪಬ್ಲಿಕ್ ಪೀಸ್ ಕಮಿಟಿಯ ಮುಜಾಮಿಲ್ ಖಾನ್, ಅಜೀಜ್, ಸೈಯದ್, ರಿಜ್ವಾನ್, ಜಬ್ಬಾರ್, ದಸಂಸ ಕಾಂತರಾಜು, ರತ್ನಮ್ಮ, ರಾಮಯ್ಯ, ತಾಲೂಕು ಮಹಿಳಾಧ್ಯಕ್ಷೆ ರುಕ್ಮಿಣಿ, ಸಂಚಾಲಕಿ ರಾಧಮ್ಮ, ರತ್ನಮ್ಮ, ರಾಮಯ್ಯ, ಪುಟ್ಟಮಾದಯ್ಯ, ಶಿವರಾಜು, ತಾಪಂ ಮಾಜಿ ಸದಸ್ಯ ನಾಗರಾಜು, ಸುಭೋದಿ ಸಹಕಾರ ಸಂಘದ ಅಧ್ಯಕ್ಷ ಕೃಷ್ಣ, ರಾಧಕೃಷ್ಣ, ಮಂಜು, ಅಶೋಕ್, ಪ್ರಕಾಶ್ ಸೇರಿದಂತೆ ಇನ್ನಿತರರಿದ್ದರು.

ಬಸ್ ಏಜೆಂಟರ ಸಂಘದಿಂದ ಶ್ರೀ ಗೌರಿ–ಗಣೇಶ ಪ್ರತಿಷ್ಠಾಪನೆ



ತಿ.ನರಸೀಪುರ ಸೆ.2– 27ನೇ ವರ್ಷದ ಶ್ರೀಗಣಪತಿ ಮಹೋತ್ಸವದ ಅಂಗವಾಗಿ ಬಸ್ ಏಜೆಂಟರ ಸಂಘದಿಂದ ಬುಧವಾರ ಸಂಜೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಶ್ರೀಗೌರಿ–ಗಣೇಶನನ್ನು ಪ್ರತಿಷ್ಠಾಪಿಸಲಾಯಿತು.

ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಖಾಸಗಿ ಬಸ್ ಮಾಲೀಕರ ಸಹಯೋಗದೊಂದಿಗೆ ಖಾಸಗಿ ಬಸ್ ಏಜೆಂಟರ ಸಂಘದಿಂದ ಹಮ್ಮಿಕೊಂಡಿದ್ದ ಶ್ರೀಗಣಪತಿ ಮಹೋತ್ಸವ ಶ್ರೀಗೌರಿ–ಗಣೇಶ ಪ್ರತಿಷ್ಠಾಪನೆಯೊಂದಿಗೆ ವಿದ್ಯುಕ್ತವಾಗಿ ಆರಂಭಗೊಂಡಿತು. ಅರ್ಚಕ ರಂಗನಾಥ ಹಾಗೂ ರಂಗು ತಂಡ ಮಂತ್ರೋಪದೇಶದೊಂದಿಗೆ ಶ್ರೀಗಣಪತಿ ಪ್ರತಿಷ್ಠಾಪನೆ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು. ಶ್ರೀ ಕೃಷ್ಣನ ಕೊರಳನ್ನು ಹಿಡಿದು ಸಂಗೀತ ಶಕ್ತನಾಗಿ ಎಲ್ಲರ ಗಮನ ಸೆಳೆಯುತ್ತಿರುವ ಶ್ರೀಸಿದ್ಧಿ ವಿನಾಯಕನ ಪ್ರತಿಷ್ಠಾಪನೆ ಬಳಿಕ ಮಹಾಮಂಗಳಾರತಿ ನೆರವೇರಿಸಲಾಯಿತು. ಇದೇ ವೇಳೆ ಗಣ್ಯರಿಗೆ ಹಾಗೂ ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು.

ಶ್ರೀಗೌರಿ–ಗಣೇಶ ಹಬ್ಬ ಹಿನ್ನೆಲೆಯಲ್ಲಿ ಖಾಸಗಿ ಬಸ್ ನಿಲ್ದಾಣವನ್ನು ಕೀರ್ತಿ ಸೌಂಡ್ಸ್ ಮತ್ತು ಲೈಟಿಂಗ್ಸ್ ಯುವಕರ ತಂಡ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿದ್ದರು.

ಜಿಲ್ಲಾ ಬಸ್ ಮಾಲೀಕರ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ವಿಠಲಮೂರ್ತಿ, ಸ್ವಾಮಿನಾಥಗೌಡ, ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಪ್ರಧಾನ ಕಾರ್ಯದರ್ಶಿ ರಾಜಣ್ಣ, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಸೋಮನಾಥಪುರ ಪಿಎಸಿಎಸ್ ಮಾಜಿ ಅಧ್ಯಕ್ಷ ಡಿ.ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಉಪನ್ಯಾಸಕ ಕುಮಾರಸ್ವಾಮಿ, ಬಿಪಿಎಸ್ ಜಿಲ್ಲಾಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ, ಸ್ಫಟಿಕ ವಿವಿಧೋದ್ದೇಶ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಕುಮಾರ, ಡೈರಿ ಮಾಜಿ ಅಧ್ಯಕ್ಷ ಬಿ.ಎಸ್. ಬಸಪ್ಪ, ಉದ್ಯಮಿ ಹೋಟೆಲ್ ರಾಜಣ್ಣ, ಮಹೇಶ, ಲೋಕೇಶ, ಶಿವಕುಮಾರ, ಕೀರ್ತಿ ಸೌಂಡ್ಸ್ ಮುದ್ದಣ್ಣ, ಏಜೆಂಟರಾದ ಜೆ. ರಮೇಶ, ಪಿ.ನಾಗರಾಜು, ಮಾದು, ನಾಗಲಿಂಗು, ಶಂಕರ, ಮಣಿ, ಶ್ರೀನಿವಾಸ್, ಕೆ.ಕುಮಾರ, ರೈಸ್ ನಾಗರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕೆ.ವಿ.ಶಿವಶಂಕರ, ರೈತ ಮೋರ್ಚಾ ಅಧ್ಯಕ್ಷ ಆರ್. ಶಿವಕುಮಾರ, ಗ್ರಾಪಂ ಮಾಜಿ ಸದಸ್ಯ ತೊಂಟೇಶ್, ಮುಖಂಡರಾದ ಸುಬ್ಬಣ್ಣ, ಮಂಜುನಾಥ್, ರಾಜೇಶ್ ಹಾಗೂ ಇನ್ನಿತರರಿದ್ದರು.

ಎಲ್ಲಾ ದಾನಗಳಿಗಿಂತ ರಕ್ತದಾನ ಶ್ರೇಷ್ಠ



ನಂಜನಗೂಡು, ಸೆ.2– ಎಲ್ಲಾ ದಾನಗಳಿಗಿಂತ ರಕ್ತದಾನ ಶ್ರೇಷ್ಠ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಗಿರಿಜಾ ಕಲ್ಯಾಣ ಮಂಟಪದಲ್ಲಿ ನಟ ಸುದೀಪ್ ಹುಟ್ಟುಹಬ್ಬದ ಅಂಗವಾಗಿ ರೋಟರಿ ಸಂಸ್ಥೆ ಸಹಯೋಗದೊಂದಿಗೆ ಸುದೀಪ್ ಅಭಿಮಾನಿ ಬಳಗ, ತಾಲೂಕು ಕಿಚ್ಚ ಸೇನಾ ಸಮಿತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಟ ಕಿಚ್ಚ ಸುದೀಪ್ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ರಕ್ತದಾನ ಶಿಬಿರ ಹಮ್ಮಿಕೊಂಡಿರುವುದು ಉತ್ತಮ ಬೆಳವಣಿಗೆ. ರಕ್ತದಾನದಿಂದ ಮನುಷ್ಯನ ಆರೋಗ್ಯ ವೃದ್ಧಿಯಾಗುವುದಲ್ಲದೇ ಮತ್ತೊಂದು ಜೀವ ಉಳಿಸಲು ಸಾಧ್ಯ ಎಂದರು. ನಟ ಸುದೀಪ್ ತಮ್ಮ ಪರಿಶ್ರಮ ಹಾಗೂ ಪ್ರತಿಭೆಯಿಂದ ಇಂದು ಉನ್ನತ ಸ್ಥಾನಕ್ಕೇರಿದ್ದಾರೆ ಎಂದ ಅವರು ಸುದೀಪ್ ಹೆಸರಿನಲ್ಲಿ ಸಮಾಜಮುಖಿ ಕೆಲಸ ಮಾಡುವ ಮೂಲಕ ಬಡವರಿಗೆ ನೆರವಾಗಿ, ಮುಖ್ಯವಾಗಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಎಂದು ಸುದೀಪ್ ಅಭಿಮಾನಿ ಬಳಗದವರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಜೀವಧಾರ ರಕ್ತ ನಿಧಿ ಕೇಂದ್ರದವರು ರಕ್ತ ಸಂಗ್ರಹಿಸಿದರು. ಸುದೀಪ್ ಅಭಿಮಾನಿ ಬಳಗದ ನೂರಾರು ಯುವಕರು ರಕ್ತದಾನ ಮಾಡಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಾಯಕ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜು, ರೋಟರಿ ಅಧ್ಯಕ್ಷ ವೆಂಕಟೇಶ್, ರೊ.ಸುಧೀಂದ್ರ, ಚಂದ್ರು, ತಾಪಂ ಮಾಜಿ ಸದಸ್ಯ ಶಿವಣ್ಣ, ನಗರಸಭಾ ಸದಸ್ಯೆ ವಸಂತ, ಚುಟುಕು ಸಾಹಿತ್ಯ ಅಧ್ಯಕ್ಷ ಕಳಲೆ ಜವರನಾಯಕ, ಮುಖಂಡರಾದ ಮಂಜುನಾಥ್, ಕಸಾಪ ಅಧ್ಯಕ್ಷೆ ಲತಾ, ಸುದೀಪ್ ಅಭಿಮಾನಿ ಬಳದ ಅಧ್ಯಕ್ಷ ರವಿ, ಶಿವಶಂಕರ್, ಹರೀಶ್, ಸೇರಿದಂತೆ ರೈತ ಮುಖಂಡರು ಉಪಸ್ಥಿತರಿದ್ದರು.

ರೈತರು ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಿ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಹಂಪಾಪುರ, ಸೆ.2– ರಾಸುಗಳಿಗೆ ಉತ್ತಮ ಆಹಾರ ನೀಡಿದರೆ ಮಾತ್ರ ಗುಣಮಟ್ಟದ ಹಾಲು ಪಡೆಯಲು ಸಾಧ್ಯ ಎಂದು ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.


ತಾಲೂಕಿನ ಪುರ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಚೇರಿ ಆವರಣದಲ್ಲಿ ಮೈಮುಲ್‌ನಿಂದ ನಡೆದ ಮೇವಿನ ಸಸಿ ವಿತರಣೆ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರಿಗೆ ಮೇವಿನ ಸಸಿ ವಿತರಿಸಿ ಅವರು ಮಾತನಾಡಿದರು. ಹಾಲಿನ ಉತ್ಪಾದಕರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಬೇಕು. ರಾಸುಗಳಿಗೆ ಉತ್ತಮ ಮೇವು ನೀಡಿದರೆ ಮಾತ್ರ ಉತ್ತಮ ಹಾಲು ನೀಡಲು ಸಾಧ್ಯ. ಇದನ್ನು ಎಲ್ಲರೂ ಮನದಲ್ಲಿಟ್ಟು ಕೊಂಡು ಹಾಲಿನ ಉತ್ಪಾದನೆ ಕಡೆಗೆ ಗಮನಹರಿಸಬೇಕು. ಇಲ್ಲವಾದಲ್ಲಿ ಗುಣಮಟ್ಟದ ಹಾಲು ಪೂರೈಸಲು ಸಾಧ್ಯ ವಾಗುವುದಿಲ್ಲ ಎಂದರು.

ಸಹಕಾರ ಕ್ಷೇತ್ರ ಮುಂದುವರಿದ ಕ್ಷೇತ್ರವಾಗಿದ್ದು, ರೈತರು, ಮಹಿಳೆಯರು ಸೇರಿದಂತೆ ಎಲ್ಲರಿಗೂ ಇದರಿಂದ ಅನುಕೂಲವಾಗುತ್ತಿದೆ. ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಮೂಲಕ ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗುತ್ತಿದೆ. ಹೀಗಾಗಿ ಎಲ್ಲರೂ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಬೇಕಿದೆ ಎಂದರು.

ಮೈಮುಲ್ ನಿರ್ದೇಶಕ ಕೆ.ಈರೇಗೌಡ ಮಾತನಾಡಿ, ಉತ್ಪಾದಕರು ಗುಣಾತ್ಮಕ ಹಾಲನ್ನು ಹೆಚ್ಚು ಉತ್ಪಾದಿಸಬೇಕು. ಮೇವಿನ ಗಿಡಗಳನ್ನು ಪೋಷಣೆ ಮಾಡಿ, ರಾಸುಗಳಿಗೆ ನೀಡಬೇಕು. ಹಂಪಾಪುರ ಹೋಬಳಿ ವ್ಯಾಪ್ತಿಯಲ್ಲಿ ಮೈಮುಲ್‌ನಿಂದ 5 ಸಾವಿರ ಮೇವಿನ ಸಸಿಗಳನ್ನು ವಿತರಿಸುತ್ತಿದ್ದೇವೆ. ಇದನ್ನು ಹಾಲಿನ ಉತ್ಪಾದಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಗ್ರಾಪಂ ಸದಸ್ಯ ಪಿ.ಕೆ.ಶಿವರಾಜು ಮಾತನಾಡಿದರು. ಮೈಮುಲ್ ಉಪವ್ಯವಸ್ಥಾಪಕ ಕರಿಬಸವರಾಜು, ಸಹಾಯಕ ವ್ಯವಸ್ಥಾಪಕ ಪ್ರಭುಶಂಕರ್, ಹಿರಿಯ ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಕೃಷಿ ಅಧಿಕಾರಿ ಪ್ರಫುಲ್ಲಾ, ಸಂಘದ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷೆ ಮಲ್ಲಿಗಮ್ಮ, ನಿರ್ದೇಶಕರಾದ ಸೌಭಾಗ್ಯ, ಆಶಾ, ಮಹದೇವಮ್ಮ, ರತ್ನಮ್ಮ, ಸುಂದ್ರಮ್ಮ, ಶೀಲಾ, ಡಿ.ಬಿ.ರಾಜಮ್ಮ, ಲೋಕಮಣಿ, ಕಾರ್ಯದರ್ಶಿ ಡಿ.ವಸಂತ, ಗ್ರಾಪಂ ಸದಸ್ಯರಾದ ಪಿ.ಕೆ.ಶಿವರಾಜು, ವೃಷಭೇಂದ್ರ, ಸೌಭಾಗ್ಯ ಸಿದ್ದರಾಜು, ಮುಖಂಡರಾದ ಮಿಲ್‌ಮಹದೇವಪ್ಪ ಗೌಡಿಕೆ ಶಿವರುದ್ರಪ್ಪ, ಪಿ.ಆರ್.ಸಿದ್ದರಾಮಪ್ಪ, ಮುದ್ದರಾಮಪ್ಪ, ಎವಿಎಸ್‌ಎಸ್‌ನ ನಿಂಗಣ್ಣಸ್ವಾಮಿ, ಬಿ.ಬಸವರಾಜು, ಶಿವು ಸೇರಿದಂತೆ ಮೈಮುಲ್‌ನ ಸಿಬ್ಬಂದಿಗಳು, ಗ್ರಾಮಸ್ಥರು ಹಾಜರಿದ್ದರು.

ಕರಡಿಲಕ್ಕನ ಏತ ನೀರಾವರಿ ಯೋಜನೆಗೆ ಚಾಲನೆ



ಬೆಟ್ಟದಪುರ, ಸೆ.2– ಕರಡಿಲಕ್ಕನ ಏತ ನೀರಾವರಿ ಯೋಜನೆಗೆ ಶುಕ್ರವಾರ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆಯಿಂದ ಈ ಭಾಗದ ಸುತ್ತಮುತ್ತಲ 70ಕ್ಕೂ ಹೆಚ್ಚು ಹಳ್ಳಿಗಳ ಸಾವಿರಾರು ರೈತರಿಗೆ ಅನುಕೂಲವಾಗಲಿದೆ. ಈ ಬಾರಿ ಸಮೃದ್ಧಿಯಾಗಿ ಮಳೆಯಾಗಿರುವ ಕಾರಣ ಏತ ನೀರಾವರಿಯಿಂದ ನೀರು ಹರಿಸಲಾಗುವುದು. ರೈತರು ಉತ್ತಮ ಬೆಳೆ ಬೆಳೆದು ಆರ್ಥಿಕವಾಗಿ ಸದೃಢರಾಗಬೇಕು ಎಂದರು.

ಆಕ್ರೋಶ: ಕರಡಿಲಕ್ಕನ ಏತ ನೀರಾವರಿ ಯೋಜನೆ ವ್ಯಾಪ್ತಿಯ ನಾಲೆಗಳಲ್ಲಿ ಹೂಳು ತುಂಬಿದೆ. ಅಲ್ಲದೇ ಗಿಡಗಂಡಿಗಳು ಬೆಳೆದುಕೊಂಡಿವೆ. ಅದನ್ನು ತೆರವುಗೊಳಿಸದೇ ನೀರು ಬಿಟ್ಟಿರುವುದರಿಂದ ನಾಲೆಯಲ್ಲಿ ನೀರು ಸರಾಗವಾಗಿ ಹರಿಯದ ಪರಿಣಾಮ ರೈತರಿಗೆ ತೊಂದರೆಯಾಗುತ್ತಿದೆ ಎಂದು ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ನವೀನ್ ಅವರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ತಾಪಂ ಇಓ ಕೃಷ್ಣಕುಮಾರ್, ಪಿಡಬ್ಲ್ಯುಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಜಯಂತ್, ಸರ್ವೇ ಇಲಾಖೆ ಪ್ರಕಾಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಯುವ ಮುಖಂಡ ವಿದ್ಯಾಶಂಕರ, ಸುಂದ್ರೇಗೌಡ, ಹಾರನಹಳ್ಳಿ, ಚಪ್ಪರದಳ್ಳಿ, ಚನ್ನಕೇಶವಪುರ, ಕಂಬ್ರಳ್ಳಿ ಸೇರಿದಂತೆ ಹತ್ತಾರು ಗ್ರಾಮಗಳ ರೈತರು ಇದ್ದರು.

ರೈತರು ಸಾಲ ಸೌಲಭ್ಯ ಸದುಪಯೋಗಪಡಿಸಿಕೊಳ್ಳಿ

ಯೂನಿಯನ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಕೆ.ಎಸ್.ಅನಂತ್



ತಿ.ನರಸೀಪುರ, ಸೆ.2– ಬ್ಯಾಂಕ್‌ನಿಂದ ಕೃಷಿ ಚಟುವಟಿಕೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದ್ದು, ರೈತರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಯೂನಿಯನ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಕೆ.ಎಸ್. ಅನಂತ್ ತಿಳಿಸಿದರು.

ಬಿಲಿಗೆರೆಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಯೂನಿಯನ್ ಬ್ಯಾಂಕ್ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಕೃಷಿ ಪಾಠಶಾಲಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬ್ಯಾಂಕುಗಳು ನೀಡುವ ಸಾಲ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಜೊತೆಗೆ ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳು ದೊರೆಯಲಿದ್ದು, ಬ್ಯಾಂಕುಗಳು ಹಾಗೂ ರೈತರು ಆರ್ಥಿಕಾಭಿವೃದ್ಧಿಯಲ್ಲಿ ಗಣನೀಯ ಸಾಧನೆ ಮಾಡಬಹುದು ಎಂದರು.

ಮೊದಲು ಬ್ಯಾಂಕುಗಳು ಕೇವಲ ರೈತರಿಗೆ ಮಾತ್ರ ಸಾಲ ನೀಡುತ್ತಿದ್ದವು. ಪ್ರಸ್ತುತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡುತ್ತಿದ್ದು, ಇದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಬಹುದು ಎಂದರು.

ಇದೇ ವೇಳೆ ಬ್ಯಾಂಕ್‌ನಲ್ಲಿ ಸಿಗಬಹುದಾದ ಕೃಷಿ ಸಾಲ, ಕೃಷಿ ಅಭಿವೃದ್ಧಿ ಸಾಲಗಳು, ಕೃಷಿಯೇತರ ಸಾಲಗಳು, ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸದ ಸಾಲಗಳು, ಗೋಲ್ಡ್ ಲೋನ್, ಇನ್ನು ಮುಂತಾದ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ವರುಣಾ ಕ್ಷೇತ್ರದ ನಿಕಟಪೂರ್ವ ಜೆಡಿಎಸ್ ಅಧ್ಯಕ್ಷ ತಾಯೂರು ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಬ್ಯಾಂಕ್‌ನ ಶಾಖಾ ಪ್ರಬಂಧಕ ಮಣಿ ಕುಮಾರ್, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಸಂಜೀವ ನಾಯಕ್, ಡೈರಿ ಅಧ್ಯಕ್ಷ ಮಂಟೇಲಿಂಗಪ್ಪ, ಬ್ಯಾಂಕ್ ಉಪ ವ್ಯವಸ್ಥಾಪಕಿ ಪಿ.ಶಾಲಿನಿ, ಶ್ರೀಶರಾವ್, ಗ್ರಾಪಂ ಸದಸ್ಯ ಗಿರೀಶ್, ಮಂಜು, ಶಾಲೆ ಮುಖ್ಯೋಪಾಧ್ಯಾಯ ಸಿದ್ದರಾಜು, ವಲಯ ಮೇಲ್ವಿಚಾರಕಿ ಪವಿತ್ರ, ಕೃಷಿ ಮೇಲ್ವಿಚಾರಕ ಟಿ.ಆರ್. ಕುಮಾರ್, ಬಿ.ಎಂ.ನಾಗೇಶ್ ಮತ್ತಿತರರಿದ್ದರು.

ಮೂಗೂರು ಕೆಪಿಎಸ್ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ಮೂಗೂರು, ಸೆ.2– ಶಾಲಾ ಮಟ್ಟದ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳು ಮಕ್ಕಳ ಬೌದ್ಧಿಕ ವಿಕಾಸಕ್ಕೆ ಸಹಕಾರಿ ಎಂದು ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆ ಮುಖ್ಯಸ್ಥೆ ರಾಜಶ್ರೀ ತಿಳಿಸಿದರು.

ಮೂಗೂರು ಕೆಪಿಎಸ್ ಬಾಲಕಿಯರ ಶಾಲಾವರಣದಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಗ್ರಾಪಂ ಉಪಾಧ್ಯಕ್ಷ ಮೋಹನ್ ಕುಮಾರ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕಲಿಕಾ ಹಂತದಲ್ಲಿ ಮಕ್ಕಳಲ್ಲಿ ಒಂದಲ್ಲ ಒಂದು ಕೌಶಲ್ಯ ಅವರಲ್ಲಿ ಅಡಗಿರುತ್ತದೆ. ಅದು ಮುಂದಿನ ದಿನಗಳಲ್ಲಿ ಹೊರಹೊಮ್ಮಲಿದೆ ಎಂದರು. ಸಿಆರ್‌ಪಿ ಶಿವರಾಜು ಮಾತನಾಡಿ, ಪ್ರತಿಭಾ ಕಾರಂಜಿಯಲ್ಲಿ 12 ಗ್ರಾಮದ ಶಾಲೆಯ 200 ಮಕ್ಕಳು 14 ವಿವಿಧ ಬಗೆಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು, ಶಿಕ್ಷಕರು ಹಾಗೂ ಪೋಷಕರು ಮಕ್ಕಳ ಸ್ಪರ್ಧೆಗೆ ಪ್ರೋತ್ಸಾಹ ನೀಡಬೇಕು ಎಂದರು. ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್, ಸಿದ್ದರಾಜು, ಸದಸ್ಯ ಎಂ.ಗಿರೀಶ್, ಗುರುಸ್ವಾಮಿ, ಭ್ರಮರಾಂಭ, ತಾಲೂಕು ನೌಕರರ ಸಂಘದ ನಿರ್ದೇಶಕ ಸೋಮಶೇಖರ್, ಜನಾರ್ಧನ್, ಶಂಕರೇಗೌಡ, ಸತೀಶ್, ಶಾಲೆ ಮುಖ್ಯ ಶಿಕ್ಷಕರು, ಪೋಷಕರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೋಬ್ರಾ (ತ): ಬೆ.10.15ಕ್ಕೆ, ಮ.1.45ಕ್ಕೆ, ಬೀಸ್ಟ್ (ಇಂ): ಸಂ.5.35ಕ್ಕೆ, ರಾ.7.50ಕ್ಕೆ, ಗಾಳಿಪಟ –2 (ಕ): ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ಇಂ): ಬೆ.11ಕ್ಕೆ, ತಿರುಚಿಟ್ರಂಬಲಂ (ತ): ಮ.1.15ಕ್ಕೆ, ನಚ್ಚತಿರಂ ನಗರಗಿರಧು (ತ): ಸಂ.4ಕ್ಕೆ, ಕಾರ್ತಿಕೇಯ 2(ತೆ): ರಾ.7.20ಕ್ಕೆ, ಲವ್ 360 (ಕ): ರಾ.10ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.9.55ಕ್ಕೆ, ಗಾಳಿಪಟ 2(ಕ): ಮ.1ಕ್ಕೆ, ಮ.3.55ಕ್ಕೆ, ಕೋಬ್ರಾ (ತ): ಸಂ.6.40ಕ್ಕೆ, ಪಲ್ತು ಜನ್ವರ್ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಗಾಳಿಪಟ 2 (ಕ): ಬೆ.11.35ಕ್ಕೆ, ರಾ.7.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಮ್ (ಇಂ): ಮ.1.30ಕ್ಕೆ, ಸಂ.4.20ಕ್ಕೆ, ರಂಗ ರಂಗ ವೈಭವಂಗ (ತೆ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕೋಬ್ರಾ (ಇಂ): ಬೆ.10ಕ್ಕೆ, ಮ.1.40ಕ್ಕೆ, ಸಂ.5.20ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಲವ್ 360 (ಕ): ಬೆ.11.20ಕ್ಕೆ, ಬೀಸ್ಟ್ (ಇಂ): ಮ.2.10ಕ್ಕೆ, ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಸಂ.4.30ಕ್ಕೆ, ಕೋಬ್ರಾ (ಇಂ): ರಾ.10ಕ್ಕೆ
ಸ್ಕ್ರೀನ್ 3	ಗಾಳಿಪಟ 2(ಕ): ಬೆ.10.45ಕ್ಕೆ, ಮ.1.45ಕ್ಕೆ, ಫ್ಯಾಂಟಸಿ (ಕ): ಸಂ.4.50ಕ್ಕೆ, ಪಲ್ತು ಜನ್ವರ್ (ಮ): ರಾ.7.40ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ರಾ.10.10ಕ್ಕೆ.
ಸ್ಕ್ರೀನ್ 4	ಬೀಸ್ಟ್ (ಇಂ): ಬೆ.10.50ಕ್ಕೆ, ಲವ್ 360 (ಕ): ಮ.1.10ಕ್ಕೆ, ಗಾಳಿಪಟ 2(ಕ): ಸಂ.4ಕ್ಕೆ, ರಾ.7.05ಕ್ಕೆ, ಸೀತಾರಾಮಂ (ತೆ): ರಾ.10.10ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ
ಸ್ಕ್ರೀನ್ 2	ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ
ಸ್ಕ್ರೀನ್ 3	ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
ಸ್ಕ್ರೀನ್ 4	ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಮ.2.55ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಫ್ಯಾಂಟಸಿ(ಕ): ಬೆ.11ಕ್ಕೆ, ಸರ್ವಸ್ಯ ನಾಟ್ಯಂ (ಕ): ಬೆ.10.10ಕ್ಕೆ, ತಾಜ್‌ಮಹಲ್ 2 (ಕ): ಮ.1.20ಕ್ಕೆ, ಕೋಬ್ರಾ (ತ): ಬೆ.11ಕ್ಕೆ, ಮ.2.40ಕ್ಕೆ, ಸಂ.6.20ಕ್ಕೆ, ರಾ.10ಕ್ಕೆ, ಕೋಬ್ರಾ (ತೆ): ಬೆ.11.15ಕ್ಕೆ, ಸಂ.6.05ಕ್ಕೆ, ಬೀಸ್ಟ್ (ಇಂ): ಬೆ.10.10ಕ್ಕೆ, ಮ.2.15ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಬೆ.10.45ಕ್ಕೆ, ಸಂ.4.30ಕ್ಕೆ, ಸೊಲೊಮಂಟೆ ತೇನೀಚಕಲ್ (ಮ): ರಾ.7.15ಕ್ಕೆ, ಸೀತಾರಾಮಂ (ಹಿಂ): ಮ.3.50ಕ್ಕೆ, ರಂಗ ರಂಗ ವೈಭವಂಗ (ತೆ): ಮ.3.15ಕ್ಕೆ, ರಾ.9.15ಕ್ಕೆ, ಪಲ್ತು ಜನ್ವರ್ (ಮ): ರಾ.9.45ಕ್ಕೆ, ಕಾರ್ತಿಕೇಯ–2 (ತೆ): ಬೆ.9.05ಕ್ಕೆ, ಮ.12.10ಕ್ಕೆ, ಲೈಗರ್ (ಹಿಂ): ಮ.3.20ಕ್ಕೆ, ತಿರುಚಿಟ್ರಂಬಲಂ (ತ): ಮ.12.25ಕ್ಕೆ, ಸಂ.6.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೈಗರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೋಬ್ರಾ (ತ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೋಬ್ರಾ (ತ)	4 ಪ್ರದರ್ಶನಗಳು
ಸಂಗಂ	
ರಂಗ ರಂಗ ವೈಭವಂಗ (ತೆ)	4 ಪ್ರದರ್ಶನಗಳು
ಲಿಡೋ	
ಧಮಾಕ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ತಿರುಚಿಟ್ರಂಬಲಂ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಕೋಬ್ರಾ (ತ)	4 ಪ್ರದರ್ಶನಗಳು



ನಂಜನಗೂಡು ತಾಲೂಕಿನ ಬಿಳುಗಲಿ ಗ್ರಾಮದಲ್ಲಿ ವಿನಾಯಕ ಗೆಳೆಯರ ಬಳಗದಿಂದ ಗೌರಿ–ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.



ಕಂಪಲಾಪುರದ ಹೆಗ್ಗೆರೆ ಭರ್ತಿಯಾದ ಹಿನ್ನೆಲೆ ಕರಕಂಠೇಶ್ವರ ದೇವಸ್ಥಾನಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆ ನಂತರ ಕೆರೆಗೆ ಬಾಗಿನ ಅರ್ಪಿಸಲಾಯಿತು. ಗ್ರಾಪಂ ಅಧ್ಯಕ್ಷೆ ಮಮತ, ಉಪಾಧ್ಯಕ್ಷ ರಾಮಲಿಂಗಂ, ಸದಸ್ಯರಾದ ರಾಣಿ, ಮಂಜು, ರವಿ, ಶ್ರೀಪತಿ, ಚಂದ್ರು, ಸೋಮು, ಸುಮ, ಶೀಲಾ, ಜಾನಕಿ, ಯಜಮಾನ್ ಸ್ವಾಮಿಗೌಡ, ಮುಖಂಡ ಪ್ರಕಾಶ್‌ಗೌಡ, ರಾಜೇಗೌಡ, ಮಹದೇವಣ್ಣ ಸೇರಿದಂತೆ ಗ್ರಾಮಸ್ಥರಿದ್ದರು.

ಸಿದ್ದಲಿಂಗಮ್ಮ ನಿಧನ



ತಿ.ನರಸೀಪುರ, ಸೆ.2– ತಾಲೂಕಿನ ಗೋಪಾಲಪುರ ನಿವಾಸಿ ಹಾಗೂ ಬಿಜೆಪಿ ಮುಖಂಡ ಬಿ.ರಾಜೇಂದ್ರ ಪ್ರಸಾದ್ ಅವರ ತಾಯಿ ಸಿದ್ದಲಿಂಗಮ್ಮ (85) ಶುಕ್ರವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12.30ಕ್ಕೆ ಗೋಪಾಲಪುರದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹರೀಶ್



ಹುಣಸೂರು, ಸೆ.2– ನಗರದ ಕಲ್ಕುಣಿಕೆ ಪೊಲೀಸ್ ಕ್ವಾಟರ್ಸ್ ನಿವಾಸಿ, ಕಂದಾಯ ಇಲಾಖೆ ನಿವೃತ್ತ ನೌಕರ ಶಂಕರಪ್ಪ ಅವರ ಪುತ್ರ ಹರೀಶ್(56) ಶುಕ್ರವಾರ ನಿಧನರಾದರು. ಮೃತರು ತಂದೆ, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ಲಿನಿಕ್ ಬಾಡಿಗೆಗಿದೆ

HUDCO ಬನ್ನಿಮಂಟಪದಲ್ಲಿ ಸುಸಜ್ಜಿತವಾದ, ಚಾಲನೆಯಲ್ಲಿರುವ, ವಿಶಾಲವಾದ ಎಲ್ಲಾ ಸೌಕರ್ಯಗಳೊಂದಿಗೆ, ಕ್ಲಿನಿಕ್ ಬಾಡಿಗೆಗೆ/ ಮಾರಾಟಕ್ಕೆ ಲಭ್ಯವಿದೆ. ಆಸಕ್ತ ವೈದ್ಯರು ಸಂಪರ್ಕಿಸಿ

8217412386
9880862527

OWN A PROPERTY IN TOWNSHIP

INDIAN ESTATE Crystal City

Just 1.5 Km from Kuvempunagar

35 Acres Development with International Standard Infrastructure

30x40, 30x50, 40x60, 50x80 Sites

2 BHK, 3 BHK Villas and Apartments

Contact: 1800-12345-85

Brand New & Fully Furnished 3 BHK FLAT AVAILABLE FOR SALE

Ground Floor-Area 2150 Sft.,

Having latest amenities like Swimming Pool, Gym, Children Play Area & Party Hall,
Spacious 2 Car parking space.
Gated Community with 24 Hr Power Backup
Location: Blue bells Apartment
Vijayanagar 3rd Stage, Behind Roost Hotel, Mysore.

Interested parties please contact:
9741916989 / 9845499709

INVEST INTO PACKED FOOD BUSINESS

and Earn 15 percent per annum.
Contact: Mysuru Madike
Ph: 9980932425

ಹೊಸ ಸ್ಟಾಕ್‌ಗಳೊಂದಿಗೆ ಮಾರಾಟ 2 ಸ್ಥಳಗಳಲ್ಲಿ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಶೂಸ್

100% ಅಸಲಿ ಬ್ರಾಂಡ್‌ನ ಉಡುಪುಗಳು ಮತ್ತು ಶೂಗಳು

100000 ವಿವಿಧ ಬಗೆಯ (ವೆರೈಟಿ) ಕಂಪನಿಗಳ ಉಡುಪುಗಳನ್ನು ನೇರ ಮಾರಾಟ ಮಾಡಲಾಗುತ್ತದೆ

ಪುರುಷರ ಟಿ ಶರ್ಟ್ಸ್, ಶರ್ಟ್ಸ್, ಪ್ಯಾಂಟ್ಸ್, ಜೀನ್ಸ್, ಜಾಕೆಟ್ಸ್, ಲೋವರ್ ಬರ್ಮುಡ, ಸ್ವೆಟರ್ಸ್ ಇತ್ಯಾದಿ. ಮಹಿಳೆಯರ ಬ್ರಾಂಡೆಡ್ ಟಾಪ್ಸ್, ಕುರ್ತಿ, ಪಲಾಜೊ, ಸ್ಕರ್ಟ್ಸ್, ನೈಟ್‌ಗೌನ್, ಟ್ರ್ಯಾಕ್ ಪ್ಯಾಂಟ್, ಶರ್ಟ್ಸ್, ಟಿ ಶರ್ಟ್ಸ್, ಜಿಮ್ ಪ್ಯಾಂಟ್, ಬ್ರಾ, ಪ್ಯಾಂಟಿ ಹಾಗೂ ಕಾಲೇಜ್ ಬ್ಯಾಗ್ಸ್, ಆಫೀಸ್ ಬ್ಯಾಗ್ಸ್, ಲ್ಯಾಪ್‌ಟಾಪ್ ಬ್ಯಾಗ್ಸ್, ವ್ಯಾನಿಟಿ ಬ್ಯಾಗ್ಸ್, ಬೆಲ್ಟ್ಸ್ ಹಾಗೂ ಕಾಸ್ಮೆಟಿಕ್ಸ್ ಬಾರಿ ಕಡಿಮೆ ದರದಲ್ಲಿ ಲಭ್ಯ

ಮಾರಾಟ 5 ದಿನಗಳು ಮಾತ್ರ ಸೆಪ್ಟೆಂಬರ್ 03, 04, 05, 06 & 07, 2022

ಪುರುಷರ EXCALIBUR LOTTO Raymond GUESS Being human

ಎಂಆರ್‌ಪಿ 2000 ಬೆಲೆ ಬಾಳುವ ಟಿ–ಶರ್ಟ್ಸ್, ಶರ್ಟ್, ಜಾಕೆಟ್ & ವಿಂಡ್‌ಚೀಟರ್ **ಕೇವಲ ರೂ. 350 to 800**

ಮಹಿಳೆಯರ VERO MODA MANGO W BIBA UNITED COLORS OF BENETTON

ಎಂಆರ್‌ಪಿ 1000–1500 ಬೆಲೆ ಬಾಳುವ ಟಾಪ್, ಫ್ರಾಕ್, ಕುರ್ತಿ, ಪಲಾಝೋ, ಸ್ಕರ್ಟ್ಸ್, ನೈಟ್ ಗೌನ್ **ಕೇವಲ ರೂ. 250 to 500**

FLYING MACHINE INDIAN TERRAIN ARROW parx PARK AVENUE ColorPlus — ಎಂಆರ್‌ಪಿ ರೂ. 2000/– ರಿಂದ 3000/– ಪುರುಷರ ಶರ್ಟ್ಸ್ **ಕೇವಲ ರೂ. 700**

Pepe Jeans U.S. POLO ASSN. FLYING MACHINE Mast & Harbour HRX Roadster — ಎಂಆರ್‌ಪಿ ರೂ. 5000/– ಪುರುಷರ ಜೀನ್ಸ್ ಪ್ಯಾಂಟ್ **ಕೇವಲ ರೂ. 650 to 1000**

UNITED COLORS OF BENETTON HRX Roadster — ಎಂಆರ್‌ಪಿ ರೂ. 5000/– ಸ್ವೆಟರ್ಸ್ & ಫುಲ್‌ಓವರ್ಸ್ **ಕೇವಲ ರೂ. 600 ಮಾತ್ರ**

PUMA SKECHERS adidas UNITED COLORS OF BENETTON SAY IT LOUD — ಕಾಲೇಜ್ ಬ್ಯಾಗ್ಸ್, ಆಫೀಸ್ ಬ್ಯಾಗ್ಸ್, ಲ್ಯಾಪ್‌ಟಾಪ್ ಬ್ಯಾಗ್ಸ್, ವ್ಯಾನಿಟಿ ಬ್ಯಾಗ್ಸ್ ಎಂಆರ್‌ಪಿ ರೂ. 2000/– ರಿಂದ 4000/– **ಕೇವಲ ರೂ. 400 to 800**

NIKE Timberland adidas ARROW Reebok WOODLAND PUMA GAS HRX Roadster — And many more brands

ಎಂಆರ್‌ಪಿ ರೂ. 8000/– ಬೆಲೆ ಬಾಳುವ ಸ್ಯಾಂಡಲ್ಸ್, ಚಪ್ಪಲ್ಸ್ & ಶೂಗಳು **ಕೇವಲ ರೂ. 450 to 2500**

enamor — ಬ್ರಾ, ಪ್ಯಾಂಟೀಸ್, ಟ್ರ್ಯಾಕ್ ಪ್ಯಾಂಟ್ಸ್, ಶರ್ಟ್ಸ್, ಟಿ–ಶರ್ಟ್ಸ್, ಟಾಪ್ಸ್, ಕೆಮಿಸೋಲ್, ನೈಟ್‌ವೇರ್, ಜಿಮ್ ಪ್ಯಾಂಟ್ಸ್ ಇತ್ಯಾದಿ } ಎಂಆರ್‌ಪಿ ರೂ. 1500/– **ಕೇವಲ ರೂ. 80 to 500**

ಸ್ಥಳ 1 : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕದಲ್ಲಿ, ಮೈಸೂರು

ಸ್ಥಳ 2 : ದಿ ನಂಜರಾಜ ಬಹದ್ದೂರ್ ಛತ್ರ
ಮೆಟ್ರೋಪೋಲ್ ಸರ್ಕಲ್ ಹತ್ತಿರ, ವಿನೋಬಾ ರಸ್ತೆ, ಮೈಸೂರು

Honnassiri Nissan India Pvt Ltd

No 193/5, Hunsur Main Road, Hinkal, Mysore-570017

REQUIREMENTS

1. Sales Consultant
Qualification : Degree/MBA in Marketing
Experience : 1 or 2 years/ Fresher (exp., in Automobile industry preferred)
Should have 2 wheeler & 4 wheeler License with Field Sales Experience

2. Customer Care Manager
Qualification : Any Degree
Experience : 2- 4 years (exp., in Automobile industry preferred)
Required Good Communication Skills.

3. Customer Care Executive
Qualification : PUC or Any Degree
Experience : 1 - 2 yrs/ Fresher (exp., in Automobile industry preferred)

4. Receptionist
Qualification : PUC or Any Degree
Experience : 1 - 2 years
Required Good Communication Skills

5. Service Advisor
Qualification : ITI or Diploma in Mechanical or Automobile
Experience : 2 - 4 years (exp., in Automobile industry preferred)

6. Technicians
Qualification : ITI in Automobile/Electrician/MMV/Diesel Mechanic
Experience : 1 - 4 years (exp., in Automobile industry preferred)

7. Accounts Executive
Qualification : B.Com/MBA in Finance
Experience : 1 - 2 years

8. Drivers
Should Have : 2 wheeler & 4 Wheeler License
Experience : 1 - 2 years

Walk in interview on 5th & 6th Sept-22. Timings 11am to 5pm

Contact Details - HR -Department -9632219419
Email Id:hrcorporate@honnasirimahindra.com

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email:ad@mysurumithra.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ಜಗನ್ನಾಥ ರಾವ್ ಹೆಚ್.ಕೆ ರವರ ಮಕ್ಕಳಾದ 1] ನಾಗರಾಜ್ ಹೆಚ್. ಜೆ. 2] ಹೆಚ್.ಜೆ. ಗುರುನಾಥ್ 3] ಬೃಂದ ಹೆಚ್.ಜಿ. ಮತ್ತು 4] ವಿನೇಶ್ ಎ.ಸಿ. ರವರುಗಳು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 5 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಕೃಷ್ಣಮೂರ್ತಿಪುರಂ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ [ಪ್ರಿನ್ಸ್ ಆಫ್ ವೇಲ್ಸ್ ರಸ್ತೆ] ಯಲ್ಲಿರುವ ಸ್ವತ್ತಿನ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ಈ ಕೆಳಕಂಡಂತಿದೆ:

ಸ್ವತ್ತಿನ ಸಂಖ್ಯೆ: 1492/3, 1492/4, 1492/5, CH-8/2 8/3, 8/4, ವಿಸ್ತೀರ್ಣ (ಅಡಿಗಳಲ್ಲಿ): ಪೂ–ಪ– 22 1/2, ಉ–ದ 37 1/2, ಚಕ್ಕುಬಂದಿ: ಪೂರ್ವ: ಹೆಚ್.ಜೆ. ಗುರುನಾಥ್ ರವರ ಸ್ವತ್ತು, ಪಶ್ಚಿಮ: ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಉತ್ತರ : ಶಾರದವಿಲಾಸ ರಸ್ತೆ, ದಕ್ಷಿಣ: ತಿರುಗಾಡುವ ಗಲ್ಲಿ.
ಮಾಲೀಕರು: ನಾಗರಾಜ್ ಹೆಚ್.ಜೆ

ಸ್ವತ್ತಿನ ಸಂಖ್ಯೆ: 1492/1 CH-08, ವಿಸ್ತೀರ್ಣ (ಅಡಿಗಳಲ್ಲಿ): ಪ– 22 1/2, ಉ–ದ 37 1/2 ಚಕ್ಕುಬಂದಿ: ಪೂರ್ವ: ಬೃಂದ ಹೆಚ್.ಜಿ & ವಿನೇಶ್ ಎ.ಸಿ. ರವರ ಸ್ವತ್ತು, ಪಶ್ಚಿಮ: ನಾಗರಾಜ್ ಹೆಚ್.ಜೆ ರವರ ಸ್ವತ್ತು , ಉತ್ತರ : ಶಾರದವಿಲಾಸ ರಸ್ತೆ, ದಕ್ಷಿಣ: ತಿರುಗಾಡುವ ಗಲ್ಲಿ. ಮಾಲೀಕರು: ಹೆಚ್.ಜೆ. ಗುರುನಾಥ್

ಸ್ವತ್ತಿನ ಸಂಖ್ಯೆ : 1492/2,CH-8/1, CH-8/A, ವಿಸ್ತೀರ್ಣ (ಅಡಿಗಳಲ್ಲಿ): ಪೂ–ಪ– 20 1/2, ಉ–ದ: 37 1/2, ಚಕ್ಕುಬಂದಿ: ಪೂರ್ವ: ತಿರುಗಾಡುವ ಗಲ್ಲಿ, ಪಶ್ಚಿಮ: ಹೆಚ್.ಜೆ. ಗುರುನಾಥ್ ರವರ ಸ್ವತ್ತು , ಉತ್ತರ : ಶಾರದವಿಲಾಸ ರಸ್ತೆ, ದಕ್ಷಿಣ: ತಿರುಗಾಡುವ ಗಲ್ಲಿ, ಮಾಲೀಕರು: ಬೃಂದ ಹೆಚ್.ಜಿ. & ವಿನೇಶ್ ಎ.ಸಿ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು,
ಎಸ್.ಎಲ್.ಡಿ. ಲಾ ಫರ್ಮ್ ನಂ. 1458/ಎ,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ,
ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪೊಲೀಸ್ ಸಹಕಾರ ಸಂಘ ನಿ. ಮೈಸೂರು ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ಷೆಡ್ಯೂಲ್ ಸ್ವತ್ತಿನ ಹಾಲಿ ಮಾಲೀಕರಾದ, ಶ್ರೀ .ಜಿ.ಗೌತಮ್ ಚಂದ್ ಜೈನ್ ಹಾಗೂ ಇವರ ಧರ್ಮಪತ್ನಿ, ಶ್ರೀಮತಿ .ಜಿ.ಅನಿತಾ ಚೌದರಿ ಜೈನ್ ಇವರಿಬ್ಬರ ವಾಸ ಮನೆ ನಂ 19, ಗೀತಾ ಮಂದಿರ ರಸ್ತೆ, 33 ಈಸ್ಟ್ ಕ್ರಾಸ್, ಅಶೋಕ ರಸ್ತೆ ಲಷ್ಕರ್ ಮೊಹಲ್ಲಾ ಮೈಸೂರು ನಗರ–570001 ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ /ವ್ಯಕ್ತಿಗಳಿಗೆ, ಸಂಘ, ಸಂಸ್ಥೆ ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ವಾಣಿವಿಲಾಸ ರಸ್ತೆಯಲ್ಲಿರುವ ನಿವೇಶನ ಸಂಖ್ಯೆ 42/3, ಹೊಸ ನಂಬರ್ 38, ಇದರ ವಿಸ್ತೀರ್ಣ (49+40 2/3)/2 ಅಡಿX(119+110) /2 ಅಡಿ, ಒಟ್ಟು ವಿಸ್ತೀರ್ಣ 5156 ಚದರ ಅಡಿ ಹಾಗೂ ಇದರ ಚಕ್ಕುಬಂದಿ–ಪೂರ್ವಕ್ಕೆ: ಶ್ರೀ ಕೆ.ಪಿ.ದೇವರಾಜೇ ಅರಸ್ ಮತ್ತು ಲಕ್ಷ್ಮಣರಾವ್ ರವರ ಸ್ವತ್ತು, ಪಶ್ಚಿಮಕ್ಕೆ : ಶ್ರೀ ಸುಬ್ಬರಾವ್ ರವರ ಸ್ವತ್ತು, ಉತ್ತರಕ್ಕೆ : ಮುನಿಸಿಪಲ್ ರಸ್ತೆ ಹಾಗೂ ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ 42/4.

ಸಹಿ/– ಡಿ.ಜಿ.ನಾಗೇಂದ್ರ ಪ್ರಸಾದ್, ವಕೀಲರು
ಕೆ.ಎ.ಆರ್ ಸಂಖ್ಯೆ 1609/2005,
ಕಛೇರಿ : ನಂ.405, 4ನೇ ಮುಖ್ಯ ರಸ್ತೆ ಸರ್ದಾರ್ ವಲ್ಲಭಭಾಯ್ ಪಾಟೀಲ್ ನಗರ, ಟಿ.ನರಸೀಪುರ ರಸ್ತೆ, ಲಲಿತಾದ್ರಿಪುರ ಅಂಚೆ, ಮೈಸೂರು – 570028. ಮೊಬೈಲ್ ನಂಬರ್: 9916139244. 9113641380

ದಿನಾಂಕ: 02.09.2022
ಸ್ಥಳ : ಮೈಸೂರು

NATIONAL & INTERNATIONAL BRANDED READYMADE GARMENTS BIGGEST DISCOUNT SALE UPTO 80%

ಮೊಟ್ಟ ಮೊದಲ ಭಾರಿಗೆ ಮೈಸೂರಿನಲ್ಲಿ ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್, ಫಾರ್ಮಲ್ ಶರ್ಟ್‌ಗಳು, ಕ್ಯಾಶುಯಲ್ ಶರ್ಟ್‌ಗಳು, ಆಫೀಸ್ ಮತ್ತು ಪಾರ್ಟಿ ವೇರ್ ಶರ್ಟ್‌ಗಳು, ಟಿ–ಶರ್ಟ್‌ಗಳು, ಲೋವರ್, ಬರ್ಮುಡಾಸ್, ಶಾರ್ಟ್ಸ್, ಟಾಪ್, ಕುರ್ತೀಸ್, ಲೇಡಿಸ್ ಜೀನ್ಸ್ ಪ್ಯಾಂಟ್, ಪುಲ್ಲೋವರ್, ಜಾಕೆಟ್‌ನ ಇನ್ನೂ ಹಲವು ವೈವಿಧ್ಯಗಳು ಮತ್ತು ವಿನ್ಯಾಸಗಳನ್ನು ಸ್ವಯಂ ಆಯ್ಕೆ ಮಾಡಿಕೊಳ್ಳಿ, ಕಿಡ್ಸ್ ವೇರ್ ಇತ್ಯಾದಿ ಒಂದೇ ಸೂರಿನಡಿ.

ಸಂಪೂರ್ಣ ಹೊಸ ಸ್ಟಾಕಿನೊಂದಿಗೆ ಮತ್ತು ಹೊಸ ವಿವಿಧ ಪ್ರಕಾರದ ಸೇಲ್ ಕೋನೆಯ 2 ದಿನಗಳು ಮಾತ್ರ 3 ಶನಿವಾರ & 4 ರವಿವಾರ

ಕಂಪನಿಯಿಂದ ನೇರವಾಗಿ ಗ್ರಾಹಕರಿಗೆ

ಸೇಲ್ @ ಹೋಟೆಲ್ ಸದರ್ನ್ ಸ್ಟಾರ್, ಮೈಸೂರುನಲ್ಲಿ

ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ

ಕೇವಲ ರೂ. 150/- ರಿಂದ 350/- ರವರೆಗೆ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ : MRP : 1499/- to 4999/-

25,000 ವಿವಿಧ ಪ್ರಕಾರದ ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೀಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ನೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ. ಶರ್ಟ್, ಟಿ–ಶರ್ಟ್ : ಪಾರ್ಟಿವೇರ್,ಬೆಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.

DANIEL HECHTER INDIAN TERRAIN ColorPlus IZOD SCULLERS Lee INDIGO NATION Pepe Jeans LONDON NETPLAY

Only in Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, 20,000 ವಿವಿಧ ಪ್ರಕಾರದ ಕುರ್ತಿ ಮತ್ತು ಪಶ್ಚಿಮಾತ್ಯ ಬಟ್ಟೆಗಳು

ಲೇಡಿಸ್ ಕುರ್ತಿಸ್ : ಮಲ್ಟಿಗ್ರೀನ್ ಕಾಟನ್ ಕುರ್ತೀಸ್, ವಿವಿಧ ಬಣ್ಣಗಳ ಕುರ್ತೀಸ್, ಎಕ್ಸ್‌ಲೆಂಟ್ ಪಾರ್ಟಿವೇರ್, ಕುರ್ತೀಸ್, ಎಂಬ್ರಾಯಡೆಡ್ ರಯಾನ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್–ಶಾರ್ಟ್ ಕುರ್ತೀಸ್ ಇತ್ಯಾದಿ. MRP Up to Rs. 4999/-

DNMX VERO MODA JACK & JONES BIBA AJIO ELINI abof avaasa

Now Sale Only in Rs. 200 /-, 400/- & 600/-

ಬಿಗ್ ಬ್ರಾಂಡ್ ಕಿಡ್ಸ್ ಮೇಳ MRP upto Rs.1999/-

1,000 ವಿವಿಧ ಪ್ರಕಾರದ ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ
ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ–ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಇತ್ಯಾದಿ

ಕೇವಲ ರೂ: 150/- ರಿಂದ 350/- ಮಾತ್ರ Size 1 Month to 12 Years

BIG OFFER : Rajasthani Royal Printed Bedsheets Pillow cover, Sofa cover etc

Note : 1 This sale is only for Retail customers Just for 2 days. 2 Wholesale Dealers will not be entertained. 3 We are selling on Such low prices just to collect cash.

ಸೇಲ್ ಕೋನೆಯ 2 ದಿನಗಳು ಮಾತ್ರ 3 ಶನಿವಾರ ಮತ್ತು 4 ರವಿವಾರ ಸೆಪ್ಟಂಬರ್ 2022 ಸಮಯ:10 am to 9 pm NO LUNCH BREAK



ಹೋಟೆಲ್ ಸದರ್ನ್ ಸ್ಟಾರ್
(ಹೋಟೆಲ್ ರಿಗಲೀಸ್)
13–14, ವಿನೋಭ ರೋಡ್, ಮೆಟ್ರೋಪಾಲಿ ಸರ್ಕಲ್ ಹತ್ತಿರ, ಮೈಸೂರು–570005

HOTEL SOUTHERN STAR (Hotel Regalis)
#13-14, Vinobha Road, Near Metropol Circle, Mysore - 570 005

FREE PARKING ENTRANCE

All Major Debit / Credit Cards.
Google Pay, PhonePe Accepted
As per Govt. Rules Please
Wear Mask & Maintain Scoial Distance